ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ
ಫೆಬ್ರವರಿ 2026 ಬೆಲೆ ರೂ. 20/-

SAPTHAGIRI(KANNADA)
SPIRITUAL ILLUSTRATED MONTHLY
Volume:05, Issue:7, Pages:56
February - 2026, Price Rs. 20/-



ಏನು ಬೇಡಲಿ ಎನ್ನ ದೇವನೆ ಸಾನುರಾಗದಿ ಎನ್ನ ಪಾಲಿಸೊ
ನಾನ ವಿಧ ವಿಧ ಸೌಖ್ಯ ನೀಡುವುದಿಹಪರಗಳಲಿ
ಶ್ರೀನಿವಾಸನೆ ನಿನ್ನ ದಾಸಗೆ ಏನು ಕೊರತಿಲ್ಲೆಲ್ಲಿ ನೋಡಲು
ನೀನೆನಿಂತೀವಿಧದಿ ಹೇಳಿಸು ಶೇಷಗಿರಿವಾಸ

- ಶ್ರೀ ಗುರುಜಗನ್ನಾಥದಾಸರು



# ಶ್ರೀನಿವಾಸ ಮಂಗಾಪುರಂ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**07-02-2026 ರಿಂದ**

**16-02-2026 ರ ವರೆಗೆ**

ಜಗತ್ಕಲ್ಯಾಣದಂಪತಿಗಳಾದ ಶ್ರೀ ಪದ್ಮಾವತಿ ಶ್ರೀನಿವಾಸರು ಇಂದಿಗೂ ನಿತ್ಯ ನೂತನ ವಧುವರರಾಗಿ ದರ್ಶನ ನೀಡುತ್ತಿರುವ ನಿತ್ಯ ಕಲ್ಯಾಣಪುರಂ ಶ್ರೀನಿವಾಸಮಂಗಾಪುರಂ! ತಿರುಪತಿಯಿಂದ ಹತ್ತು ಮೈಲಿ ದೂರದಲ್ಲಿರುವ ಕ್ಷೇತ್ರ ಶ್ರೀನಿವಾಸಮಂಗಾಪುರಂ. ಈ ಕ್ಷೇತ್ರದ ಉತ್ತರಕ್ಕೆ ಪರಮಪಾವನವಾದ ಶೇಷಾಚಲ ಶಿಖರಗಳು, ಚಂದ್ರಗಿರಿ ಕೋಟೆಯಲ್ಲಿ ವಾಸ್ತವ್ಯ ಹೂಡಿದ್ದ ವಿಜಯನಗರದರಸರು ಈ ಮಾರ್ಗವಾಗಿಯೇ ಬೆಟ್ಟವನ್ನು ಸೇರುತ್ತಿದ್ದರಂತೆ. ಪದ್ಮಾವತಿಯನ್ನು ಮದುವೆಯಾದ ಸ್ವಾಮಿ ಬೆಟ್ಟವನ್ನು ಸೇರುವ ಮೊದಲು ಈ ಗ್ರಾಮದಲ್ಲಿ ಸ್ವಲ್ಪ ಕಾಲ ತಂಗಿದ್ದನೆಂದು ಸ್ಥಳ ಪುರಾಣ ತಿಳಿಸುತ್ತದೆ. ಇಲ್ಲಿರುವ ಅರ್ಚಮೂರ್ತಿ ಕಲ್ಯಾಣ ವೆಂಕಟೇಶ್ವರಸ್ವಾಮಿ. ತಾಳ್ಳಪಾಕ ಅನ್ನಮಾಚಾರ್ಯರ ಮೊಮ್ಮೊಗ ಚಿನ್ನನ್ನ (ಚಿನ್ನ ತಿರುವೆಂಗಳನಾಥ) ಶ್ರೀನಿವಾಸಮಂಗಾಪುರಂನಲ್ಲಿರುವ ಕಲ್ಯಾಣವೆಂಕಟೇಶ್ವರ ಸ್ವಾಮಿಯವರ ಆಲಯವನ್ನು ಜೀರ್ಣೋದ್ಧಾರಗೊಳಿಸಿದರು. 26-04-1967 ರಂದು ಈ ಆಲಯವನ್ನು ತಿ.ತಿ.ದೇ., ಅನುಬಂಧ ಆಲಯವಾಗಿ ಸ್ವೀಕರಿಸಲಾಯಿತು. 1981 ರಿಂದ ಇಲ್ಲಿ ಅತ್ಯಂತ ವೈಭವವಾಗಿ ಬ್ರಹ್ಮೋತ್ಸವಗಳು ಪ್ರಾರಂಭವಾಯಿತು. ಇಲ್ಲಿ ಕಲ್ಯಾಣೋತ್ಸವ ನಡೆದ ನಂತರ ಇಲ್ಲಿ ಕೊಡುವ ಸ್ವಾಮಿಯವರ ಕಲ್ಯಾಣ ಕಂಕಣಗಳನ್ನು ಅವಿವಾಹಿತರು ಧರಿಸಿದರೆ ಅವರಿಗೆ ಅಲಸ್ಯವಿಲ್ಲದೆ ಶೀಘ್ರದಲ್ಲಿಯೇ ವಿವಾಹವಾಗುತ್ತದೆಂಬ ಭಕ್ತರ ವಿಶ್ವಾಸ.

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 07-02-2026 | ಶನಿವಾರ | -------------- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 08-02-2026 | ಭಾನುವಾರ | ತಿರುಚ್ಚಿ ಉತ್ಸವ , ಧ್ವಜಾರೋಹಣ | ದೊಡ್ಡಶೇಷವಾಹನ |
| 09-02-2026 | ಸೋಮವಾರ | ಚಿಕ್ಕಶೇಷವಾಹನ | ಹಂಸವಾಹನ |
| 10-02-2026 | ಮಂಗಳವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 11-02-2026 | ಬುಧವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 12-02-2026 | ಗುರುವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 13-02-2026 | ಶುಕ್ರವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 14-02-2026 | ಶನಿವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 15-02-2026 | ಭಾನುವಾರ | ರಥೋತ್ಸವ | ಅಶ್ವವಾಹನ |
| 16-02-2026 | ಸೋಮವಾರ | ಪಲ್ಲಕಿ ಉತ್ಸವ, ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |

# ಭಗವದ್ಗೀತೆ

ಅವಾಚ್ಯವಾದಾಂಶ್ಚ ಬಹೂನ್ ವದಿಷ್ಯಂತಿ ತವಾಹಿತಾಃ।
ನಿಂದಂತಸ್ತವ ಸಾಮರ್ಥ್ಯಂ ತತೋ ದುಃಖತರಂ ನು ಕಿಮ್ ॥



ನಿನ್ನ ಹಗೆಗಳು ನಿನ್ನ ತೋಳ ಬಲವನ್ನು ಹೀಯಾಳಿಸಿ ಆಡಬಾರದ ಕೆಟ್ಟ ಮಾತುಗಳನ್ನು ಆಡುವರು. ಅದಕ್ಕಿಂತ ಹೆಚ್ಚಿನ ದುಃಖ ಏನುಂಟು?

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -36)



ಬಾರೋ ಮನಕೆ ಹೇ ಶ್ರೀನಿವಾಸ।

ಬಾರೋ ಮನಕೆ ಹೇ ಶ್ರೀನಿವಾಸ ॥ಪ॥

ಪಾಪಿ ನಾನೆಂಬೆಯ ಶ್ರೀಪತಿ ನಿನ್ನ ನಾಮಕ್ಕೆ।

ಪೋಪದ ಪಾಪವ ಮಾಡಲಾಪನೆ ಎಂದಿಗೂ ॥1॥

ನೀನು ಕುಣಿಸಿದಂತೆ ನಾನು ಕುಣಿವೆನಯ್ಯಾ।

ಏನು ಇದಕೆ ಅನುಮಾನವಿಲ್ಲವೋ ದೇವ ॥2॥

ಸಿರಿಯಿಂದೊಪ್ಪುತ ಪರಿವಾರ ಸಹಿತಾಗಿ।

ವರದ ಗೋಪಾಲವಿಟ್ಠಲರಾಯ ಬೇಗ ॥3॥

- ಶ್ರೀ ಗೋಪಾಲವಿಠಲ ದಾಸರು



# ಈಶಾವಾಸ್ಯೋಪನಿಷತ್ತಿನ

## ಮಂತ್ರ -2

- ಓಂ ಪ್ರಕಾಶ್ ಭಟ್
94824 14444

**ಕುರ್ವನ್ನೇವೇಹ ಕರ್ಮಾಣಿ ಜಿಜೀವಿಶೇಚ್ಛತಂ ಸಮಾಃ।
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥2॥**

ಬಂದದ್ದರಲ್ಲಿ, ಇದ್ದುದರಲ್ಲಿ ಸಂತೃಪ್ತಿಯಿಂದ ಜೀವನ ಮಾಡು ಎಂದು ಸಂದೇಶ ನೀಡಿದೆ ಮೊದಲ ಶ್ಲೋಕ. ಎರಡನೇ ಶ್ಲೋಕದಲ್ಲಿ ಮನುಷ್ಯ ತನ್ನ ಜೀವನದಲ್ಲಿ ಹೇಗೆ ಕರ್ತವ್ಯನಿರತನಾಗಿರಬೇಕು ಎಂದು ತಿಳಿಸುತ್ತದೆ.

ಏನನ್ನೂ ಮಾಡದೆ, ಕರ್ತವ್ಯ ಇಲ್ಲದೆ ಬದುಕಲು ಸಾಧ್ಯವಿಲ್ಲ. ಬದುಕೇ ಒಂದು ಕ್ರಿಯೆ. ಅದು ನಿಷ್ಕ್ರಿಯೆ ಆಗಲು ಸಾಧ್ಯವಿಲ್ಲ. ಏನನ್ನಾದರೂ ಮಾಡಲೇ ಬೇಕು. ಏನನ್ನಾದರೂ ಮಾಡಲೇಬೇಕು ಎಂದಾಗ ಒಳ್ಳೆಯದನ್ನೇ ಮಾಡು ಎನ್ನುತ್ತದೆ ಉಪನಿಷತ್ತು. ಎಷ್ಟು, ಏನು ಮಾಡಬೇಕು ಅಂದರೆ 'ಜಿಜೀವಿಶೇತ್' ಎನ್ನುತ್ತದೆ ಉಪನಿಷತ್ತು. ಎಷ್ಟು ಕಾಲ ಬದುಕುತ್ತೇವೆಯೋ ಅಷ್ಟು ಕಾಲ ಒಳ್ಳೆಯ ಕರ್ಮವನ್ನು ಮಾಡುತ್ತಾ ಬದುಕಲು ಇಚ್ಛಿಸಬೇಕು. 'ಕುರ್ವನ್ನೇವೇಹ' ಮಾಡುತ್ತಲೇ ಇರಬೇಕು. ಯಾಕೆಂದರೆ ಎಲ್ಲಿಯವರೆಗೆ, ಎಷ್ಟು ಕಾಲ ನಮ್ಮ ಬದುಕು ಎಂದು ನಮಗೆ ಗೊತ್ತಿಲ್ಲ, ನಮ್ಮ ಕೈಯಲ್ಲಿಲ್ಲ. ಬದುಕಿನುದ್ದಕ್ಕೂ, ಬದುಕಿದ್ದಷ್ಟೂ ಕಾಲ, ಭಗವದರ್ಪಣ ಬುದ್ಧಿಯಿಂದ ನಮ್ಮ ನಮ್ಮ ಪಾಲಿನ ಕರ್ತವ್ಯ ಮಾಡುತ್ತಿರಬೇಕು. ಅಷ್ಟೇ ಅಲ್ಲ, 'ಶತಂ ಸಮಾಃ' ನೂರು ವರ್ಷ ಬದುಕಬೇಕು. ನಾವು ಪೂರ್ಣಾಯುಷ್ಯದ ಬದುಕನ್ನು ಬದುಕಬೇಕು. ಯಾವುದಕ್ಕೋಸ್ಕರ ಎಂದರೆ ನಮ್ಮ ನಮ್ಮ ಕರ್ತವ್ಯವನ್ನು ಪೂರ್ಣವಾಗಿ ಮಾಡುವುದಕ್ಕೆ. ಸಮಾಜಕ್ಕೆ ಹಾಗೂ ನಮ್ಮ ಆತ್ಮೋದ್ಧಾರಕ್ಕೆ ಉಪಯುಕ್ತವಾಗುವಂತೆ ನೂರು ವರ್ಷ ಬದುಕಬೇಕೆಂದು ಈ ಮಂತ್ರ ಹೇಳುತ್ತದೆ.

ಆದರೆ ಒಂದು ಎಚ್ಚರವಿರಬೇಕು, ಕರ್ಮ ಮಾಡುವಾಗ ನಾನು, ನನಗೋಸ್ಕರ ಎಂದು ಕರ್ಮ ಮಾಡುತ್ತಾ ಹೋದರೆ ಅದು ಜನ್ಮ, ಮತ್ತೊಂದು ಜನ್ಮಕ್ಕೆ ಕಾರಣವಾಗುತ್ತಾ ಕರ್ಮದ ಬಂಧನ ಆಗುತ್ತಾ ಹೋಗುತ್ತದೆ. ಈ ಕರ್ಮದ ಬಂಧನದಿಂದ ಬಿಡುಗಡೆಯಾಗಬೇಕು ಎಂದು ಶಾಸ್ತ್ರ ಹೇಳುತ್ತದೆ. ಅದು ಹೇಗೆ?

"ನಾಹಂ ಕರ್ತಾ ಹರಿಃ ಕರ್ತಾ" ಎಂದು ಯಾವಾಗ ಭಗವದರ್ಪಣ ಬುದ್ಧಿಯಿಂದ ಕರ್ಮ ಮಾಡಿ, ನಾನು ಮಾಡಿದ್ದೆಲ್ಲವೂ ನಿನಗೆ ಅರ್ಪಣೆ, ನಿನಗೆ ಅರ್ಪಿಸಿದ ಕರ್ಮ, ನನ್ನ ಮೂಲಕ ನೀನೇ ಮಾಡಿಸಿದ್ದು ಎಂದಾಗ ಆ ಕರ್ಮ ಬಂಧನ ಆಗುವ ಬದಲು, ಬಂಧನದಿಂದ ಬಿಡುಗಡೆ ಗೊಳಿಸಲು ಸಾಧನವಾಗುತ್ತದೆ.

ಕರ್ಮದ ಬಂಧನದಿಂದ ಬಿಡುಗಡೆಗೆ ಕರ್ಮವೇ ಸಾಧನ ಹೊರತು ಕರ್ಮವನ್ನು ಬಿಟ್ಟು, ದೂರವಾಗಲು ಸಾಧ್ಯವಿಲ್ಲ. ಕರ್ಮದಲ್ಲಿರುವ ಫಲಾಕಾಂಕ್ಷೆಯನ್ನು ಬಿಡುವುದರಿಂದ ಕರ್ಮತ್ಯಾಗ ಮಾಡಲು ಆಗುತ್ತದೆ ಹೊರತು ಕರ್ಮವನ್ನು ಮಾಡದೇ ಇರುವುದರಿಂದ ಅಲ್ಲ. ಹೀಗೆ ಮಾಡಿದರೆ ಕರ್ಮದ 'ಲೇಪ' ಆಗುವುದಿಲ್ಲ. ಇಲ್ಲಿ 'ನರೇ' ಎಂಬ ಶಬ್ದ ವಿಶೇಷಣವಿದೆ. 'ನರ' ಅಂದರೆ ಮನುಷ್ಯ ಮಾತ್ರ ಅರ್ಥ ಅಲ್ಲ. 'ನ' ನಿಷೇದಾರ್ಥಕವಾದದ್ದು. 'ರ' ಆನಂದವನ್ನು ಸೂಚಿಸುವ ಶಬ್ದ ಅಂದರೆ ಸುಖ ದುಃಖಮಿಶ್ರಿತವಾದ ಬದುಕು, ಕರ್ಮಮಯವಾದ ಬದುಕು. ಮೂಲದಲ್ಲಿ ಸುಖಸ್ವರೂಪಿಯಾಗಿ, ಅದನ್ನು ಮರೆತು ಕೇವಲ ಅಸುಖದಲ್ಲಿ ಬದುಕುತ್ತಿರುವ ಅಸಹಜವಾದ ದುಃಖವನ್ನು ತನ್ನದು ಎಂದು ಭ್ರಮಿಸಿ ಬದುಕುತ್ತಿರುವ ಬದ್ಧ 'ಜೀವ' ನೇ ನರ. ತಪ್ಪು ತಿಳಿವಳಿಕೆಯಿಂದ ಬಂಧನವಾಗಿದೆ. ಸರಿಯಾದ ತಿಳಿವಳಿಕೆಯಿಂದ ಕರ್ಮ ಮಾಡಿದರೆ ಅದೇ ನಮಗೆ ಮೂಲಸ್ವರೂಪಾನಂದ ಸುಖವನ್ನು ತೋರಿಸುತ್ತದೆ. ಇದನ್ನು ಬಿಟ್ಟು ಬೇರೆ ದಾರಿಯಿಲ್ಲ ಎಂದು ಉಪನಿಷತ್ತು ಎರಡನೆಯ ಮಂತ್ರದಲ್ಲಿ ಬಿಡುಗಡೆಯ ಮಹತ್ತ್ವವನ್ನು ತಿಳಿಸುತ್ತದೆ.



ತಿರುಮಲ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀವಿಶ್ವಾವಸು ನಾಮ ಸಂವತ್ಸರ ಮಾಘ - ಫಾಲ್ಗುಣ ಮಾಸ ಸಂಚಿಕೆ

ಸಂಪುಟ:05 ಫೆಬ್ರವರಿ - 2026 ಸಂಚಿಕೆ:07




ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

**ಪ್ರಕಾಶಕರು,ಸಂಪಾದಕರು,**
**ಪ್ರಧಾನ ಸಂಪಾದಕರು** (ಎಫ್.ಎ.ಸಿ)
ಡಾ॥ವಿ.ಜಿ.ಚೊಕ್ಕಲಿಂಗಂ,ಎಮ್.ಎ.ಪಿಎಚ್.ಡಿ.,
ಡಿಪ್.ಇನ್.ಜೆ.ಎಂ.ಸಿ

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್,ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.



**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ : 0877 - 2264543
: 0877 - 2264359
ಪ್ರಧಾನ ಸಂಪಾದಕರು : 0877 - 2264363



ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-



ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
editorsapthagiri@gmail.com
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333


ಸಪ್ತಗಿರಿ ಮಾಸ ಪತ್ರಿಕೆಯನ್ನು ವೀಕ್ಷಿಸಲು
**www.tirumala.org**
ಮೂಲಕ ಓದಬಹುದು.


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಪ್ರಧಾನ ಸಂಪಾದಕರು


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಓಂ ನಮೋ ಭಗವತೇ ರುದ್ರಾಯ | - ಹನುಮಂತ ಮ.ದೇಶಕುಲಕರ್ಣಿ | 07 |
| ಭೀಮನ ಅಪರಿಮಿತ ಶಕ್ತಿ | - ಬೇಲೂರು ರಾಮಮೂರ್ತಿ | 10 |
| ಸಮಸ್ತ ಲೋಕಂ ಶಂಕರಂ | - ವೇ.ವಿ.ಶಿವರಾಮ ಜೋಗಳೇಕರ | 13 |
| ತಿರುಮಳಿಶೈ ಆಳ್ವಾರ್ | - ಡಾ ॥ಎನ್.ಕೆ. ರಾಮಶೇಷನ್ | 16 |
| ತಿಲ್ಲೈತಿರುಚ್ಚಿತ್ತಿರಕೂಟಂ (ಚಿದಂಬರಂ) | - ಶ್ರೀಮತಿ ಸೂರ್ಯವಂಶಿ | 18 |
| ಹರಿಕಥಾಮೃತಸಾರ ಮಹಿಮೆ ಅಪಾರ | - ಶ್ರೀಮತಿ ಪ್ರಿಯಪ್ರಾಣೇಶ ಹರಿದಾಸ | 20 |
| ಮಿಡಿಗೇಶಿ ಶ್ರೀವೆಂಕಟೇಶ್ವರ ದೇವಾಲಯ | - ಕೆಂಗೇರಿ ಚಕ್ರಪಾಣಿ | 22 |
| ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ | - ದಿ॥ ಬಿ. ಎನ್. ಶ್ರೀನಿವಾಸನ್ | 24 |
| ಕೊರೆಯುವ ಚಳಿಯ ನಡುವೆ ಅಡಿ ಇಡುವ ಮಾಘಮಾಸ | - ಶ್ರೀಮತಿ ವಾರುಣಿ ಹೊನ್ನಾಳಿ | 31 |
| ಕರ್ನಾಟಕ ಭಕ್ತಿ ಸಾಹಿತ್ಯಕ್ಕೆ ಹರಿದಾಸರ ಕೊಡುಗೆ | - ನಾಗೇಂದ್ರ ಪ್ರಸಾದ್ | 36 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 40 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 42 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 38 |
| ರಾಶಿಫಲಗಳು | - ಶ್ರೀಮಾತಾ ಅನುಗ್ರಹ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಸತ್ಯದ ಮಾರ್ಗದಲ್ಲೇ ಸದಾ ಇರಬೇಕು | - ಎ.ಆರ್. ರಘುರಾಮ | 48 |
| ಚಿತ್ರಕಥೆ - ತಾಯಿಯ ಪ್ರೀತಿಯ ಮುಂದೆ ನಾವು ತಲೆ ಬಾಗಲೇಬೇಕು | - ಆರ್.ಕೆ.ವಿ | 52 |


**ಮುಖಚಿತ್ರ** - ಉಭಯದೇವಿಯರೊಂದಿಗೆ ಶ್ರೀ ಕಲ್ಯಾಣ ವೇಂಕಟೇಶ್ವರ ಸ್ವಾಮಿಯವರು, ಶ್ರೀನಿವಾಸಮಂಗಾಪುರಂ

**ಹಿಂಬದಿಚಿತ್ರ**- ಕುಲಶೇಖರ್ ಆಳ್ವಾರ್ (ಚಿತ್ರಕಲೆ-ಜಗದೀಶ್)

## ಸಂಪಾದಕೀಯ

# ಜೀವನಕ್ಕೆ ಅಗತ್ಯವಾದುದು

ಅನಾದಿ ಕಾಲದಿಂದಲೂ ಒಬ್ಬನೇ ಭಗವಂತ ಎಂಬ ದೃಢವಾದ ಭಾವನೆ ನಮ್ಮ ಭಾರತೀಯ ಸನಾತನ ಹಿಂದೂ ಧರ್ಮದಲ್ಲಿ ಬೇರುಬಿಟ್ಟಿದೆ. ಬಂಗಾರವೆಂಬ ಲೋಹ ಒಂದೇ ಆದರೂ ಅದರಿಂದ ತಯಾರಾಗುವ ಆಭರಣಗಳು ಬೇರೆ ಬೇರೆ! ಎಷ್ಟೇ ಆಭರಣಗಳನ್ನು ನೋಡಿದರೂ ಎಲ್ಲವೂ ಬಂಗಾರದ ರೂಪಗಳೇ ಆಗಿವೆ ! ಎಂಬ ಯೋಚನೆ ಹೇಗಿದೆಯೋ ಹಾಗೇ ಒಬ್ಬನೇ ಪರಮಾತ್ಮನಿಗೆ ಹಲವಾರು ನಾಮರೂಪಗಳು ಇವೆ. ಅದೇ ಲೋಕೋ ಭಿನ್ನ ರುಚಿ! ಉಪಾಸನಾ ಸಾಮರ್ಥ್ಯ ಇರುವವರು ಮಹಾಮಂತ್ರಗಳೊಂದಿಗೆ, ತಂತ್ರಗಳೊಂದಿಗೆ ಸಾಧನೆಗಳಲ್ಲಿ ಮುಳುಗಿದರೆ, ನಿರ್ಗುಣ ತತ್ವವನ್ನು ತಿಳಿಯಬಲ್ಲ ಯೋಗಿಗಳು ಅಂತರಂಗದಲ್ಲೇ ಭಗವಂತನನ್ನು ಕಾಣುತ್ತಾರೆ. ಪಂಡಿತರು ಮಹಾಶಬ್ದಗಳೊಂದಿಗೆ ಹೊಗಳಿದರೆ, ಸಾಮಾನ್ಯರು ಸಾಮಾನ್ಯವಾದ ಪದಬಳಕೆಯ ಮೂಲಕ ಹಾಡಿ ಹೊಗಳುತ್ತಾರೆ. ಎಲ್ಲರಿಗೂ ಉತ್ತರಿಸುವ ಭಗವಂತನು ಎಲ್ಲರಿಗಾಗಿ ಅನೇಕನಾಗಿದ್ದಾನೆ. ಇದು ನಮ್ಮ ಸನಾತನಧರ್ಮದ ಮೌಲಿಕ ಸ್ವರೂಪನಾಗಿದ್ದಾನೆ.

ಹಿಮವಂತನಿಂದ ಸೇತುವಿನವರೆಗೂ ಜ್ಯೋತಿರ್ಲಿಂಗವಾಗಿ ಜ್ಯೋತಿಯನ್ನು ಸ್ವೀಕರಿಸುವ ಸದಾಶಿವನು ವೇದಶಾಸ್ತ್ರಜ್ಞ ರುದ್ರಾಭಿಷೇಕಗಳಿಗೇ ಅಲ್ಲದೇ ಅತಿ ಸಾಮಾನ್ಯರು ಸಮರ್ಪಿಸುವ ನೀರಿನ ಧಾರೆಗೆ ಪರವಶಗೊಳ್ಳುತ್ತಾನೆ. ಅವರ "ಭಂಭಂ - ಭೋಲೇ ಹರಹರ ಮಹದೇವ" ಎಂಬ ಕೂಗಿಗೆ ಸಂಭ್ರಮಿಸುತ್ತಾನೆ. ಜೇಡ- ಸರ್ಪ- ಆನೆಗಳಿಗೆ ಮುಕ್ತಿಯನ್ನು ನೀಡಿ, ಅಮಾಯಕನಾದ ಕಣ್ಣಪ್ಪನನ್ನು ಅನುಗ್ರಹಿಸಿದ ಶ್ರೀಕಾಳಹಸ್ತೀಶ್ವರ, ನಂದನಾರರಿಗೆ ಮುಕ್ತಿಯನ್ನು ನೀಡಿದ ಚಿದಂಬರೇಶ್ವರನು, ಪ್ರೇಮಕ್ಕೆ ಬಡತನವಿಲ್ಲದ ಭಕ್ತಿ ಸಂಪನ್ನರಿಗೆ ಕೈವಲ್ಯವನ್ನು ಅನುಗ್ರಹಿಸುತ್ತಿದ್ದಾನೆ. ಪಂಡಿತರಿಂದ ಪಾಮರರವರೆಗೂ ಯೋಗಿಗಳಿಂದ ಹಿಡಿದು ಶ್ರಮಜೀವಿಗಳವರೆಗೂ, ವೇದವೇತ್ತರಿಂದ ಹಿಡಿದು ಬಡಬಗ್ಗರವರೆಗೂ ಎಲ್ಲಾ ರೀತಿಯ ಮನಸ್ಸುಳ್ಳ ಜನರಿಗೆ, ವಿಭಿನ್ನ ಅಭಿರುಚಿಯನ್ನು ಹೊಂದಿರುವವರಿಗೆ ಸರಿಹೊಂದುವಂತೆ ಅನೇಕ ರೀತಿಯ ಧರ್ಮರೀತಿಯನ್ನು ತಿಳಿಸಿ ಸಾವಿರ ಕೊಂಬೆಗಳಿಂದ ವಿಸ್ತರಿಸಿರುವ ಏಕ ಮಹಾವೃಕ್ಷವಾಗಿ ನಿಂತಿರುವ ಹಿಂದೂಚೈತನ್ಯ-ಈ ವೈವಿಧ್ಯವಾದ ಲಕ್ಷಣಗಳಿಂದಲೇ ಪ್ರಜೆಗಳ ಮನ್ನಣೆಯನ್ನು ಪಡೆಯುತ್ತಿದೆ. ಸ್ವರ್ಗದಲ್ಲೆಲ್ಲಾ ಉನ್ನತಿಯೊಂದಿಗೆ, ಭೂಮಿಗೆ ಸೇರಿದ ಎಲ್ಲಾ ಅಣುವಣುವಿನಲ್ಲೂ ನಮ್ಮ ಸಂಸ್ಕೃತಿಯಲ್ಲಿ ದೇವರು ಕಂಡು ಬರುತ್ತಾನೆ. ಇತರ ಲೋಕಗಳಲ್ಲೇ ಅಲ್ಲದೇ ಪ್ರತಿಯೊಂದು ಕಣಕಣದಲ್ಲೂ ಭಗವಂತನು ವ್ಯಾಪಿಸಿದ್ದಾನೆಂದು ನಮ್ಮವರು ದರ್ಶಿಸಿದ್ದಾರೆ.

ಪರಮಾತ್ಮನಾಗಿ ಕೇವಲ ಕೈಗೆಟುಕುವ ಹಂತದಲ್ಲಿ ಇರುವುದೇ ಅಲ್ಲದೇ, ಅವತಾರಪುರುಷನಾಗಿ ನಮ್ಮೊಂದಿಗೆ ಆಟವಾಡುತ್ತಾನೆ. ನಮ್ಮನ್ನು ರಕ್ಷಿಸುತ್ತಿದ್ದಾನೆ. ಬೆಜ್ಜ ಮಹಾದೇವಿ, ತಿನ್ನನ ಕಥೆಗಳು ನಮಗೆ ತಿಳಿದಿರುವುದೇ ಆಗಿದೆ. ಪರಮೇಶ್ವರ ಭಕ್ತಿ ಪ್ರಿಯತ್ವವೂ ತಿಳಿದಿರುವುದೇ ಆಗಿದೆ.

ಶಿವಾರಾಧನೆ ಭಕ್ತಿಗೆ, ಆತ್ಮಶುದ್ಧಿಗೆ ಲೋಕಕ್ಷೇಮಕ್ಕೆ ಒಂದು ಶಾಶ್ವತವಾದ ಮಾರ್ಗವಾಗಿದೆ. ಶಿವಾರಾಧನೆಯಲ್ಲಿ ಭಕ್ತಿ, ಜ್ಞಾನ ವೈರಾಗ್ಯ, ಸೇವಾಭಾವ ಎಲ್ಲವು ಮೇಳೈಸಿರುತ್ತದೆ. ಶಿವಾರ್ಚನೆಯಲ್ಲಿ ಉಪಯೋಗಿಸುವ ಬಿಲ್ವದಳಗಳು, ಗಂಗಾಜಲ, ಹಾಲು, ಜೇನು, ಧೂಪ, ದೀಪದಂತಹವನ್ನು ಸಮರ್ಪಿಸುವುದು ಭಕ್ತನ ಮನಸ್ಸಿನಲ್ಲಿ ಪವಿತ್ರತೆಯನ್ನು ತುಂಬುತ್ತದೆ. ಮಾಘಮಾಸದಲ್ಲಿ ಮುಖ್ಯವಾಗಿ ಶಿವರಾತ್ರಿಯ ಸಂದರ್ಭದಲ್ಲಿ ಜಾಗರಣೆಯನ್ನು ಮಾಡಿ, ಲಿಂಗಾಭಿಷೇಕ ಮಾಡುವುದು ಅತ್ಯಂತ ಪುಣ್ಯಕರವಾದ ಪೂಜೆ, ಶಿವನು ಸಮನ್ವಯಕ್ಕೆ ಪ್ರತೀಕವಾಗಿದ್ದಾನೆ. ಆತನಲ್ಲಿ ಇರುವ ಸೌಮ್ಯತೆ, ರೌದ್ರತೆ, ಕರುಣೆ, ನ್ಯಾಯ ಎಲ್ಲವೂ ಒಂದಕ್ಕೊಂದು ಸೇರಿಕೊಂಡಿವೆ. ಶಿವನು ಸಮಸ್ತ ಭೂತಜಾತಿಯನ್ನು ಸಮಾನವಾಗಿ ಕಾಣುತ್ತಾನೆ. ಶಿವನನ್ನು ಸ್ಮರಿಸುವುದಕ್ಕಿಂತಲೂ ಅನಂತತತ್ವವನ್ನು ಸ್ಮರಿಸುವುದು ಮುಖ್ಯವಾಗಿದೆ. ಶಿವನು ಅನುಗ್ರಹಿಸಿದರೆ ಜನ್ಮ ಬಂಧನವು ತೊಲಗಿ ಹೋಗುತ್ತದೆ. ಭಕ್ತಿ,ಕ್ಷಮೆ,ದಯೆ,ಧರ್ಮ,ತ್ಯಾಗದಂತಹಾ ಮೌಲ್ಯಗಳು ಶಿವಾರಾಧನೆಯ ಮೂಲಕ ನಮ್ಮ ಹೃದಯದಲ್ಲಿ ಶಾಶ್ವತವಾಗಿ ನಿಂತಿರುತ್ತವೆ. ಶಿವನ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿ ಕೊಂಡರೆ ಭೌತಿಕ ವಿಜಯಕ್ಕೆ ಅಲ್ಲದೇ ಆಧ್ಯಾತ್ಮಿಕ ಶಿಖರಗಳಿಗೂ ತಲುಪಬಹುದು. ಶಿವನ ಸೇವೆಯಿಂದಲೇ ಲೋಕಹಿತ, ಆತ್ಮಹಿತವು ಸಾಧ್ಯವಾಗುತ್ತದೆ. ಶಿವಾರಾಧನೆ ಭಕ್ತಿಗೆ ಪರಾಕಾಷ್ಟತೆ, ಜೀವನಕ್ಕೆ ಅನಿವಾರ್ಯವಾಗಿದೆ.



# ಓಂ ನಮೋ ಭಗವತೇ ರುದ್ರಾಯ

– ಹನುಮಂತ ಮ. ದೇಶಕುಲಕರ್ಣಿ
94803 64915

ಶಿವೋಪಾಸನೆ ಅತಿ ಪ್ರಾಚೀನ. ಋಗ್ವೇದದಲ್ಲಿ ಅಲ್ಲಲ್ಲಿ ರುದ್ರನ ಉಲ್ಲೇಖ ಬರುತ್ತದೆ. ರುದ್ರ ಸೂಕ್ತಗಳಿವೆ. ಯಜುರ್ವೇದದ ಒಂದು ಇಡೀ ಅಧ್ಯಾಯ **'ಶ್ರೀ ರುದ್ರಾಧ್ಯಾಯ'** ಎಂದು ಖ್ಯಾತ. ಇದು ಶಿವಾರ್ಚನೆಯ ಮಂತ್ರಗಳ ಸಂಗ್ರಹ. ಇದರಲ್ಲಿ ಶಿವನ ವಿಶ್ವವಿರಾಟ್ ಸ್ವರೂಪದ ವರ್ಣನೆಯ ಜತೆಗೆ ಅವನನ್ನು ಕಾಣುವ ಬಗೆಯನ್ನು ರಮಣೀಯವಾಗಿ ವರ್ಣಿಸಲಾಗಿದೆ.

ಪ್ರಪಂಚದ ಲಯಕರ್ತ ಈತ. ಶಾಂತ-ರೌದ್ರಗಳ ದ್ವಿ ಸ್ವರೂಪಿ. ತಮೋಗುಣದ ಪ್ರತೀಕವೂ, ಲಯಸುಳಿಯ ಕೇಂದ್ರವೂ ವಿಕರಣದ ಮತ್ತು ನಿಶ್ಶೇಷ ಲಯದ ಪ್ರತೀಕವೂ ಶಿವ. ಹುಟ್ಟಿದ್ದೆಲ್ಲವೂ ಮರಣ ಹೊಂದಲೇಬೇಕು. ಉತ್ಪತ್ತಿಯಾದುದೆಲ್ಲವೂ ವಿಘಟಿತವಾಗಬೇಕು,ನಾಶವಾಗಬೇಕು. ಇದು ಅಲಂಘ್ಯ ನಿಯಮ. ಈ ವಿಘಟನೆಯುಂಟು ಮಾಡುವ ತತ್ವವೇ ಶಿವತತ್ವ.

ಶಿವನು ತ್ರಿಲೋಕ ಸಂಚಾರಿ ಮತ್ತು ಬ್ರಹ್ಮಸ್ವರೂಪ ಎಂದು ಈ ಜಗತ್ತಿಗೆ ತೋರಿಸಲು ಭೂಮಿಯಿಂದ ಆಕಾಶದವರೆಗೆ ಎತ್ತರವಾಗಿ ಶಿವಲಿಂಗದ ರೂಪದಲ್ಲಿ ಜ್ಯೋತಿಯಾಗಿ ನಿಂತವ. ಶಿವನ ವಿಶೇಷ ಮಂತ್ರ **"ನಮಃ ಶಿವಾಯ"** ಇದಕ್ಕೆ ಪಂಚಾಕ್ಷರಿ ಮಂತ್ರ ಎನ್ನುವರು. ಈ ಮಂತ್ರದಲ್ಲಿ ಪೃಥ್ವಿ, ಆಪ್, ತೇಜ, ವಾಯು ಮತ್ತು ಆಕಾಶ ಎಂಬ ಪಂಚಭೂತಗಳು ಮತ್ತು ಗಂಧರಸ, ರೂಪ, ಸ್ಪರ್ಶ ಮತ್ತು ಶಬ್ದವೆಂಬ ಪಂಚತನ್ಮಾತ್ರೆಗಳು ಸೇರಿವೆ. ಶಿವನ ದರ್ಶನ ಮಾಡಬೇಕಾದರೆ ನಂದೀಶ್ವರನ ಹಿಂಭಾಗವನ್ನು ಸ್ಪರ್ಶಿಸುತ್ತಾ ಅದರ ಶೃಂಗಗಳ ಮಧ್ಯದಿಂದ ಶಿವನನ್ನು ಕಾಣಬೇಕು. ಇದರ ಒಳಾರ್ಥ ಪ್ರಾಣಿಗಳಲ್ಲೂ ಶಿವನನ್ನು ಕಾಣು ಎಂದು.

### ಓಂ ಸೃಷ್ಟಿಕರ್ತ :

ಓಂ ನ ಸೃಷ್ಟಿಕರ್ತ ಮಹಾದೇವ. ಶಿವ ಎಂದೂ ಹಿಂದೂ ಪುರಾಣದಲ್ಲಿ ಹೇಳಲಾಗಿದೆ. ಓಂ ಎಂದರೆ ಭೂಮಿ ರಚನೆಯ ಆದಿ ಸ್ವರೂಪ. ಇದರ ಉಚ್ಚಾರಣೆ ಅಥವಾ ವಿಸ್ತರಣೆಯು ಶ್ವಾಸಕೋಶದಲ್ಲಿ ಪ್ರಾರಂಭವಾಗಿ ತುಟಿಗಳಲ್ಲಿ ಕೊನೆಗೊಳ್ಳುತ್ತದೆ. ಓಂ ನನ್ನು ಪ್ರತಿನಿಧಿಸುವ ಸಂಕೇತವನ್ನು ಓಂಕಾರ ಎಂದು ಕರೆಯಲಾಗುತ್ತದೆ.

### ಜ್ಯೋತಿರ್ಲಿಂಗ :

ಸ್ಕಂದ ಪುರಾಣದಲ್ಲಿ ಉಲ್ಲೇಖಿಸಿರುವ ಪ್ರಕಾರ ಜ್ಯೋತಿರ್ಲಿಂಗ ಎಂಬುದು ಎಲ್ಲ ದೇವತೆಗಳ ಆಲಯವಿದ್ದಂತೆ. ಎಲ್ಲ ಜಲ ಚರಾಚರಗಳು ಅಂತಿಮವಾಗಿ ಇದರಲ್ಲೇ ಲೀನವಾಗುತ್ತವೆ. ಲಿಂಗ ಸಾಕ್ಷಾತ್ ಶಿವನ ಪ್ರತೀಕ. ಅದು ಬ್ರಹ್ಮಾಂಡದ ಸಂಕೇತ ಕೂಡ. ಸತ್ ಮತ್ತು ಅಸತ್ ತತ್ವಗಳು ಹುಟ್ಟಿಕೊಳ್ಳುವುದಕ್ಕೆ ಮೊದಲು ಅನಾದಿ, ಅನಂತ, ಬ್ರಹ್ಮಾಂಡ ಲಿಂಗ ರೂಪದಲ್ಲಿ ಇತ್ತೆಂದು ಶೃತಿ,ಸ್ಮೃತಿಗಳು ಉಲ್ಲೇಖಿಸಿವೆ. ಬ್ರಹ್ಮಾಂಡಜ್ಯೋತಿರ್ಲಿಂಗ ರೂಪದಲ್ಲಿದೆ. ಪ್ರಾರಂಭದಲ್ಲಿ ಹಿರಣ್ಯಗರ್ಭ ಜನ್ಮ ತಳೆದನಂತೆ. ಸಮಸ್ತ ಜೀವಿಗಳಿಗೆ ಆತನೇ ದೇವರು. ಈ ಭೂಮಿ ಮತ್ತು ಸ್ವರ್ಗವನ್ನು ಸೃಷ್ಟಿಸಿ ಅವುಗಳನ್ನು ರಕ್ಷಿಸುವವನು ಈತನೇ ಎನ್ನುತ್ತದೆ ಋಗ್ವೇದ. ಜ್ಯೋತಿರ್ಲಿಂಗದ ಪರಿಪೂರ್ಣ ರೂಪವೇ ಹಿರಣ್ಯಗರ್ಭ.

### ಶಿವನ ವಿವಿಧ ಹೆಸರುಗಳು :

ಪರಮೇಶ್ವರನು ಹುಟ್ಟು ಸಾವು ಇಲ್ಲದವನು ಎಂದು ಆದಿ ಅಂತ್ಯ ಅವನೇ ಎಂದು ಹೀಗಾಗಿ ಆತನನ್ನು ಸದಾ ಶಿವ ಎಂದು ಕೂಡ ಕರೆಯುವುದುಂಟು ಎನ್ನುತ್ತಾರೆ. ಶಿವ ಎಂದರೆ ಮಂಗಳಕರ ಶುಭಪ್ರದ ಎಂಬ ಅರ್ಥ ಅಡಗಿದೆ. ನಿರ್ದಿಷ್ಟವಾಗಿ ಶಿವನಿಗೆ ಜ್ಞಾನ, ಶಕ್ತಿ, ಆಧ್ಯಾತ್ಮಿಕತೆ ಮತ್ತು ಶ್ರೇಷ್ಠ ಹೀಗೆ ಹಲವು ಅರ್ಥಗಳನ್ನು ಪ್ರತಿಬಿಂಬಿಸುವ ಹೆಸರುಗಳಿಂದ ಪೂಜಿಸುತ್ತೇವೆ. ಶಿವನಿಗೆ ಸಾವಿರಕ್ಕಿಂತ ಹೆಚ್ಚು



ಹೆಸರುಗಳಿವೆ. ಮಹಾದೇವ, ಮಹಾಯೋಗಿ, ಪಶು ಪತಿ, ನಟರಾಜ, ಭೈರವ, ವಿಶ್ವನಾಥ, ಭಾವ, ಭೋಲೆ ನಾಥ,ರುದ್ರ ಎಂದರೆ ಗಾಳಿ, ಬಿರುಗಾಳಿ ಅಂತ ಅರ್ಥ. ಋಗ್ವೇದದಲ್ಲಿ ರುದ್ರನನ್ನು ಪ್ರಬಲ,ಉನ್ನತ, ಶಕ್ತಿಯುತ ಅಥವಾ ಪ್ರಬಲರಲ್ಲಿ ಪ್ರಬಲ ಎಂದು ಸಹ ಪ್ರಶಂಸಿ ಸಲಾಗಿದೆ.

ಶಂಭು ಎಂಬ ಹೆಸರು ಸಂತೋಷ,.. ಶ್ಯಾಮ ಎಂದರೆ ಸಂತೋಷ ಊ ಎಂದರೆ ಮೂಲ ಎಂದು ಎರಡೂ ಸೇರಿ ಸಂತೋಷದ ಮೂಲ ಎಂಬ ಅರ್ಥ ವನ್ನು ಕೊಡುತ್ತದೆ. ಭೈರವ ಎಂದರೆ ಭಗವಂತನ ಭಯಂಕರವಾದ ರೂಪನೋಡಲು ಭಯವಾಗು ತ್ತದೆ. ಭಗವಂತನು ಕಿವಿಯೋಲೆ,ಕಡಗ,ಹುಲಿ ಚರ್ಮ ಮತ್ತು ಮಾನವನ ಎಲುಬುಗಳನ್ನು ಮಾಲೆ ಯನ್ನು ಧರಿಸಿರುತ್ತಾನೆ. ಮಹೇಶ ಎಂದರೆ ಮಹಾ ದೇವ. ಮಹಾ ಎಂದರೆ ಶ್ರೇಷ್ಠ ಮತ್ತು ಈಶಾ ಎಂದರೆ ದೇವರು. ಗಂಗಾಧರ ಎಂದರೆ ಗಂಗೆಯನ್ನು ಜಟೆ ಯಲ್ಲಿ ಧರಿಸಿದವನು.

**ಶಿವ ಕುಟುಂಬ :**

ದಕ್ಷಯಾಗದಲ್ಲಿ ದೇಹತ್ಯಾಗ ಮಾಡಿದ ದಾಕ್ಷಾ ಯಿಣಿ, ಪರ್ವತರಾಜನಿಗೆ ಮಗಳಾಗಿ ಹುಟ್ಟಿ, ಬೆಳೆದು ಪಾರ್ವತಿಯಾಗಿದ್ದಳು. ಶಿವನನ್ನು ವರಿಸಬೇಕೆಂದು ಪಾರ್ವತಿ ಮಾಘ ಮಾಸದ ಕೃಷ್ಣ ಪಕ್ಷ ದಿನದಂದು ರಾತ್ರಿಯಿಡಿ ಶಿವನಾಮ ಪಠಿಸುತ್ತಾ, ತಪಸ್ಸು ಮಾಡು ತ್ತಾಳೆ. ಪಾರ್ವತಿಯ ತಪಸ್ಸಿಗೆ ಮೆಚ್ಚಿ ಶಿವನು ಪಾರ್ವತಿಯನ್ನು ವಿವಾಹವಾದ.

ಪರಮೇಶ್ವರ ಶಿವ ಅಥವಾ ಹರನ ವಾಹನ ನಮ್ಮೆಲ್ಲರಿಗೂ ಪರಿಚಯ ಇರುವಂತಹ ನಂದಿ, ಮಹಾನಂದಿ ಆದ್ದರಿಂದ ಯಾವುದೇ ಶಿವನ ದೇವಾಲಯದಲ್ಲಿ ನಂದಿ ಅಥವಾ ಬಸವಣ್ಣ ಕಂಡು ಬರುತ್ತಾನೆ. ಶಿವನ ಅರ್ಧಾಂಗಿಯಾದ ಪಾರ್ವತಿ ಆದಿ ಶಕ್ತಿಯು ಸಿಂಹವಾಹಿನಿ. ಗಂಗಾದೇವಿ, ಗಂಗಾದೇವಿ ಯನ್ನು ಭಾಗೀರಥಿ ಎಂತಲೂ ಸಹ ಕರೆದಿದ್ದು ಇವರ ವಾಹನ ಮಕರ. ದುರ್ಗಾದೇವಿಯ ವಾಹನ ಹುಲಿ.

ಗಣಾಧಿಪತಿ ಗಣೇಶ ಮೂಷಿಕವಾಹನದ ಮೇಲೆ ಪಾರ್ವತಿ ಪರ ಮೇಶ್ವರರ ಸುತ್ತ ಸುತ್ತಿದರು. ಸುಬ್ರಹ್ಮಣ್ಯ ನವಿಲು ವಾಹನದ ಮೇಲೆ ಇಡೀ ಲೋಕವನ್ನೇಸುತ್ತಿದರು. ಕೊನೆಗೆ ತಂದೆ ತಾಯಿ ಜಗತ್ತಿನಂತಿದ್ದು ಎಂದು ತೀರ್ಪು ಹೊರಬಂದು ಗಣನಾಯಕನಾಗಿ ಗಣೇಶ ಆಯ್ಕೆ ಯಾದ.

**ತ್ರಿನೇತ್ರ ಶಿವ :**

ಪುರಾಣಗಳ ಪ್ರಕಾರ ಬ್ರಹ್ಮ, ವಿಷ್ಣು, ಮಹೇಶ್ವರ ಈ ತ್ರಿಮೂರ್ತಿ ಗಳನ್ನೂ ಆದಿ ಪರಾಶಕ್ತಿ ಆದ ಆ ಮಾತೇ ತನ್ನ ಮಂತ್ರಬಲದಿಂದ ಹುಟ್ಟಿ ಸಿದ ಮಾತೇ ಎಂದು ಕರೆಯುತ್ತಾರೆ. ತ್ರಿಮೂರ್ತಿಗಳು ಮೂರು ಜನ ಹುಟ್ಟಿದ ನಂತರ ಮೂವರಲ್ಲಿ ಒಬ್ಬರನ್ನು ತನ್ನನ್ನು ಮದುವೆ ಆಗುವಂತೆ ಆದಿಶಕ್ತಿ ಕೇಳಿದಳು.

ಆಗ ಮೂರು ಜನ ನಿರಾಕರಿಸಿದ್ದರಿಂದ ಆದಿಶಕ್ತಿ ಕೋಪಾವಿಷ್ಟ ಳಾಗುತ್ತಾಳೆ. ಮೂರು ಜನರನ್ನು ಭಸ್ಮ ಮಾಡುವುದಾಗಿ ಮುಂದಾದಾಗ ಆಗ ಪರಮೇಶ್ವರನು ತನ್ನ ಜಾಣ್ಮೆಯಿಂದ ನಿನ್ನ ಹತ್ತಿರ ಇರುವ ಮೂರನೇ ಕಣ್ಣನ್ನು ನನಗೆ ನೀಡಿದರೆ ನಾನು ಮದುವೆ ಆಗುತ್ತೇನೆ ಎಂದ.

ಈ ಪ್ರಸ್ತಾಪಕ್ಕೆ ಆದಿಶಕ್ತಿ ಒಪ್ಪಿಗೆ ನೀಡಿ ತನ್ನ ಮೂರನೆಯ ಕಣ್ಣನ್ನು ಶಿವನಿಗೆ ನೀಡಿದಳು. ಮೂರನೆಯ ಕಣ್ಣನ್ನು ಪಡೆದ ಶಿವನು ಅದೇ ಕಣ್ಣನ್ನು ತೆರೆದು ಆಕೆಯನ್ನು ಭಸ್ಮ ಮಾಡಿದನು. ಮೂರನೇ ಕಣ್ಣು ಪಡೆದ ಶಿವ ಅಂದಿನಿಂದ ತ್ರಿನೇತ್ರ ಎಂದು ಕರೆಸಿಕೊಂಡ.

ಆದಿಶಕ್ತಿಯನ್ನು ಭಸ್ಮ ಮಾಡಿದ ನಂತರ ಬಂದ ಭಸ್ಮದಿಂದ ಮೂರು ಭಾಗಗಳಾಗಿ ವಿಭಜಿಸಿ ಒಂದು ಭಾಗದಿಂದ ಪಾರ್ವತಿ ದೇವಿ ಯನ್ನು, ಎರಡನೇ ಭಾಗವನ್ನು ಸರಸ್ವತಿಯನ್ನು, ಮೂರನೇ ಭಾಗ ದಿಂದ ಲಕ್ಷ್ಮಿಯನ್ನು ಜನಿಸುವಂತೆ ಆದೇಶಿಸಿದ.

ಹೀಗೆ ಶಿವನು ತನ್ನ ಜಾಣ್ಮೆಯಿಂದ ಬುದ್ಧಿವಂತಿಕೆಯಿಂದ ಆದಿ ಶಕ್ತಿಯನ್ನು ತ್ರಿಮೂರ್ತಿಗಳ ಪತ್ನಿ ಆಗುವಂತೆ ಮಾಡಿದನು ಎನ್ನಲಾಗಿದೆ.

**ಶಿವ ಪ್ರದಕ್ಷಿಣೆ :**

ಶಿವನ ದೇವಾಲಯಗಳಲ್ಲಿ ಮಾಡುವ ಪ್ರದಕ್ಷಿಣೆಗೆ ಹಾಗೂ ಉಳಿದ ಆಲಯಗಳಲ್ಲಿ ಮಾಡುವ ಪ್ರದಕ್ಷಿಣೆಗೆ ಬಹಳ ವ್ಯತ್ಯಾಸ ಇರುತ್ತದೆ ಶಿವನ ದೇವಾಲಯಗಳಲ್ಲಿ ಎಂತಹ ಪ್ರದಕ್ಷಿಣೆಯನ್ನು ಮಾಡಬೇಕು ಹಾಗೂ ಮಾಡುವುದರಿಂದ ಆಗುವ ಪರಿಣಾಮ ಏನು ಎಂಬುದನ್ನು ಪುರಾಣ ಗಳಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಶಿವನ ದೇವಾಲಯದಲ್ಲಿ ಧ್ವಜಸ್ತಂಭ ದಿಂದ ನಮ್ಮ ಎಡ ಭಾಗದ ಕಡೆ ಹೋಗಿ ಗರ್ಭಗುಡಿಯ ಹಿಂದೆ ಇರುವ

ಸೋಮ ಸೂತ್ರದವರೆಗೆ ಹಿಗು ಹಿಂದಿರುಗಬೇಕು ಆದರೆ ಸೋಮ ಸೂತ್ರವನ್ನು ದಾಟಿ ಹೋಗಬಾರದು. ಅಲ್ಲಿಂದ ಹಿಂದೆ ತಿರುಗಿ ಪ್ರದಕ್ಷಿಣೆ ಆಗಿ ಸೋಮ ಸೂತ್ರವನ್ನು ಸುತ್ತಿ ಕೊಂಡು ಪುನಃ ಸೋಮ ಸೂತ್ರದವರೆಗೆ ಬಂದರೆ ಒಂದು ಪ್ರದಕ್ಷಿಣೆ ಮುಕ್ತಾಯ ಆದಂತೆ ಹೀಗೆ ಬೆಸ ಸಂಖ್ಯೆಯಲ್ಲಿ ಬರುವ ಮೂರು ಐದು, ಏಳು, ಒಂಭತ್ತು ಪ್ರದಕ್ಷಿಣೆ ಮಾಡ ಬಹುದು. ಶಿವನ ಪ್ರದಕ್ಷಿಣೆಯಲ್ಲಿ ಸೋಮ ಸೂತ್ರವನ್ನು ದಾಟಬಾರದು ಎಂದು ನಿಯಮ ಆಗಿದೆ ಈ ರೀತಿ ಎಷ್ಟೇ ಪ್ರದಕ್ಷಿಣೆಯನ್ನು ಮಾಡಿಯಾದರೂ ಒಂದು ಪ್ರದಕ್ಷಿಣೆ ಕಡಿಮೆ ಆಗುತ್ತದೆ ಎನ್ನುತ್ತದೆ ಶಾಸ್ತ್ರ.

**ಶಿವರಾತ್ರಿ :**

ಶಿವರಾತ್ರಿ ದಿನ ಶಿವ ಪೂಜೆ ಜೊತೆ **'ಓಂ ನಮಃ ಶಿವಾಯ ಸೋಮಾಯ ನಮಃ'**ಎಂಬ ಮಂತ್ರವನ್ನು ಜಪಿಸಿ ನೀವು ಶಿವನ ಪೂಜೆ ವೇಳೆ ಈ ಮಂತ್ರವನ್ನು ಜಪಿಸಿ ಮನೆ ಯಲ್ಲಿ ಶಾಂತಿ,ನೆಮ್ಮದಿ ನೆಲೆಸುತ್ತದೆ ಇದರ ಜೊತೆಗೆ ಎಳ್ಳು ಮಿಶ್ರಿತ ಶುದ್ಧ ನೀರನ್ನು ಬಿಲ್ವಪತ್ರೆಯಿಂದ ಶಿವನಿಗೆ ಅರ್ಪಿಸಿ ದರೆ ಮನೋಕಾಮನೆಗಳು ಈಡೇರುವುದರ ಜೊತೆ ಯಶಸ್ಸು ನಿಮ್ಮದಾಗುತ್ತದೆ. ಅಷ್ಟೇ ಅಲ್ಲದೆ ಶಿವನ ಸನ್ನಿಧಿಗೆ ತೆರಳಿದರೆ ಮನಸ್ಸಿಗೆ ನೆಮ್ಮದಿ ಆರೋಗ್ಯ ಕೂಡ ವೃದ್ಧಿ ಆಗು ತ್ತದೆ ಎಂಬ ಪ್ರತೀತಿ ಇದೆ.

ಶಿವರಾತ್ರಿಯಂದು ಉಪವಾಸ ಇರುವುದರಿಂದ ಈ ಶಿವನ ಅನುಗ್ರಹ ಲಭಿಸುತ್ತದೆ ಎಂಬುದು ಭಕ್ತರ ನಂಬಿಕೆ ಉಪವಾಸ ಸಮಯದಲ್ಲಿ ಹಾಲು ಹಣ್ಣುಗಳನ್ನು ಸೇವಿಸ ಬಹುದು ಉಪವಾಸ ಆಚರಿಸಿದ ಭಕ್ತರು ಶಿವಮಣಿ ದರ್ಶನ ಮಾಡಿಕೊಂಡು ಶಿವನಿಗೆ ಪ್ರೀತಿಯಾದ ಹಾಲು ಜೇನು ಸಕ್ಕರೆ ಬೆಲ್ಲದಿಂದ ಅಭಿಷೇಕವನ್ನು ಮಾಡುವರು ನಂತರ ಶಿವನಿಗೆ ತಿಲಕವನ್ನು ಇಟ್ಟು ಹೂವುಗಳಿಂದ ಅಲಂಕರಿಸಿ ಹಣ್ಣು ಗಳನ್ನು ನೈವೇದ್ಯವಾಗಿ ಅರ್ಪಿಸುತ್ತಾರೆ.

ಶಿವರಾತ್ರಿಯ ದಿನದಂದು ಶಿವನನು ಪೂಜಿಸಿದರೆ ಜನ್ಮ ಜನ್ಮಗಳ ಮೋಕ್ಷ ಪಡೆಯುವ ಅದೃಷ್ಟ ಒಲಿಯುತ್ತದೆ. ಮಹಾಶಿವರಾತ್ರಿಯ ಮಹತ್ವ ಸಾರುವ ಒಂದು ಪ್ರಸಿದ್ಧ ಕಥೆ.

ವಾರಣಾಸಿಯಲ್ಲಿ ಇದ್ದ ಸುಸ್ವರಡು ಎಂಬ ಬೇಡ ಒಂದು ದಿನ ಕಾಡಿನಲ್ಲಿ ಹೋಗುವಾಗ ದಾರಿ ತಪ್ಪಿದನಂತೆ ರಾತ್ರಿ ಆಗುವ ಸಮಯಕ್ಕೆ ಒಂದು ಬಿಲ್ವವೃಕ್ಷವನ್ನು ಆತ ಆಶ್ರಯಿಸಿದ ಮರದ ಮೇಲೆ ಹತ್ತಿ ಕುಳಿತುಕೊಂಡ ಹಸಿವಿ ನಿಂದ ಈ ದಿನವೆಲ್ಲಾ ಜಾಗರಣೆ ಮಾಡುತ್ತಾ ತನಗಾಗಿ ಕಾಯುತ್ತಾ ಇರುವ ಹೆಂಡತಿ ಮಕ್ಕಳನ್ನು ನೆನೆದು ಕಣ್ಣೀರನ್ನು ಸುರಿಸಿದ ಹಾಗೆ ಈ ರಾತ್ರಿಯ ಸಮಯದಲ್ಲಿ ಏನು ಮಾಡ



ಬಹುದು ಎಲ್ಲಿಗೆ ಹೋಗಬಹುದು ಎಂದು ತಿಳಿಯದೇ ಹಾಗೆ ಯೋಚಿಸುತ್ತ ಕೊಂಬೆಯಲ್ಲಿನ ಒಂದೊಂದೇ ಎಲೆಗಳನ್ನು ಕಿತ್ತು ಕೆಳಗೆ ಹಾಕುತ್ತಾ ಹೋಗುತ್ತಾನೆ.

ಈ ಎಲೆಗಳು ನೇರವಾಗಿ ಕೆಳಗೆ ಇರುವ ಶಿವನ ಲಿಂಗದ ಮೇಲೆ ಬೀಳುತ್ತಾ ಹೋಗುತ್ತದೆ ಬೆಳಗ್ಗೆ ಈ ಬೇಡ ಮನೆಯನ್ನು ಸೇರುತ್ತಾನೆ ಹೀಗೆ ಕೆಲವು ದಿನಗಳ ನಂತರ ಈತ ತನ್ನ ಕೊನೆಯ ದಿನಗಳಲ್ಲಿ ಮರಣ ಹೊಂದಿ ಮೋಕ್ಷ ಪಡೆದುಕೊಳ್ಳು ವನು. ಬೇಡ ಕಾಡಿನಲ್ಲಿ ದಾರಿ ತಪ್ಪಿದ ದಿನ ಮಹಾ ಶಿವರಾತ್ರಿ ದಿನ ಆಗಿರುತ್ತದೆ.

ಈ ರಾತ್ರಿಯೆಲ್ಲಾ ಊಟ ಮಾಡದೇ ಜಾಗರಣೆ ಮಾಡಿರು ವುದು ಹಾಗೂ ತನ್ನ ಕಣ್ಣೀರಿನಿಂದ ಶಿವಲಿಂಗಕ್ಕೆ ಅಭಿಷೇಕ ಮಾಡಿರುವುದರಿಂದ ಬಿಲ್ವ ಪತ್ರೆಗಳನ್ನು ಒಂದೊಂದಾಗಿ ಅರೆದು ಅರ್ಚನೆ ಗೊತ್ತಿಲ್ಲದೆ ಮಾಡಿರುವುದರಿಂದ ಈ ಬೇಡಗೆ ಶಿವ ರಾತ್ರಿಯ ದಿನ ತಿಳಿಯದೆ ಇದ್ದರೂ ಆಕಸ್ಮಿಕವಾಗಿ ನಡೆದ ಈ ಪೂಜಾ ಕೈಂಕರ್ಯದಲ್ಲಿ ಅವನಿಗೆ ಮರಣ ನಂತರ ಕೂಡ ಮೋಕ್ಷ ಪಡೆದುಕೊಳ್ಳುತ್ತಾನೆ.

# ಭೀಮನ ಅಪರಿಮಿತ ಶಕ್ತಿ

– ಬೇಲೂರು ರಾಮಮೂರ್ತಿ
98860 61400



ಪಾಂಡವರ ಪೈಕಿ ಭೀಮನಿಗೆ ಶಕ್ತಿ, ದೈಹಿಕ ಸಾಮರ್ಥ್ಯ ಹೆಚ್ಚು. ನೂರು ಮಂದಿ ಕೌರವರ ನಡುವೆ ಏಕಾಂಗಿಯಾಗಿ ಸ್ಪರ್ಧಿಸಿ ಒಟ್ಟೊಟ್ಟಾಗಿ ಹತ್ತು ಜನ ಕೌರವರನ್ನು ಸದೆಬಡಿಯುತ್ತಾನೆ. ಭೀಮನ ಶಕ್ತಿಯನ್ನು ಕಂಡು ಕೌರವರು ದೂರವೇ ಇರುತ್ತಿದ್ದರು. ಆದರೆ ದುರ್ಯೋಧನನಿಗೆ ಮಾತ್ರ ಸಿಟ್ಟು ಬರುತ್ತಿತ್ತು. ಹೀಗೆ ದಿನ ಕಳೆದಾಗ ದುರ್ಯೋಧನನಿಗೆ ನಾವು ನೂರು ಮಂದಿಯಲ್ಲಿ ಯಾರೂ ಭೀಮನಿಗೆ ಸಮವಾಗಲಾರೆವು. ಅವನನ್ನು ಹೀಗೇ ಬಿಟ್ಟರೆ ರಾಜ್ಯ ನಮ್ಮ ಕೈಬಿಟ್ಟು ಹೋಗುತ್ತದೆ. ಅವನ ಶಕ್ತಿಗೆ ನಾವು ಯಾರೂ ಸರಿಸಮಾನರಾಗಲು ಸಾಧ್ಯವಿಲ್ಲದವರಾದರೆ ಅವನನ್ನು ಮುಗಿಸಿಬಿಡುವುದು ಒಳ್ಳೆಯದು. ಭೀಮ ಇಲ್ಲದಿದ್ದರೆ ಮಿಕ್ಕ ನಾಲ್ವರನ್ನು ನಾವು ಹೇಗಾದರೂ ಸದೆ ಬಡಿಯಬಹುದು ಅಂದುಕೊಂಡು ದುರ್ಯೋಧನ ಭೀಮನನ್ನು ಕೊಲ್ಲಲ್ಲು ಸಂಚು ರೂಪಿಸುತ್ತಿದ್ದ.

ದುರ್ಯೋಧನ ಒಂದು ದಿನ ಜಲಕ್ರೀಡೆಯಾಡಲು ಪಾಂಡವರನ್ನು ಆಹ್ವಾನಿಸಿದ. ಅದಕ್ಕಾಗಿ ಗಂಗಾ ನದಿ ತೀರದಲ್ಲಿ ಗುಡಾರಗಳನ್ನು, ಕ್ರೀಡಾಗೃಹಗಳನ್ನು ನಿರ್ಮಿಸಿದ. ಬರುವವರಿಗೆಲ್ಲಾ ಭಕ್ಷ್ಯ ಭೋಜ್ಯಗಳನ್ನು ಏರ್ಪಡಿಸಿದ್ದ. ದುರ್ಯೋಧನನು ಗುಟ್ಟಾಗಿ ಬಾಣಸಿಗರಿಗೆ ಹೇಳಿ ಕೆಲವು ಭಕ್ಷಗಳಲ್ಲಿ ಮಾತ್ರ ಸಾಕಷ್ಟು ವಿಷ ಬೆರೆಸಿ ಅದನ್ನು ಪ್ರತ್ಯೇಕವಾಗಿ ಇರಿಸಿದ್ದ. ಕ್ರೀಡಾಕೂಟದಲ್ಲಿ ದುರ್ಯೋಧನ ಭೀಮನೊಂದಿಗೆ ಅಪರಿಮಿತ ಸ್ನೇಹದಿಂದ, ವಿಶ್ವಾಸದಿಂದ ಇರುವಂತೆ ನಟಿಸುತ್ತಿದ್ದ. ಭೋಜನ ಸಮಯದಲ್ಲಿ ಭೀಮನನ್ನು ತಬ್ಬಿ, ಭುಜ ತಟ್ಟಿ ತಾನೇ ಅವನಿಗೆ ಪ್ರತ್ಯೇಕವಾಗಿ ಇಟ್ಟಿದ್ದ ವಿಷಮಿಶ್ರಿತ ಭಕ್ಷ್ಯಗಳನ್ನು ತಿನ್ನಿಸಿದ. ಪ್ರತಿಯಾಗಿ ಭೀಮನೂ ದುರ್ಯೋಧನನಿಗೆ ಭಕ್ಷ್ಯ ತಿನ್ನಿಸಿದ. ಇನ್ನು ನನ್ನ ಕೆಲಸವಾಯಿತು ಎನಿಸಿದ ದುರ್ಯೋಧನ ತನ್ನ ತಮ್ಮಂದಿರೊಡನೆ ಹೊರಟುಹೋದ. ಹೊಟ್ಟೆ ತುಂಬಿದ ಮೇಲೆ ಕೆಲವರು ನೀರಿನಲ್ಲಿ ಬಿದ್ದು ಆಟವಾಡಿದರು. ಇನ್ನು ಕೆಲವರು ನೀರಿನಲ್ಲಿ ಶವಾಸನ ಮಾಡಿ ತೇಲುತ್ತಿದ್ದರು. ಭೀಮನೂ ಸಹ ನೀರಿನಲ್ಲಿ ಬಿದ್ದು ಆನಂದ ಅನುಭವಿಸುತ್ತಿದ್ದ. ದಡದಿಂದ ಭೀಮ ನೀರಿನಲ್ಲಿ ಧುಮುಕಿದಾಗ ನದಿಯ ಬಹಳಷ್ಟು ನೀರು ದಡಕ್ಕೆ ಬಂದು ಬಿದ್ದಿತು. ದುರ್ಯೋಧನ ತಿನ್ನಿಸಿದ ವಿಷ ಭೀಮನ ಆಹಾರದಲ್ಲಿ ಕೆಲಸ ಮಾಡಲಾರಂಭಿಸಿದಾಗ ಭೀಮ ವಿಶ್ರಾಂತಿ ಬೇಕೆನಿಸಿ ಸ್ವಲ್ಪ ದೂರ ಬಂದು ಮರದ ಕೆಳಗೆ ಮಲಗಿದ. ಸ್ವಲ್ಪ ಹೊತ್ತಿನಲ್ಲಿಯೇ ಅವನಿಗೆ ಪ್ರಜ್ಞೆ ತಪ್ಪಿತು. ಕೆಲವು ಕಾಲದ ನಂತರ ಎಲ್ಲರೂ ನೀರಿನಲ್ಲಿ ಆಡಿದ್ದು ಸಾಕೆಂದು ಹೊರಟರು. ಸ್ವಲ್ಪ ಹೊತ್ತಿನ ನಂತರ ಈಗ ಭೀಮನ ಸ್ಥಿತಿ ಹೇಗಿರಬಹುದು ಅಂತ ಕುತೂಹಲದಿಂದ ದುರ್ಯೋಧನ ಬಂದು ನೋಡಿದಾಗ ಭೀಮ ಪ್ರಜ್ಞಾಶೂನ್ಯನಾಗಿ ಬಿದ್ದಿರುವುದು ತಿಳಿಯಿತು. ಇವನನ್ನು ಹೀಗೇ ಬಿಟ್ಟರೆ ವಿದುರಾದಿಗಳು ಬಂದು ನೋಡಿ ಇದಕ್ಕೆ ನನ್ನನ್ನೇ ದೂರಬಹುದು ಎನಿಸಿದಾಗ ಭೀಮನ ಶರೀರವನ್ನು ಹಗ್ಗಗಳಿಂದ ಕಟ್ಟಿ ನೀರಿನಲ್ಲಿ ಮುಳುಗಿಸಿ ಅಲ್ಲಿಂದ ಹೊರಟು ಬಿಟ್ಟ. ನನ್ನ ಹಾದಿಯ ಮುಳ್ಳು ಇವತ್ತಿಗೆ ನಿರ್ನಾಮವಾಯಿತು ಎನ್ನುವ ಸಮಾಧಾನ ದುರ್ಯೋಧನನ ಮನ ತುಂಬಿತ್ತು.

ಹೀಗೆ ನದಿಗೆ ಬಿದ್ದ ಭೀಮನ ಶರೀರ ನಾಗಲೋಕಕ್ಕೆ ಹೋಯಿತು. ಅಲ್ಲಿದ್ದ ನಾಗಗಳು ಇದ್ಯಾರೋ ಮನುಷ್ಯ ಇಲ್ಲಿಗೆ ಬಂದಿದ್ದಾನೆ ಅಂತ ಭೀಮನ ಶರೀರವನ್ನು ಚೆನ್ನಾಗಿ ಕಚ್ಚಿದವು. ಆದರಿಂದ ಏನಾಯಿತು. ಈಗಾಗಲೇ ಭೀಮನ ಶರೀರದಲ್ಲಿ ಹೊಕ್ಕಿದ್ದ ವಿಷದ ಪ್ರಭಾವವು ಸರ್ಪಗಳು ಕಚ್ಚಿದ ವಿಷದಿಂದಾಗಿ ಕಡಿಮೆಯಾಯಿತು.ಅಂದರೆ ಕಾಲ ಕೂಟದಂತಹ ವಿಷವು ಕೇವಲ ಸರ್ಪಗಳ ಕಚ್ಚುವಿಕೆಯಿಂದ ನಿವಾರಣೆಯಾಯಿತು. ಸ್ಥಾವರ ವಿಷವನ್ನು ಅಂದರೆ ರಸಾಯನಿಕ ವಸ್ತುಗಳಿಂದ ತಯಾರಿಸಿದ ವಿಷ (ದುರ್ಯೋಧನ ಭೀಮ

ನಿಗೆ ಕೊಟ್ಟಿದ್ದ ಆಹಾರದಲ್ಲಿ ಬೆರೆಸಿದ್ದ ವಿಷ) ಜಂಗಮ ವಿಷಗ ಳಿಂದ (ಸರ್ಪಗಳಲ್ಲಿ ಇರುವ ವಿಷದಿಂದ)ನಿವಾರಣೆಯಾ ಯಿತು. ಎಷ್ಟು ಸರ್ಪಗಳು ಭೀಮನನ್ನು ಕಚ್ಚಿದರೂ ಭೀಮನಿಗೆ ಏನೂ ಪರಿಣಾಮ ಆಗಲಿಲ್ಲ. ತನ್ನ ಶರೀರದಲ್ಲಿ ಶೇಖರಣೆ ಯಾಗಿದ್ದ ವಿಷ ನಿರ್ಮೂಲನೆಗೊಂಡಿದ್ದರಿಂದ ಭೀಮನಿಗೆ ಎಚ್ಚರವಾಗಿ ಮೊದಲು ತನ್ನ ಶರೀರಕ್ಕೆ ಬಿಗಿದಿದ್ದ ಕಟ್ಟುಗಳನ್ನು ಕಿತ್ತೊಗೆದ. ತಕ್ಷಣವೇ ಸುತ್ತಮುತ್ತ ಇದ್ದ ಸರ್ಪಗಳನ್ನು ಕೈ ಯಲ್ಲಿ ಹಿಡಿದು ಅಪ್ಪಳಿಸಿದ. ಹೀಗೆ ಅನೇಕ ಸರ್ಪಗಳು ಸತ್ತು ಹೋದವು. ಅಳಿದುಳಿದ ಸರ್ಪಗಳು ಇಲ್ಲಿ ನಡೆಯುತ್ತಿರುವು ದನ್ನು ತಮ್ಮ ರಾಜ ವಾಸುಕಿಗೆ ಹೇಳಬೇಕೆಂದು ಓಡಿದವು.

ಮಹಾರಾಜ, ಒಬ್ಬ ವ್ಯಕ್ತಿ ಲತೆಗಳಿಂದ ಬಂಧನಕ್ಕೊಳ ಗಾಗಿ ನಮ್ಮ ನಡುವೆ ಬಿದ್ದ. ನಾವು ಅವನನ್ನು ಕಚ್ಚಿದರೆ ಅವನು ಸಾಯುವ ಬದಲು ನಮ್ಮನ್ನೇ ಹೆದರಿಸಿ ನಮ್ಮಲ್ಲಿ ಕೆಲವರನ್ನು ಸಾಯಿಸಿದ. ಪ್ರಾಯಶಃ ಅವನು ವಿಷಪ್ರಾಶನ ಮಾಡಿರಬೇಕು. ಅದಕ್ಕೆ ನಮ್ಮ ವಿಷ ಅವನಿಗೆ ಏನೂ ಮಾಡಲಿಲ್ಲ. ನಾವು ಚೆನ್ನಾಗಿ ಕಚ್ಚಿದರೂ ಅವನಿಗೆ ಏನೂ ಆಗಲಿಲ್ಲ. ಸ್ವಲ್ಪ ಸಮಯ ದಲ್ಲಿಯೇ ಅವನು ಎಚ್ಚರಗೊಂಡು ಬಂಧನವನ್ನೂ ಬಿಡಿಸಿ ಕೊಂಡು ನಮ್ಮನ್ನು ಎದುರಿಸಿದ. ಅವನು ಯಾರೆಂದು ನೀವೇ ಬಂದು ತಿಳಿಯಬೇಕು ಅಂದವು. ವಾಸುಕಿಯ ಪರಿವಾರ ದಲ್ಲಿದ್ದ ಆರ್ಯಕನೆಂಬ ಸರ್ಪರಾಜ ನಾನು ಹೋಗಿ ನೋಡುತ್ತೇನೆ ಎಂದು ಅಲ್ಲಿಗೆ ಬಂದು ಭೀಮನನ್ನು ನೋಡಿ ದೊಡನೆಯೇ ಅವನನ್ನು ಬಾಚಿ ತಬ್ಬಿಕೊಂಡ. ಏಕೆಂದರೆ ಆರ್ಯಕ ಕುಂತಿಯ ತಂದೆಯ ಮುತ್ತಾತ. ಇವನು ನನ್ನ ಬಂಧು ಎಂದು ತಿಳಿದೊಡನೆಯೇ ಆರ್ಯಕ ಭೀಮನನ್ನು ಬಲವಾಗಿ ತಬ್ಬಿಕೊಂಡ. ಭೀಮನಿಗೂ ಇಲ್ಲೊಬ್ಬ ನನ್ನ ಬಂಧು ಇದ್ದಾನಲ್ಲ ಎನ್ನುವುದು ತಿಳಿದಾಗ ಭೀಮ ಮತ್ತು ಆರ್ಯಕ ಇಬ್ಬರ ಕಣ್ಣಲ್ಲೂ ಆನಂದಬಾಷ್ಪಗಳು ಸುರಿದವು. ಆರ್ಯ ಕನಿಗೆ ಬಂಧುವಾದ ಭೀಮ ವಾಸುಕಿಗೂ ಬಂಧುವೇ ಆದ. ಇದರಿಂದ ವಾಸುಕಿಗೂ ಬಹಳ ಸಂತೋಷವಾಯಿತು. ಭೀಮ ನಿಗೆ ಆದರೋಪಚಾರಗಳು ನಡೆದವು. ಆರ್ಯಕ ತನ್ನ ಇನ್ನಿ ತರ ಬಂಧುಗಳ ವಿಚಾರಗಳನ್ನೆಲ್ಲಾ ಭೀಮನಲ್ಲಿ ಕೇಳಿ ತಿಳಿದು ಕೊಂಡ, ತಾನು ಇಲ್ಲಿ ಬಂದಿರುವುದರಿಂದ ತನ್ನ ಸಹೋದ ರರೂ ತಾಯಿಯೂ ಆತಂಕದಲ್ಲಿರಬಹುದು ಅಂತ ಭೀಮ ಹೊರಡಲು ಸಿದ್ಧನಾದ. ಆಗ ವಾಸುಕಿ ಭೀಮನಿಗೆ ಯಥೇಚ್ಛ ವಾಗಿ ಧನಕನಕಗಳನ್ನು ಕೊಟ್ಟು ಗೌರವದಿಂದ ಅವನನ್ನು ಬೀಳ್ಕೊಡಲು ತಯಾರಿ ನಡೆಸಿದ.

ಆಗ ಆರ್ಯಕ ವಾಸುಕಿಗೆ ನೀವು ಕೊಡುವ ಧನ ಕನಕ ಗಳು ಕಾಲಾನಂತರದಲ್ಲಿ ಕರಗಿಹೋಗುತ್ತವೆ. ಅದರಿಂದ ಭೀಮನಿಗೆ ಏನೂ ಪ್ರಯೋಜನವಾಗುವುದಿಲ್ಲ. ಹೀಗಾಗಿ ನೀವು ಭೀಮನಿಗೆ ಶಾಶ್ವತವಾಗಿ ಉಳಿಯುವಂಥಾ ಏನಾದರೂ ವಿಶೇಷ ಉಡುಗೊರೆಯನ್ನು ಕೊಡಬೇಕು ಎಂದ. ವಾಸುಕಿ ಹಾಗಾದರೆ ನೀನೇ ಹೇಳು ಏನು ಕೊಡಬಹುದು ಎಂದು ಕೇಳಿ ದಾಗ ಆರ್ಯಕ ಒಂದು ಸಾವಿರ ಆನೆಗಳ ಬಲವನ್ನು ತಂದು ಕೊಡುವ ಆತ್ಮಮೋಘವಾದ ಅಮೃತ ತುಂಬಿರುವ ಕುಂಡ ಗಳು ನಮ್ಮಲ್ಲಿ ಇದೆಯಲ್ಲವೇ. ಆ ರಸಕುಂಡಗಳನ್ನು ಭೀಮ ನಿಗೆ ಕುಡಿಯಲು ಕೊಡೋಣ. ಅವನು ಎಷ್ಟು ಕೊಡಗಳನ್ನು ಕುಡಿಯುತ್ತಾನೋ ಕುಡಿಯಲಿ ಎಂದ. ಆರ್ಯಕನ ಮಾತಿಗೆ ವಾಸುಕಿ ನಕ್ಕು ನಿನ್ನ ದೂರದ ಬಂಧು ಅತ್ಯಂತ ಶಕ್ತಿಶಾಲಿ ಯಾಗಿ ಇರಲಿ ಎನ್ನುವುದು ನಿನ್ನ ಆಸೆಯಲ್ಲವೇ ಎಂದು ತನ್ನ ಸಮ್ಮತಿ ಸೂಚಿಸಿದ.

ಆ ನಂತರ ಸರ್ಪಗಳೆಲ್ಲವುಗಳ ಸಂಭ್ರಮದಲ್ಲಿ ಭೀಮನ ಅಮೃತಪಾನಕ್ಕೆ ವೇದಿಕೆ ಸಿದ್ಧವಾಯಿತು. ಆರ್ಯಕ ರಸ ಕುಂಡಗಳ ವಿಚಾರಗಳನ್ನು ಭೀಮನಿಗೆ ತಿಳಿಸಿ ಇದರಿಂದ ಮುಂದೆ ನಿನಗೆ ಅವಶ್ಯಕವಾದ ಶಕ್ತಿ ಯಥೇಚ್ಛವಾಗಿ ಸಿಗುತ್ತದೆ. ಆದರಿಂದ ಪಾಂಡವರ ರಕ್ಷಣೆಯೂ, ಅರಮನೆಯ ರಕ್ಷ ಣೆಯೂ,ಸಿಂಹಾಸನದ ರಕ್ಷಣೆಯೂ ಆಗುತ್ತದೆ ಎಂದ. ಆರ್ಯಕನ ಮಾತಿಗೆ ಸಮ್ಮತಿಸಿದ ಭೀಮ ರಸಕುಂಡಗಳಲ್ಲಿದ್ದ ಅಮೃತವನ್ನು ಕುಡಿಯಲು ಸಿದ್ಧನಾದ. ನಂತರ ಭೀಮ ಸ್ನಾನ ಮಾಡಿ ಶುಚಿರ್ಭೂತನಾಗಿ ಬಂದು ಪೂರ್ವಾಭಿಮುಖವಾಗಿ ಕೂತ ನಂತರ ಅಮೃತ ತುಂಬಿದ ರಸಕುಂಡಗಳನ್ನು ತರಿಸಿ ದರು. ಭೀಮ ಇದನ್ನು ಹೇಗೆ ಕುಡಿಯುತ್ತಾನೆ ಎನ್ನುವುದನ್ನು ನೋಡಲು ಎಲ್ಲರೂ ಕಾತುರದಲ್ಲಿರುವಾಗಲೇ ಭೀಮ ಒಂದು ಕೊಡವನ್ನು ಎತ್ತಿ ಗಟಗಟನೆ ಕುಡಿದುಬಿಟ್ಟ. ಇದು ಎಲ್ಲರನ್ನೂ ಅಚ್ಚರಿಗೊಳಿಸಿತು. ಅದರೆ ಇದಕ್ಕೂ ಹೆಚ್ಚಿನ ಅಚ್ಚರಿ ಎಂದರೆ ಭೀಮ ಒಂದಾದ ಮೇಲೊಂದರಂತೆ ಉಳಿದ ಏಳೂ ಕೊಡ ಗಳ ಅಮೃತವನ್ನೂ ಕುಡಿದು ಮುಗಿಸಿದ್ದು.

ಹೊಟ್ಟೆ ತುಂಬಾ ಆಹಾರ ಬಿದ್ದರೆ ದೇಹ ವಿಶ್ರಾಂತಿ ಬಯ ಸುತ್ತದೆ ಅಲ್ಲವೇ. ಹಾಗೆಯೇ ಭೀಮನಿಗೆ ಬಹಳ ದೀರ್ಘವಾದ ವಿಶ್ರಾಂತಿ. ಇತ್ತ ದುರ್ಯೋಧನ ನಿಯೋಜಿಸಿದ್ದ ಉದಕ ಕ್ರೀಡೆ ಮುಗಿಸಿಕೊಂಡು ಎಲ್ಲರೂ ಹೊರಡುತ್ತಿದ್ದರು. ಪಾಂಡವರೂ ಹೊರಟಾಗ ಅವರಿಗೆ ಭೀಮ ಕಾಣಲಿಲ್ಲ. ಒಟ್ಟಾಗಿ ಬಂದವರು ಒಟ್ಟಾಗಿಯೇ ಹೋಗಬೇಕಲ್ಲ. ಭೀಮ ಎಲ್ಲಿ ಅಂತ ಅಮ್ಮ

ಕೇಳಿದರೆ ಏನು ಹೇಳುವುದು ಎನ್ನುವ ಆತಂಕ ಉಳಿದ ನಾಲ್ವ ರಲ್ಲೂ ಮೂಡಿತು. ಕಡೆಗೆ ಭೀಮ ನಮಗಿಂತ ಮೊದಲೇ ಹೋಗಿರಬಹುದು ಎಂದುಕೊಂಡು ಮನೆಗೆ ಬಂದರೆ ಭೀಮ ಇನ್ನೂ ಬಂದಿರಲಿಲ್ಲ. ಭೀಮನನ್ನು ಕಾಣದೇ ಕುಂತಿ ಆತಂಕಕ್ಕೆ ಒಳಗಾದಳು. ಅಲ್ಲಿ ಏನು ನಡೆಯಿತು ಎಂದು ಮಕ್ಕಳನ್ನು ಕೇಳಿ ತಿಳಿದುಕೊಂಡಳು. ನಂತರ ಅವಳು ವಿದುರ ನನ್ನು ಕಂಡು ದುರ್ಯೋಧನನಿಗೆ ಭೀಮನ ವಿಚಾರದಲ್ಲಿ ಮೊದ ಲಿಂದಲೂ ಬಹಳ ಮತ್ಸರ ಇದೆ. ಉದಕಕ್ರೀಡೆಯಿಂದ ಉಳಿದವರು ಹಿಂದಿರುಗಿದರೂ ಭೀಮ ಹಿಂದಿರುಗಿಲ್ಲ. ದುರ್ಯೋಧನ, ಕ್ರೂರಿ, ದುರ್ಮತಿ, ಕ್ಷುದ್ರ, ರಾಜ್ಯಲೋಭಿ, ನಾಚಿಕೆ ಗೆಟ್ಟವನು. ಅವನು ಮತ್ಸರದಿಂದ ಭೀಮನನ್ನು ಕೊಂದೇ ಬಿಟ್ಟಿದ್ದಾನೋ ಏನೋ ಎಂದು ಭಯವಾಗಿದೆ ಎಂದಳು. ಆಗ ವಿದುರ ಅಮ್ಮಾ ಹಾಗೆನ್ನಬೇಡ, ನೀನು ಹೀಗೆ ದುರ್ಯೋಧನನನ್ನು ನಿಂದಿಸುತ್ತಿದ್ದೀಯ ಎನ್ನುವುದು ದುರ್ಯೋಧನನಿಗೆ ತಿಳಿದರೆ ಅವನು ಉಳಿದ ಮಕ್ಕಳಿಗೂ ತೊಂದರೆ ಕೊಡಬಹುದು. ಅದೂ ಅಲ್ಲದೇ ನಿನ್ನ ಮಕ್ಕಳೆಲ್ಲರೂ ದೀರ್ಘಾಯುಷ್ಯರಾಗಿ ಇರುವವರೆಂದು ವ್ಯಾಸ ಮಹರ್ಷಿಗಳು ಹೇಳಿದ್ದಾರೆ. ಮಹರ್ಷಿಗಳ ಮಾತು ಸುಳ್ಳಾಗುವುದಿಲ್ಲ. ಭೀಮ ಜೀವಂತವಾಗಿ ಬಂದೇ ಬರುತ್ತಾನೆ. ಚಿಂತಿಸಬೇಡ ಎಂದು ಸಮಾಧಾನ ಮಾಡಿದ. ಆದರೂ ಕುಂತಿಗೆ ಭೀಮನನ್ನು ಕಾಣು ವವರೆಗೂ ಆತಂಕ ದೂರವಾಗುವಂತಿರಲಿಲ್ಲ. ಭೀಮನಿಗೆ ಏನೂ ಆಘಾತವಾಗದೇ ಇರಲಿ, ಅವನು ಸುಖವಾಗಿ ಹಿಂದಿ ರುಗಲಿ ಎಂದು ಬಯಸುತ್ತಿದ್ದ ಕ್ಷಣದಲ್ಲೇ ಭೀಮ ಹಿಂದಿ ರುಗಿದ.

ಅಮೃತಪಾನ ಮಾಡಿದ ಭೀಮನಿಗೆ ಹಂಸತೂಲಿಕೆಯ ಮೇಲೆ ಏಳು ದಿನಗಳ ಪರ್ಯಂತ ಗಾಢ ನಿದ್ರೆ ಬಂದಿತ್ತು. 8ಯ ದಿನ ಅವನಿಗೆ ಎಚ್ಚರವಾದಾಗ ತನಗೆ ಯಾವುದೋ ಅಪರಿಮಿತ ಶಕ್ತಿ ಬಂದಿರುವುದು ಗಮನಕ್ಕೆ ಬಂತು. ಆಗ ಸರ್ಪಗಳು ಭೀಮನ ಬಳಿಗೆ ಬಂದು ನೀನು ಎಂಟು ರಸ ಕುಂಡಗಳಲ್ಲಿದ್ದ ಅಮೃತವನ್ನು ಕುಡಿದಿರುವುದರಿಂದ ನಿನಗೆ ಹತ್ತು ಸಾವಿರ ಆನೆಗಳ ಬಲ ಬಂದಿದೆ. ಪ್ರಪಂಚದಲ್ಲಿ ಯಾರೊ ಬ್ಬರೂ ಯಾವ ಯುದ್ಧದಲ್ಲಿಯೂ ನಿನ್ನನ್ನು ಸೋಲಿಸಲು ಸಾಧ್ಯ ವಿಲ್ಲ. ನಿನ್ನ ಸಹೋದರರರೂ ತಾಯಿಯೂ ಆತಂಕದಲ್ಲಿರ ಬಹುದು. ನೀನು ಸಮೀಪದ ಸರೋವರದಲ್ಲಿ ಮಿಂದು ನಿನ್ನ ಮನೆಗೆ ಹಿಂದಿರುಗು ಎಂದವು. ಭೀಮನಿಗೂ ಎಷ್ಟು ಬೇಗ ನಾನು ನನ್ನ ಸಹೋದರರರನ್ನೂ, ತಾಯಿಯನ್ನೂ ಸೇರಿ ಕೊಂಡೇನೋ ಎನ್ನುವ ಆತಂಕ ಇತ್ತು. ಅದುವರೆಗೂ ನಡೆದ ವೃತ್ತಾಂತಗಳು ಮನದ ಪಟದಲ್ಲಿ ಮೂಡಿದಾಗ ಅವನಿಗೆ ದುರ್ಯೋಧನ ತನ್ನನ್ನು ಸಾಯಿಸಲು ಮಾಡಿದ ಸಂಚು ಇಂಚಿಂಚೂ ತಿಳಿದ ಬಂತು.

ಹಸ್ತಿನಾಪುರದ ದಾರಿಯಲ್ಲಿ ಭೀಮ ತನ್ನ ಅಪರಿಮಿತ ಬಲದಿಂದ ನಡೆಯುತ್ತಿರುವಾಗ ಊರ ಜನರು ಭೀಮ, ವೃಕೋದರ ಎಂದು ಕೂಗುತ್ತಿದ್ದುದು ಅವನ ಕಿವಿಗೆ ಬೀಳಲೇ ಇಲ್ಲ. ಅವನ ಗಮನವೆಲ್ಲಾ ಕುಂತಿಯ ಕಡೆಗೇ ಇತ್ತು. ತಾಯಿ ಯನ್ನು ಕಂಡೊಡನೇ ಅವನ ಕಣ್ಣಿಂದ ನೀರು ಹರಿದು ಕಾಲಿಗೆ ನಮಸ್ಕರಿಸಿ ತಬ್ಬಿದ. ಸಹೋದರರರನ್ನೆಲ್ಲಾ ತಬ್ಬಿ ಆನಂದ ಅನು ಭವಿಸಿದ. ನಂತರ ಭೀಮ ತನ್ನ ತಾಯಿಯನ್ನೂ, ಸಹೋದ ರರನ್ನೂ ನಡುವೆ ಕೂರಿಸಿಕೊಂಡು ಅದುವರೆವಿಗೂ ನಡೆದ ವೃತ್ತಾಂತಗಳನ್ನು ತಾನು ಗಳಿಸಿದ ಅಪರಿಮಿತ ಶಕ್ತಿಯನ್ನೂ ತಿಳಿಸಿದ. ಆಗ ಯುಧಿಷ್ಠಿರ ಈ ವಿಷಯ ಎಂದೆಂದಿಗೂ ಗೋಪ್ಯವಾಗಿರಲಿ, ಇದನ್ನು ನೀನು ಯಾರಲ್ಲಿಯೂ ಬಾಯಿ ಬಿಡಬೇಡ. ಇಂದಿನಿಂದ ನಾವೆಲ್ಲರೂ ಪರಸ್ಪರರ ರಕ್ಷಣೆಯಲ್ಲಿ ತೊಡಗಿರೋಣ ಎಂದ. ಕ್ಷೇಮವಾಗಿ ಹಿಂದಿರುಗಿದ ಭೀಮ ನನ್ನು ಕಂಡು ಕುಂತಿಗೂ ಸಹೋದರರಿಗೂ ಎಷ್ಟು ಸಂತೋಷವಾಯಿತೋ ಅದಕ್ಕಿಂತ ಹೆಚ್ಚಿನ ದುಃಖ ಆಕ್ರೋಶ, ಎಲ್ಲವೂ ದುರ್ಯೋಧನನಿಗೆ ಆಯಿತು. ತಾನು ಮಾಡಿದ ಪ್ರಯತ್ನ ನೀರಿನಲ್ಲಿ ಹೋಮ ಮಾಡಿದಂತಾಯಿತಲ್ಲಾ ಅಂತ ಬೇಸರಿಸಿದ.

ರಸಕುಂಡಗಳಲ್ಲಿನ ಅಮೃತಪಾನ ಮಾಡಿದ್ದರಿಂದ ಭೀಮ ಗಳಿಸಿದ ಅಪರಿಮಿತ ಶಕ್ತಿ ಮುಂದಿನ ದಿನಗಳಲ್ಲಿ ಪಾಂಡವರು, ಕೌರವರ ನಡುವೆ ನಡೆದ ಯುದ್ಧದಲ್ಲಿ ಬಹಳ ಪ್ರಯೋಜನಕಾರಿಯಾಯಿತು.



**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು. ಜೊತೆಗೆ " ಓಂ ನಮೋ ವೇಂಕಟೇಶಾಯ" ಎಂದು ನಾಮಸ್ಮರಣೆಯನ್ನು ಧ್ಯಾನಿಸಬೇಕು. ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು. ಬೇರೆಯವರನ್ನು ಸಂಬೋಧಿಸುವಾಗ ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ. ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬಹುದು.**

# ಸಮಸ್ತ ಲೋಕಂ ಶಂಕರಂ



ಶಿವರಾತ್ರೆಯು ಇದು ಶಿವತತ್ವದ ಜೊತೆ ಘನಿಷ್ಠ ಸಂಬಂಧವಿದೆ. ಭಗವಾನ್ ಶಿವನಿಗೆ ಅತಿ ಪ್ರಿಯ ರಾತ್ರಿಗೆ **"ಶಿವರಾತ್ರಿ"** ಎನ್ನಲಾಗಿದೆ. ನಮ್ಮಲ್ಲಿ ಪ್ರತಿಯೊಂದು ಹಬ್ಬಕ್ಕೂ ಹರಿದಿನಗಳಲ್ಲೂ ಅತ್ಯಂತ ಪ್ರಮುಖವಾದ ಒಂದು ಮಹಾಪರ್ವ **"ಮಹಾ ಶಿವ ರಾತ್ರಿ".** ಮಹಾಶಿವರಾತ್ರಿಯನ್ನು **"ವ್ರತರಾಜ"** ಎಂದು ಕರೆಯುವುದುಂಟು. ವರ್ಷದ ಪ್ರತಿ ಕೃಷ್ಣ ಪಕ್ಷದ ಚತುರ್ದಶಿಯು **"ಶಿವರಾತ್ರಿ"** ಎಂತಿದ್ದರೂ . ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿಯು ಶಿವನಿಗೆ ಅತ್ಯಂತ ವಿಶೇಷವಾಗಿರುವುದರಿಂದ ಅದನ್ನು ಮಹಾ ಶಿವರಾತ್ರಿ ರಾತ್ರಿಯೆಲ್ಲಾ ಪರಶಿವನನ್ನು ಸ್ಮರಿಸುತ್ತಾ ಆರಾಧಿಸುವ ಪರ್ವಕಾಲವಿದು. ಲಿಂಗರೂಪಿಯಾದ ಶಿವನಿಗೆ ಪಂಚಾಮೃತಾಭಿಷೇಕ, ಗಂಗಾಭಿಷೇಕ ವನ್ನು ಮಾಡಿ ಬಿಲ್ವಪತ್ರಗಳಿಂದ ಅರ್ಚಿಸಿ ಪಂಚಾ ಕ್ಷರಿಮಹಾಮಂತ್ರವನ್ನು ಜಪಿಸುತ್ತಾ ಪರಶಿವನನ್ನು ಸಂತೋಷ ಗೊಳಿಸಿ ಅವನಿಂದ ಇಷ್ಟವಾದ ವರ ವನ್ನು ಪಡೆದುಕೊಳ್ಳುವ ಸುವರ್ಣ ಸಂಧಿಕಾಲವೇ **"ಮಹಾ ಶಿವರಾತ್ರಿಯು".** ಈ ದಿನದ ವ್ರತಾಚರಣೆ ಯಲ್ಲಿ ಏಕಾದಶೀಯಲ್ಲಿ ಹೇಗೋ ಹಾಗೆ ಉಪ ವಾಸವು ಒಂದು ಮುಖ್ಯವಾದ ಅಂಗವಾಗಿರುವು ದರಿಂದ ಇದನ್ನು **"ಉಪವಾಸದ ಹಬ್ಬ"** ಎಂಬ ಹೆಸರಿನಿಂದಲೂ ಕರೆಯಲ್ಪಟ್ಟಿದೆ. ಸಾಮಾನ್ಯವಾಗಿ ಯಾವುದೇ ದೇವತಾಕಾರ್ಯಕ್ಕೆ ರಾತ್ರಿ ಕಾಲವು ಪ್ರಶಸ್ತ ವಲ್ಲ. ಸಂಪ್ರದಾಯವೂ ಇಲ್ಲ. ಆದರೆ ಶಿವರಾತ್ರಿ ಯಲ್ಲಿ ಇಡೀ ರಾತ್ರಿ ಕಾಲವೇ ಪರಶಿವನ ಪೂಜೆಗೆ ವಿಶೇಷ ಪ್ರಶಸ್ತವಾಗಿ ವಿಧಿಸಲ್ಪಟ್ಟಿರುವುದರಿಂದ **"ಶಿವ ರಾತ್ರಿ"** ಎಂಬ ಹೆಸರು ಒಪ್ಪುತ್ತದೆ. ಅಂದು ರಾತ್ರಿಯ ಎಲ್ಲಾ ಜಾವಗಳು ಶಿವನ ಪೂಜೆಗೆ ಅತ್ಯಂತ ಪ್ರಶಸ್ತ ವಾಗಿದೆ.

ಗರುಡಪುರಾಣ, ಸ್ಕಂದ, ಪದ್ಮ, ಅಗ್ನಿ, ಹೀಗೆ ಅನೇಕ ಪುರಾಣಗಳಲ್ಲಿ ಶಿವರಾತ್ರಿಯ ಮಹಾತ್ಮ್ಯವನ್ನು ಬಹು ವಿಶದವಾಗಿ ವರ್ಣಿಸಲಾಗಿದೆ. ಇವುಗಳಲ್ಲಿ ಕೆಲವೊಂದು ವ್ಯತ್ಯಾಸವಿದ್ದರೂ ಆಶಯ ಒಂದೇ ಎಂಬುದು ದಿಟ. ಕೋಟಿ ರುದ್ರಸಂಹಿತೆಯಲ್ಲಿ ಶಿವ ರಾತ್ರಿಯು ಸರ್ವಯಜ್ಞಗಳಲ್ಲೂ ಉತ್ತಮೋತ್ತಮ ವಾದದ್ದು. ಯಜ್ಞ, ದಾನ, ತಪಸ್ಸು, ತೀರ್ಥ, ವ್ರತಾದಿ, ಕರ್ಮ ಇವು ಯಾವವೂ ಈ ಶಿವರಾತ್ರಿ ವ್ರತದ ಕೋಟಿಪಾಲಿಗೂ ಸಾಟಿಯಿಲ್ಲ ಎಂದು ವಿಸ್ತಾರವಾದ ವರ್ಣನೆ ಇದೆ. ಮಾಘ ಫಾಲ್ಗುಣಗಳ ಮಧ್ಯೆ ಬರುವ ಈ ಕೃಷ್ಣ ಚತುರ್ದಶಿಯಂದು ಉಪವಾಸ ಮಾಡಿ ಜಾಗರಣೆ ಮಾಡಿ ಶಿವ ನನ್ನು ಪೂಜಿಸಿದರೆ ರುದ್ರ ದೇವರು ಭಕ್ತಿ-ಮುಕ್ತಿಗಳೆರಡನ್ನೂ, ಅನು ಗ್ರಹಿಸುತ್ತಾನೆ ನರಕದಿಂದ ಉದ್ಧರಿಸುತ್ತಾನೆ ಎಂದು ಗರುಡಪುರಾಣ ಘೋಷಿಸುತ್ತದೆ.

"ಮಾಘಫಾಲ್ಗುಣಯೋರ್ಮಧ್ಯೆ ಕೃಷ್ಣಾ ಯಾತು ಚತುರ್ದಶೀ
ತಸ್ಯಾಂ ಜಾಗರಣಾದುದ್ರಃ ಪೂಜಿತೋ ಭುಕ್ತಿ ಮುಕ್ತಿದಃ॥
ಉಪೋಷಿತೈಃ ಪೂಜಿತಸ್ಯನ್ನರಶಾತ್ತಾರಯೇತ್ತಥಾ (ಗರುಡ ಪುರಾಣ-1-1-24)

–ವೇ. ವಿ. ಶಿವರಾಮ ಜೋಗಳೇಕರ
82751 80641



ಅದು ಸರ್ವಪಾಪಗಳನ್ನು ಪರಿಹರಿಸುವುದು. ಅಂದು ಉಪವಾಸ ಮಾಡಿ ಜಾಗರಣೆಯಲ್ಲಿದ್ದು ಬಿಲ್ವಪತ್ರಗಳಿಂದ ಶಿವನನ್ನು ನಾಲ್ಕು ಯಾಮಗಳಲ್ಲೂ ಪೂಜಿಸುವವರು ಶಿವನಿಗೇ ಸಮಾನರಾಗಿ ಬಿಡುತ್ತಾರೆ. ಹಾಗೆ ಆರಾಧಿಸುವವರಿಗೆ ಮರುಹುಟ್ಟು ಇರುವುದಿಲ್ಲ. ತ್ರಿಲೋಕ ಸ್ವಾಮಿಯಾದ ಶಿವನನ್ನು ನಿಶೀಥ ಕಾಲದಲ್ಲಿ ಪೂಜಿಸಿದವರು ಬಡಜೀವಿಗಳು, ಜನನ-ಮರಣ ಚಕ್ರದಲ್ಲಿ ಅಲೆದಾಡುತ್ತಾರೆ.

ನ ಪೂಜಯತಿ ಭಕ್ತ್ಯೇಶಂ ರುದ್ರಂ ತ್ರಿಭುವನೇಶ್ವರಂ’
ಜನ್ತುರ್ಜನ್ಮಸಹಸ್ರೇಷು ಭ್ರಮತೇ ನಾತ್ರ ಸಂಶಯಃ॥
ಈ ಶ್ಲೋಕ ಗಮನಾರ್ಹ

ಸ್ತ್ರೀಯರು,ಪುರುಷರು ಸರ್ವವರ್ಣಸರ್ವಜಾತಿಗಳ ಜನರೂ ಸರ್ವರೂ ಈ ವ್ರತವನ್ನು ಆಚರಿಸಲೇಬೇಕು.

**ಮಹಾಶಿವರಾತ್ರಿ ಎಂದು ಆಚರಿಸಬೇಕು :**

ಶಿವರಾತ್ರಿ ಎಂಬ ನಾಮಧೇಯವೇ ತಿಳಿಸುವಂತೆ ಅಂದು ವ್ರತಾಚರಣೆಗೆ ನಿಯತವಾದ ಮತ್ತು ಪ್ರಶಸ್ತವಾದ ಸಮಯವು ರಾತ್ರಿ ಎಂಬುದರಲ್ಲಿ ಯಾವುದೇ ಸಂಶಯವೂ ಇಲ್ಲ. ಕಲಿಯುಗದಲ್ಲಿ ನಾನು ಆ ಚತುರ್ದಶಿಯಂದು ರಾತ್ರಿ ಸಮಯದಲ್ಲಿ ಮಾತ್ರವೇ ಭೂಮಿಯಲ್ಲಿ ಸಂಚರಿಸುತ್ತಾ, ಎಲ್ಲ ಸ್ಥಾವರ ಮತ್ತು ಜಂಗಮ ಲಿಂಗಗಳಲ್ಲೂ ಸಂಕ್ರಮಣ ಮಾಡುತ್ತೇನೆ ಎಂದು ಪರಶಿವನೇ ಘೋಷಿಸಿದ್ದಾನೆ.ಅಂದರೆ ಇದರರ್ಥ ರಾತ್ರಿ ಪೂಜೆಯೇ ಪ್ರಶಸ್ತ. ಭಗವಂತನ ಸಾನ್ನಿಧ್ಯ ಅಂದು ಹಗಲಿನಲ್ಲಿ ಇರುವುದೇ ಇಲ್ಲವೇ? ಸದಾ ಸರ್ವದಾ ವ್ಯಾಪಿಸಿರುವ ದೇವರಿಗೆ (ಶಿವನಿಗೆ) ರಾತ್ರಿ ಕಾಲದಲ್ಲಿ ಮಾತ್ರ ಏಕೆ ವಿಶೇಷವಾದ ಪೂಜೆ? ಎಂಬುದು ಸಾರ್ವತ್ರಿಕ ಪ್ರಶ್ನೆ ‘ಸದಾಪಶ್ಯಂತಿ ಸೂರಯಃ’ ಎಂಬಂತೆ ಜ್ಞಾನಿಗಳಿಗೆ ಸದಾ ದೇವರ ದರ್ಶನ ಇರುವುದು ನಿಜವೇ ಆದರೂ ಭಗವಂತನ ಸಂಕಲ್ಪದಂತೆ ಮಹಾ ಕಾಲನಾದ ಅವನ ಕಾಲರೂಪವಾದ ಶರೀರದಲ್ಲಿ ಅಂದು ರಾತ್ರಿ ಸಮಯದಲ್ಲೇ ಭಗವಂತನ ಧ್ಯಾನಾರಾಧನೆಗೂ ಭಕ್ತರ ಇಷ್ಟಾರ್ಥಸಿದ್ಧಿಗೂ ಅತ್ಯಂತ ಅನುಕೂಲವಾದ ಒಳಹೊರ ವಾತಾವರಣ ಸನ್ನಿವೇಶಗಳು ಇರುತ್ತವೆ ಎಂಬ ತತ್ವವನ್ನು ಮನಗಾಣಬೇಕು. ಅದು ಶಿವರಾತ್ರಿ, ಮಹಾರಾತ್ರಿ, ಪಾಪಗಳಿಗೆ ಕಾಳರಾತ್ರಿ. ಸಿದ್ಧರಿಗೂ, ಸಾಧಕರಿಗೂ ಸುಖರಾತ್ರಿ ಹೊರದೃಷ್ಟಿಯುಳ್ಳ ಬಡ ಜೀವಿಗಳಿಗೆ ರಾತ್ರಿಯಾದರೂ ಅಂತ ದೃಷ್ಟಿಯುಳ್ಳ ಮಹಾತ್ಮರಿಗೆ ಹಗಲೇ ಆಗಿರುವ ವಿಚಿತ್ರವಾದ ರಾತ್ರಿ. ಅದು ಒಳಗೆ ಅನುಭವಿಸಿದ ಜ್ಞಾನಾನಂದದ ಮಂಗಲವಾದ ಉತ್ಸವವನ್ನು ಹೊರಗೂ ಶಿವರಾತ್ರಿ ಎಂದು ಕರೆದು ಕಾಲಾತೀತವನ್ನು ಕಾಲದಲ್ಲಿ ಸೇರಿಸಿ ನಮ್ಮ ಪೂಜೆಗೆ ವಿಷಯವಾಗಿ ಜ್ಞಾನಿಗಳು ತಂದು ಕೊಟ್ಟಿರುವ ಮಹಾರಾತ್ರಿ ಅದೇ ಶಿವರಾತ್ರಿ.

**ಅಂದು ಚತುರ್ದಶೀಯ ವ್ಯಾಪ್ತಿಯು ಯಾವ ಸಮಯದಲ್ಲಿರಬೇಕು?**

ಅರ್ಧರಾತ್ರಿಯ ಮೊದಲು ಚತುರ್ದಶೀಯ ವ್ಯಾಪ್ತಿ ಅನಂತರವೂ ಚತುರ್ದಶೀಯ ವ್ಯಾಪ್ತಿ ಇರಬೇಕು. ಆಗಲೇ ಶಿವರಾತ್ರಿ ವ್ರತವನ್ನು ಆಚರಿಸಬೇಕು ಎಂಬ ಅಭಿಪ್ರಾಯ ಈಶಾನ ಸಂಹಿತೆಯದು. ಆದರೆ ಚತುರ್ದಶೀಯು ಪ್ರದೋಷ ಮತ್ತು ರಾತ್ರಿ ಕಾಲಗಳೆರಡನ್ನೂ ವ್ಯಾಪಿಸಿದ್ದರೆ ಆಗ ಶಿವರಾತ್ರಿ ವ್ರತವನ್ನು ಆಚರಿಸಬೇಕು ಎಂಬುದರಲ್ಲಿ ಸಂಶಯವಿಲ್ಲ. ಚತುರ್ದಶೀಗೆ ಎರಡು ದಿನಗಳಲ್ಲೂ ರಾತ್ರಿಯಲ್ಲಿ ವ್ಯಾಪ್ತಿ ಇದ್ದರೆ, ಅಥವಾ ಎರಡು ದಿನಗಳಲ್ಲೂ ರಾತ್ರಿಯಲ್ಲಿ ವ್ಯಾಪ್ತಿ ಇಲ್ಲದಿದ್ದರೆ, ಆಗ ಪ್ರದೋಷ ವ್ಯಾಪ್ತಿ ಇರುವ ಅಂದು ಶಿವರಾತ್ರಿ ಎರಡು ದಿನಗಳಲ್ಲೂ ಪ್ರದೋಷವ್ಯಾಪ್ತಿ ಇದ್ದರೆ, ಅಥವಾ ಎರಡು

ದಿನಗಳಲ್ಲೂ ಪ್ರದೋಷವ್ಯಾಪ್ತಿ ಇಲ್ಲದಿದ್ದರೆ ಆಗ ನಿಶೀಥ ವ್ಯಾಪ್ತಿ ಇರುವದಂದು ಶಿವರಾತ್ರಿ ಒಂದು ದಿನದಲ್ಲಿ ರಾತ್ರಿ ವ್ಯಾಪ್ತಿಯು ಮತ್ತೊಂದು ದಿನದಲ್ಲಿ ಪ್ರದೋಷ ವ್ಯಾಪ್ತಿಯು ಇದ್ದರೆ ಆಗ ಜಯಾಯೋಗ (ತ್ರಯೋದಶೀಯೋಗ) ಇರುವದಂದು ಮಹಾಶಿವರಾತ್ರಿಯ ಆಚರಣೆ.

ತ್ರಯೋದಶಿಯು ಶಕ್ತಿ ಸ್ವರೂಪ, ಚತುರ್ದಶೀಯು ಶಿವ ಸ್ವರೂಪ, ಆದುದರಿಂದ ತ್ರಯೋದಶೀ ಸಹಿತವಾದ ಚತುರ್ದಶಿ ತಿಥಿಯು ಸೇರಿದ್ದರೆ ಶಿವಶಕ್ತಿ ಯೋಗವು ಕೂಡಿ ಬರುತ್ತದೆ ಅಂಥಾ ಕಾಲವು ಒದಗಿ ಬಂದರೆ ಶಿವರಾತ್ರಿಯ ಆಚರಣೆಗೆ ಬಹು ಪ್ರಶಸ್ತ ಎಂಬುದು ಗಮನಾರ್ಹ. ಮಹಾಶಿವರಾತ್ರಿಯಂದು ಭಾನುವಾರ ಅಥವಾ ಮಂಗಳವಾರ ಯೋಗ ಕೂಡಿ ಬಂದರೆ ಶ್ರೇಷ್ಠ ಎಂದು ಶಾಸ್ತ್ರಗಳು ಹೇಳುತ್ತವೆ.

ಮಾಘಕೃಷ್ಣ ಚತುರ್ದಶ್ಯಾಂ ರವಿವಾರೋ ಭವೇದ್ಯದಿ।
ಭೌಮೋ ವಾಪಿ ಭವೇದ್ದೇವಿ ಕರ್ತವ್ಯಂ ವ್ರತಮುತ್ತಮಮ್॥

ಎಂಬುದಾಗಿ ವರ್ಣಿಸಿದೆ.

**ಪರಶಿವನಿಗೆ ವಿವಿಧ ಪೂಜೆ :**

ಶಿವರಾತ್ರಿಯ ಹಿಂದಿನ ದಿವಸರಾತ್ರಿಯಲ್ಲಿ ಉಪವಾಸ ಮಾಡಿ ಮಾರನೇ ದಿನ ಅಂದರೆ ಶಿವರಾತ್ರಿ ದಿನ ವ್ರತ ಸಂಕಲ್ಪಿಸಿ ಶತರುದ್ರೀಯ (ನಮಕ, ಚಮಕ) ರುದ್ರ ಪರವಾದ ಶ್ರುತಿ ಸೂಕ್ತಗಳಿಂದ ಶಿವಶ್ರುಪಂಚಾಕ್ಷರೀ ಮಹಾಮಂತ್ರದಿಂದಲೂ ಶಿವಮಹಾಪಂಚಗವ್ಯ-ಪಂಚಾಮೃತಗಳಿಂದ ಅಭಿಷೇಕ ಮಾಡಿ ಆವಾಹನಾದಿ ಷೋಡಶೋಪಚಾರ ಪೂಜಿಸಿ ಎಲ್ಲ ಯಾಮಗಳಲ್ಲೂ ಶಿವನನ್ನು ಪೂಜಿಸಬೇಕು. ಶಿವಲಿಂಗಕ್ಕೆ- ಮೊದಲನೇಯ ಜಾವದಲ್ಲಿ ಹಾಲಿನಿಂದಲೂ, ಎರಡನೇಯ ಜಾವದಲ್ಲಿ ಮೊಸರಿನಿಂದಲೂ,ಮೂರನೇ ಜಾವದಲ್ಲಿ ತುಪ್ಪದಿಂದಲೂ, ನಾಲ್ಕನೆಯೇ ಜಾವದಲ್ಲಿ ಜೇನು ತುಪ್ಪದಿಂದಲೂ, ಅಭಿಷೇಕದೊಂದಿಗೆ ಪರಶಿವನ ಈಶಾನ, ತತ್ಪುರುಷ ಅಘೋರ, ವಾಮದೇವ ಮತ್ತು ಸದ್ಯೋಜಾತ ನಾಮಧೇಯದ ಮಂತ್ರಗಳನ್ನು ಸಮರ್ಪಿಸಬೇಕೆಂದು ಕೆಲವು ಶಾಸ್ತ್ರಗಳು ಹೇಳುತ್ತವೆ. ಅಷ್ಟೋತ್ತರ ಸಹಸ್ರನಾಮಗಳಿಂದ ಅಥವಾ ಮೂಲಮಂತ್ರ (ಮಹಾಪಂಚಾಕ್ಷರ)ದಿಂದ ಶಿವನಿಗೆ ಬಿಲ್ವ ಪತ್ರವನ್ನು ಅರ್ಪಣೆ ಮಾಡಿ ಉಳಿದ ಉಪಚಾರವನ್ನು ಸಮರ್ಪಿಸಬೇಕು.



ಇನ್ನು ಶಿವ ಪೂಜೆಗೆ ವಿಶೇಷವಾಗಿ ವಿಹಿತವಾಗಿರುವ ಪತ್ರ-ಪುಷ್ಪಗಳಲ್ಲಿ ಎಕ್ಕ,ಗಣಿಗಿಲೆ,ಬಿಲ್ವಪತ್ರೆ, ಪದ್ಮಪುಷ್ಪ, ತುಂಬೆ ಹೂವು ಮತ್ತು ಜಪಾಕುಸುಮ (ಕೆಂಪುದಾಸವಾಳ) ಶಿವನಿಗೆ ಅತ್ಯಂತ ಪ್ರಿಯವಾದುದು. ಈ ಮಹಾಶಿವರಾತ್ರಿ ವ್ರತವನ್ನು ಹನ್ನೆರಡು ಅಥವಾ ಇಪ್ಪತ್ತನಾಲ್ಕು ವರ್ಷಗಳು ಆಚರಿಸಿ ಉದ್ಯಾಪನೆ ಮಾಡಿದರೆ ಉತ್ತಮೋತ್ತಮ ಫಲಪ್ರಾಪ್ತಿಯೆಂದು ಶಾಸ್ತ್ರಗಳು ಘೋಷಿಸಿವೆ.

ಪೂಜಾಕಲ್ಪದಲ್ಲಿ ವೈವಿಧ್ಯವಿದ್ದರೂ ಅಂದು ಶಿವನಧ್ಯಾನ. ರುದ್ರಾಭಿಷೇಕ, ಜಾಗರಣೆ ಉಪವಾಸ ಮಾಡಬೇಕೆಂದು ಎಲ್ಲಾ ಶಾಸ್ತ್ರಗಳು ಕಲ್ಪಗಳೂ ಹೇಳುತ್ತವೆ. ಈ ವ್ರತದ ಪಾರಣೆಯನ್ನು ಯಾವಾಗ ಆಚರಿಸಬೇಕು? ಚತುರ್ದಶೀ ತಿಥಿಯು ಮುಗಿದ ನಂತರವೇ **"ತಿಥ್ಯನ್ತೇ ಪಾರಣಂ ಭವೇತ್"** ಇನ್ನು ಕೊನೆಯದಾಗಿ ಹರಿಹರರಲ್ಲಿ ಭೇದ ಎಣಿಸದೆ ಪರಶಿವನನ್ನು ವಂದಿಸಿ **"ವಂದೇ ಶಿವಂ ಶಂಕರಂ".** ಎನ್ನುವ ಮೂಲಕ ಭಕ್ತ ಜನರಿಗೆ ಒಲಿದು, ಕಲ್ಯಾಣ ಸ್ವರೂಪ ಭಗವಾನ್ ಶಂಕರನು ಎಲ್ಲರಿಗೂ ಸನ್ ಮಂಗಲವುಂಟು ಮಾಡಲಿ **ಹರ ಹರ ಮಹಾದೇವ.**

# ತಿರುಮಳಿಶೈ ಆಳ್ವಾರ್



– ಡಾ॥ ಎನ್.ಕೆ. ರಾಮಶೇಷನ್
8277146110

ದ್ರಾವಿಡ ವೈಷ್ಣವ ಸಂತರಾದ ಆಳ್ವಾರರ ರಚನೆ ಸಾಹಿತ್ಯದಲ್ಲಿ ತಾವು ದೃಢವಾಗಿ ನಂಬಿರುವ ಶ್ರೀಮನ್ನಾರಾಯಣನ ಭಕ್ತಿ ಹೇಗೆ ಪ್ರಾಮುಖ್ಯತೆ ಪಡೆದಿದೆಯೋ ಹಾಗೆಂದು ಭಾವ ಭಾವನೆ ಇವುಗಳಿಗೇ ಹೆಚ್ಚು ಬೆಲೆ. ಆಳ್ವಾರರಲ್ಲಿ ತಿರುಮಳಿಶೈ (ಭಕ್ತಿಸಾರರೆಂದೂ ಇನ್ನೊಂದು ಹೆಸರು) ಸುದರ್ಶನ ಚಕ್ರಾಂಶರೆಂದು ಪ್ರಸಿದ್ಧರಾದ ಈ ಸಂತರು ರಚಿಸಿರುವ ದಿವ್ಯ ಪ್ರಬಂಧಗಳು ತಿರುಚ್ಚಂದವಿರುತ್ತಂ (ಶ್ರೇಷ್ಠವಾದ ಛಂದಸ್ಸು ಉಳ್ಳವೃತ್ತ - ನಾಲ್ಕುಸಾಲುಗಳ ಪ್ರಬಂಧ) ಹಾಗೂ ನಾನ್ಮುಕರ್ನ್ ತಿರುವಂದಾದಿ (ಅಂದಾದಿಭರದಲ್ಲಿ ಶ್ರೀ ವಿಷ್ಣು ಮಹಿಮೆ ಸಾರುವ ಗೀತೆ) ಇವುಗಳು ಪ್ರತಿನಿತ್ಯದ ದೇವಾರಾಧನೆಯಲ್ಲೂ ಬಹುಮಾನ್ಯತೆ ಪಡೆದಿವೆ. ಮೊದಲ ಪ್ರಬಂಧ 120 ಪದ್ಯಗಳು ಉಳ್ಳದ್ದು ಎರಡನೆಯದು 96 ಪದ್ಯಗಳ ವ್ಯಾಪ್ತಿಯಾದುದು. ಇವರ ವೈಷ್ಣವ ನಿಷ್ಠೆಬಹು ಹಿರಿದು, ಭಕ್ತಿಸಾರರನ್ನು ವೀರ ವೈಷ್ಣವರೆಂದೇ ಕರೆದಿದ್ದಾರೆ. ಈ ಯೋಗಿಯ ಹುಟ್ಟು ವಿಶಿಷ್ಟವಾದದ್ದು. ಭೃಗು ಋಷಿಗಳು ತಿರುಮಳಿಶೈ ಕ್ಷೇತ್ರದಲ್ಲಿ ತಪಸ್ಸು ಮಾಡುತ್ತಿದ್ದರು. ದೇವೇಂದ್ರನಿಗೆ ಸದಾ ಋಷಿಗಳ ತಪಸ್ಸು ತನ್ನ ಪದವಿಗೆ ಧಕ್ಕೆ ಉಂಟು ಮಾಡುವುದೆಂದೇ ಹೆದರಿಕೆ. ಋಷಿಗಳ ಮನಚಂಚಲವಾಗಲೆಂದು ಅಪ್ಸರೆಯನ್ನು ಕಳಿಸಿದ ಋಷಿ ಸೋತರು, ಮಗುವು ಜನಿಸಿದೊಡನೆ ದೇವಸ್ತ್ರೀ ತನ್ನ ನೆಲೆಗೆ ತೆರಳಿದಳು.

ಭೃಗುವು ಮಗುವನ್ನು ಬಿಟ್ಟು ಪುನಃ ತಪಸ್ಸಿಗೆ ತೆರಳಿದ. ಮರದ ಕೆಳಗೆ ಹುಲ್ಲಿನ ಮೇಲೆ ಮಲಗಿದ್ದ ಮಗು ಅಳಲು ಆರಂಭಿಸಿತು. ದೇವರ ಕೃಪೆ ತಿರುವಾಳ ಎಂಬ ಬೇಡ ಆ ಹಾದಿಯಲ್ಲಿ ಬರುತ್ತಿದ್ದು ಆ ಮಗುವಿನ ರೋದನ ಕೇಳಿ, ಬಂದ, ಮಗುವನ್ನು ಎತ್ತಿಕೊಂಡ. ಆತನಿಗೂ ಮಕ್ಕಳಿರಲಿಲ್ಲ ತನ್ನ ಮಡದಿಗೆ ಮಗುವನ್ನು ಕೊಟ್ಟ ಮುಂದೆ, ಆರೈಕೆಯಲ್ಲಿ ಮಗು ಬೆಳೆಯಿತು. ಆದರೆ, ಯಾವುದೇ ಆಹಾರ ಸ್ವೀಕರಿಸಿದೆ!

ಹೀಗಿದ್ದಾಗ ಬೇಡನ ಮನೆಗೆ ಒಬ್ಬ ಮುದುಕ ಬಂದ ಮಗುವನ್ನು ನೋಡಿ ತನ್ನ ಜ್ಞಾನವಿಶೇಷದಿಂದ ಆಶೀರ್ವದಿಸಿ ಮಗುವಿಗೆ ಹಸುವಿನ ಹಾಲನ್ನು ತರಿಸಿ ಕುಡಿಸಿದ ಅಚ್ಚರಿ! ಮಗು ಹಿರಿಯನ ಪ್ರೀತಿಗೆ ಒಪ್ಪಿದಂತೆ, ಹಾಲನ್ನು ಕುಡಿಯಿತು. ಇದು ಮುಂದುವರಿಯಿತು ಒಂದು ದಿನ ಮಗು, ತಾನು ಸ್ವಲ್ಪ ಹಾಲು ಕುಡಿದು ಉಳಿದದ್ದನ್ನು ಸಾಕು ತಾಯಿಗೆ ಕೊಟ್ಟ "ನೀನು ಕುಡಿಯಮ್ಮ" ಎಂದು ಪ್ರಾರ್ಥಿಸಿತು (ಆ ವೇಳೆಗಾಗೆಯೇ ಸಾಕಷ್ಟು ಬೆಳೆದಿತ್ತು ಮಗು!) ಆಕೆ ಕುಡಿದಾಗ ಇನ್ನೂ ಅಚ್ಚರಿ, ಅವಳ ವಾರ್ಧಿಕ್ಯ ಹೋಗಿ ನವಚೈತನ್ಯ ಮರಳಿತು ! ಕಾಲ ಕಳೆದಂತೆ ಇನ್ನೊಂದು ಮಗುವಿನ ತಾಯಿ ಆದ ಆಕೆ ತನ್ನ ಮಗುವಿಗೆ ಕಣಿಕಣ್ಣನ್ ಎಂದು ಹೆಸರಿಟ್ಟಳು. ತಿರುಮಳಿಶೈ ಅವರ ಪ್ರೀತಿ ಪಾತ್ರನಾಗಿ ಮಣಿಕಣ್ಣನ್ ಬೆಳೆದ ಜೊತೆಗೇ ಇದ್ದ.

ತಿರುಮಳಿಶೈ ಅವರದು ಯೋಗ ಮಾರ್ಗ, ಯೋಗಿಯ ಬದುಕು. ಅನಂತರ ಅವರು ಶಾಕ್ಯ, ನ್ಯಾಯ, ವೈಶೇಷಿಕ, ಸಾಂಖ್ಯ ಪತಂಜಲಿ ಹೀಗೆ ಎಲ್ಲ ಹಿರಿಯರ ಅಧ್ಯಯನ ಮಾಡಿ ಪರಶಿವನ ಭಕ್ತರಾದರು. ಮೌನ ವ್ರತ ಆಚರಿಸುತ್ತ ಒಂದು ಆಶ್ರಮದಲ್ಲಿದ್ದರು. ಯೋಗಾ ಯೋಗ ಪೇಯಾಳ್ವಾರರು, ತಿರುಮಳಿಶೈ ಅವರ ಯೋಗಶಕ್ತಿ ಕಂಡಿದ್ದ ಅವರಲ್ಲಿ ಬಂದು ಶ್ರೀ ವಿಷ್ಣುವಿನ ಅಂದರೆ ವೈಷ್ಣವ ಭಕ್ತಿ ಹಾದಿಗೆ ಒಲಿಯುವಂತೆ ಮಾಡುವ ಉದ್ದೇಶದಿಂದ ಪ್ರತಿ ನಿತ್ಯ ತಿರುಮಳಿಶೈ ಅವರ ಜತೆಗೇ ಇದ್ದು ಬಿಟ್ಟರು. ಹಾಗೆಯೇ ಅನೇಕ ವಿಧದಲ್ಲಿ ಪ್ರಯತ್ನಿಸಿ, ಪರ

ಶಿವನ ಪಾರ್ವತೀದೇವಿಯ ಕೃಪೆಗೆ ಪಾತ್ರರಾದರು. ಭಕ್ತಿ ಸಾರ ರೆಂದೇ ಹೆಸರಾದರು.

ಕಾಲಕ್ರಮೇಣ, ಅವರಿಗೆ ಮೊದಲ ಮೂವರು ಆಳ್ವಾರರಾದ ಪೊಯ್‌ಗೈ, ಪೂದತ್ತ, ಪೇಯಾಳ್ವಾರರ ಸಂಪರ್ಕ ಉಂಟಾಗಿ ನಾಲ್ವರೂ ಒಟ್ಟಿಗೆ ಮೈಲಾಪುರ (ಚೆನ್ನೈ)ಕ್ಕೆ ಬಂದು ಕೇಶವ ಸ್ವಾಮಿಯ ವೈಭವವನ್ನು ಕೊಂಡಾಡಿ ಆರಾಧಿಸಿದರು. ಅಲ್ಲಿಗೆ ಮಣಿಕಣ್ಣನ್ ಎಂಬುವ ಭಕ್ತರೂ ಬಂದು ತಿರುಮಳಿಶೈ ಆಳ್ವಾರ್ ಕೈಂಕರ್ಯನಿರತರಾದರು.

ಮುಂದೆ ಏನೇನೋ ಬದಲಾವಣೆ, ಆಳ್ವಾರರ ಬದುಕು, ದೇವದೇವ ಶ್ರೀ ವಿಷ್ಣುವಿನೆಡೆ ತಿರುಗಿಸಿತು. ಅದೂ, ಎಷ್ಟು ಔನ್ನತ್ಯಕ್ಕೆ ಆಳ್ವಾರರು ಪಳಿಸಿದರೆ ಶ್ರೀಮನ್ನಾರಾಯಣನನ್ನು ದರ್ಶಿಸುವ ಮಟ್ಟಕ್ಕೆ ಹೀಗೆ ಅನೇಕ ರೀತಿ ಸಾಧನೆ ಮಾಡಿದ ಆಳ್ವಾರರು ಹಾಡಿರುವ ಪ್ರಬಂಧಗಳಲ್ಲಿ ವಿಶೇಷತಃ ತಿರುವೇಂಗಡ ಶ್ರೀನಿವಾಸನನ್ನು ಬಹುವಾಗಿ ಕೊಂಡಾಡುತ್ತ ಪಾಶುರಗಳನ್ನು ಹಾಡಿದ್ದಾರೆ ನನ್ನ ಮುಂದೆ ಕಾಣಿಸಿಕೊ-ವೆಂಕಟಾದ್ರಿಯ ಈಶ ಶ್ರೀನಿವಾಸ ನಿನ್ನ ವೈಭವವನ್ನು ಮನುಷ್ಯ ಮಾತ್ರನಾಗಿ ನಾನು ಎಷ್ಟೆಂದು ಕೊಂಡಾಡಿಯೇನು, ಮಹಿಮೆ ನಿನ್ನದು ನಿನ್ನ ದಾಸ ನಾನು ನಿನ್ನದಯೆ ನನಗೆ ಸಾಕು ತಂದೆ ! ನಿನ್ನ ಭಕ್ತರ ಸಹವಾಸ, ನಿನ್ನ ಸಾನ್ನಿಧ್ಯವನ್ನು ತಂದೀಯುತ್ತದೆ. ಅಲ್ಲವೇ? ವಿಷ್ಣುವಿನ ಆದಿದೈವ ರೂಪವೇ ವೇಂಕಟೇಶಾವತಾರ ಅಲ್ಲವೇ? ಮಾರ್ಕಂಡೇಯರು ವೆಂಕಟಾಚಲವನ್ನು ಅದ್ಭುತ ರೀತಿಯ ಸ್ಥಾನವೆಂದು ಬಣ್ಣಿಸಿಲ್ಲವೇ! ನನಗೆ ನಿನ್ನ ದಿವ್ಯ ದರ್ಶನ ನೀಡು, ಉದ್ಧರಿಸು ಶ್ರೀನಿವಾಸ! ತಿರುಮಳಿಶೈ ಆಳ್ವಾರರು ಬಗೆಬಗೆಯಿಂದ ಶ್ರೀನಿವಾಸನನ್ನು ವರ್ಣಿಸಿದ್ದಾರೆ.

"ನಾನ್ಮುಕನ್ ತಿರುವಂದಾದಿ" ಪ್ರಬಂಧದ ಒಂದು ಪದ್ಯ ಉದಾಹರಿಸಿ ಆಳ್ವಾರರ ಭಕ್ತಿಪಾರಮ್ಯ ನಾವು ಅರಿಯಬಹುದು.

ನಾನ್ಮುಕನ್ನೈ ನಾರಾಯಣನ್ ಪಡೈತ್ತಾನ್ ನಾನ್‌ಮುಖನುಮ್
ತಾನ್‌ಮುಖಮಾಯಿ ಶಂಕರನ್ನೈ ತಾನ್‌ಪಡೈತ್ತಾನ್,
ಯಾನ್ಮ್‌ಹಮಾಯ್ ಅಂದಾದಿಮೇಲಿಟ್ಟು ಅರಿವಿತ್ತೇ ನಾಳ್
ಪೊರುಳ್ಳೈ ಶಿಂದಾಯಲ್ ಕೊಣ್ಮೆನೀರ್‌ತೇರ್‌ನ್ದು

ಶ್ರೀ ಮನ್ನಾರಾಯಣನು ಚತುರ್ಮುಖ ಬ್ರಹ್ಮನನ್ನು ಸೃಷ್ಟಿಸಿದನು. ಬ್ರಹ್ಮನು ಪರಮಭಾಗವತೆ ಶರಣರನ ಇರುವಿಕೆಗೆ ಕಾರಣ ಕಾರಕನಾದನು. ಇದು ವೇದದ ರಹಸ್ಯಾರ್ಥ ಶ್ರೀಮನ್ನಾರಾಯಣನ ಭಕ್ತಿ ರೂಪದ ಕೈಂಕರ್ಯ ಸರ್ವಥಾ ಉತ್ತಮ ಎಂದು ಆಳ್ವಾರರು ಹಾಡಿದ್ದಾರೆ (ಇಲ್ಲಿ ಅವರ ವೈಷ್ಣವನಿಷ್ಠ ಗಮನೀಯ.)

ಇದೇ ರೀತಿಯಲ್ಲಿ ತಿರುಚ್ಚಂದವಿರುತ್ತಂ ಧರ್ಮಜ್ಯೋತಿಯೆನ್ನ ಬೇಕಾಗುತ್ತದೆ. ಇಲ್ಲಿ ವೇದ, ಪುರಾಣ, ಇತಿಹಾಸ ಆಗಮ ಶಾಸ್ತ್ರಗಳನ್ನು ಆಳ್ವಾರರು ವಿವರಿಸುತ್ತಾರೆ. ನಾಲ್ಕು ಸಾಲುಗಳ ದೃಢ ಛಂದಸ್ಸಿನ ಈ ಪ್ರಬಂಧದ 120 ಪದ್ಯಗಳೂ ಸೊಗಸಾದವು. ಅರ್ಚಾರೂಪದ ಭಗವಂತನ ಸ್ವರೂಪವನ್ನು ಬೇರೆ ಬೇರೆ ದಿವ್ಯ ಕ್ಷೇತ್ರಗಳಲ್ಲಿ ಆಳ್ವಾರರು ವಿವರಿಸಿದ್ದಾರೆ.

ಶ್ರೀರಂಗ,ತಿರುಪತಿ, ಕುಂಭಕೋಣ,ಎಲ್ಲೆಡೆಯಲ್ಲಿಯೂ ವಿಶೇಷವಾಗಿ ಆಳ್ವಾರರು ವರ್ಣಿಸುವ ಕವಿಯಾಗುತ್ತಾರೆ. ಭಗವಂತನ ವಾತ್ಸಲ್ಯ, ಸೌಲಭ್ಯ ಆಳ್ವಾರರು ಅನುಭವಿಸಿದ್ದಾರೆ. ನಿಮಗೂ ಆ ಹಾದಿಯಲ್ಲಿ ನಡೆಯಲು ಆದೇಶಿಸುತ್ತಾರೆ.

ಈ ಕಾವ್ಯದ ನಡೆ ಕೂಡ ಅಷ್ಟೇ ಚೆಲುವೆಂದಿದೆ ಎನ್ನಬೇಕು.

ಆಳ್ವಾರರು ಭಗವಂತನ ಆರಾಧನೆಯಲ್ಲಿಯೇ ಪರಮ ಪದವೈದಿದರು. ಅವರ ಕಾವ್ಯ ಪ್ರಬಂಧ ನಮಗೆ ಸದಾ ಮಾರ್ಗದರ್ಶಿ ಉತ್ತಮ ಬದುಕನ್ನು ನಡೆಸಲು ನಿರ್ದೇಶಿಸುತ್ತದೆ.

## ಮಾರ್ಚ್ ತಿಂಗಳಲ್ಲಿ ಬರುವ ಹಬ್ಬ ಹರಿ ದಿನಗಳು

ಮಾರ್ಚ್-03 ಶ್ರೀಲಕ್ಷ್ಮೀಜಯಂತಿ, ಹೋಳಿ ಹಬ್ಬ, ಕುಮಾರಧಾರ ತೀರ್ಥ ಮುಕ್ಕೋಟಿ

ಮಾರ್ಚ್-15 ಅನ್ನಮಾಚಾರ್ಯ ವರ್ಧಂತಿ, ಶ್ರೀನಿವಾಸ ಮಂಗಾಪುರಂ, ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಪುಷ್ಪಯಾಗ

ಮಾರ್ಚ್ 17 ರಿಂದ 25 ರ ವರೆಗೆ ತಿರುಪತಿ, ಶ್ರೀಕೋದಂಡ ರಾಮಸ್ವಾಮಿಯವರ ಬ್ರಹ್ಮೋತ್ಸವಗಳು

ಮಾರ್ಚ್ 19 ಶ್ರೀ ಪರಾಭವನಾಮ ಸಂವತ್ಸರ ಯುಗಾದಿ

ಮಾರ್ಚ್ 21 ಮತ್ಸ್ಯ ಜಯಂತಿ

ಮಾರ್ಚ್ 24 ರಿಂದ ಏಪ್ರಿಲ್ 01 ರ ವರೆಗೆ, ವಾಯಲ್ಪಾಡು, ಶ್ರೀ ಪಟ್ಟಾಭಿರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

ಮಾರ್ಚ್ 24 ರಿಂದ 28 ರ ವರೆಗೆ ನಾಗುಲಾಪುರಂ, ಶ್ರೀವೇದ ನಾರಾಯಣ ಸ್ವಾಮಿಯವರ ಸೂರ್ಯಪೂಜೆ, ತೆಪ್ಪೋತ್ಸವಗಳು

ಮಾರ್ಚ್ 26 ರಿಂದ ಏಪ್ರಿಲ್ 03 ರ ವರೆಗೆ ಒಂಟಿಮಿಟ್ಟ, ಶ್ರೀಕೋದಂಡ ರಾಮಸ್ವಾಮಿಯವರ ಬ್ರಹ್ಮೋತ್ಸವಗಳು

ಮಾರ್ಚ್ 27 ಶ್ರೀ ರಾಮನವಮಿ

ಮಾರ್ಚ್ 30 ರಿಂದ ಏಪ್ರಿಲ್ 01 ರ ವರೆಗೆ ತಿರುಮಲೆ, ಸ್ವಾಮಿಯವರ ವಸಂತೋತ್ಸವಗಳು,ತಿರುಪತಿ, ಶ್ರೀಕೋದಂಡರಾಮ ಸ್ವಾಮಿಯವರ ತೆಪ್ಪೋತ್ಸವಗಳು

ಮಾರ್ಚ್ 24 ರಿಂದ ಏಪ್ರಿಲ್ 01 ರ ವರೆಗೆ ವಾಯಲ್ಪಾಡು, ಶ್ರೀಪಟ್ಟಾಭಿರಾಮ ಸ್ವಾಮಿಯವರ ಬ್ರಹ್ಮೋತ್ಸಗಳು

# ತಿಲ್ಲೈತಿರುಚ್ಚಿತ್ತಿರಕೂಟಂ
## (ಚಿದಂಬರಂ)

**ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**
**ಅನುವಾದ : ಸೂರ್ಯವಂಶಿ**

108 ದಿವ್ಯದೇಶಗಳಲ್ಲಿ ತಿಲ್ಲೈತಿರುಚ್ಚಿತ್ತಿರಕೂಟ ದಿವ್ಯ ದೇಶವು ಪ್ರಸಿದ್ಧವಾದುದು. ಈ ದಿವ್ಯದೇಶವು ತೆನ್‌ಪುಲಿ ಯೂರ್‌ಕೋವಿಲ್,ತಿಲ್ಲೈವನಂಕೋಯಿಲ್,ಚಿದಂಬರಂ ಎಂಬ ಹೆಸರುಗಳಿಂದ ಕರೆಯಲ್ಪಡುತ್ತಿದೆ. ಈ ದಿವ್ಯದೇಶವು ತಮಿಳುನಾಡಿನಲ್ಲಿನ ಚಿದಂಬರಂ ಎಂಬ ಪಟ್ಟಣದಲ್ಲಿದೆ. ಕಾಟ್ಟುಮನ್ನಾರ್‌ಕೋಯಿಲ್ ಎಂಬ ಸ್ಥಳದಿಂದ ಪಶ್ಚಿಮ ದಿಕ್ಕಿನಲ್ಲಿ 26 ಕಿ.ಮೀ. ದೂರದಲ್ಲಿ ಶ್ರೀಮುಷ್ಣಂ ಎಂಬ ಕ್ಷೇತ್ರದಿಂದ ಉತ್ತರ ಪಶ್ಚಿಮಕ್ಕೆ ತಿರುಮಹೀಂದ್ರಪುರ ಎಂಬ ದಿವ್ಯದೇಶದ ಉತ್ತರಕ್ಕೆ 48 ಕಿ.ಮೀ. ದೂರದಲ್ಲಿ ಸುಮಾರು 40 ಎಕರೆಗಳ ವಿಸ್ತೀರ್ಣದಲ್ಲಿ ನಾಲ್ಕು ಪ್ರಾಕಾರಗಳೊಂದಿಗೆ, ನಾಲ್ಕು ರಾಜ ಗೋಪುರಗಳೊಂದಿಗೆ ಪ್ರತಿಯೊಬ್ಬರೂ ಆಶ್ಚರ್ಯಕ್ಕೆ ಒಳಗಾಗುವ ರೀತಿಯಲ್ಲಿ ಈ ದಿವ್ಯ ದೇಶವು ಅತ್ಯಂತ ವೈಭವದಿಂದ ರಾರಾಜಿಸುತ್ತಿದೆ.

ಈ ದಿವ್ಯ ದೇಶದಲ್ಲಿ ಮೂಲಮೂರ್ತಿಯು, ಪೂರ್ವ ದಿಕ್ಕನ್ನು ಭೋಗ (ಯೋಗ) ಶಯನಭಂಗಿಯಲ್ಲಿ ಗೋವಿಂದ ರಾಜನ್ ಎಂಬ ದಿವ್ಯನಾಮದೊಂದಿಗೆ ಪ್ರಕಾಶಿಸುತ್ತಿದ್ದಾನೆ. ಇಲ್ಲಿ ಎರಡು ಉತ್ಸವ ಮೂರ್ತಿಗಳು ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ. ಇಬ್ಬರೂ ಕುಳಿತಿರುವ ಭಂಗಿಯಲ್ಲಿ ಉಪದೇಶ ಮುದ್ರೆಯೊಂದಿಗೆ ದೇವಾದಿದೇವನ್, ಪಾರ್ಥಸಾರಥಿ ಎಂಬ ಪವಿತ್ರವಾದ ಹೆಸರುಗಳೊಂದಿಗೆ ಒಂದು ಉತ್ಸವಮೂರ್ತಿಯು ಪ್ರಸಿದ್ಧಿ ಹೊಂದಿದ್ದರೆ, ಮತ್ತೊಂದು ಉತ್ಸವಮೂರ್ತಿ ಚಿತ್ತರ ಕೂಡತ್ತುಳ್ಳಾನ್ ಎಂಬ ಹೆಸರಿನೊಂದಿಗೆ ಇಬ್ಬರೂ ದೇವಿಯರೊಂದಿಗೆ ನೆಲೆಸಿದ್ದಾನೆ ಅಮ್ಮನವರು ಪ್ರತ್ಯೇಕವಾದ ಸನ್ನಿಧಿಯಲ್ಲಿ ಪುಂಡರೀಕವಲ್ಲಿ ಎಂಬ ಹೆಸರಿನೊಂದಿಗೆ ನೆಲೆಸಿದ್ದಾಳೆ, ಸಾತ್ವಿಕವಿಮಾನ, ಪುಂಡರೀಕ ಪುಷ್ಕರಿಣಿ ಈ ದಿವ್ಯದೇಶದಲ್ಲಿ ಶೋಭಿಸುತ್ತಿವೆ.

**ವಿಶೇಷತೆಗಳು :**

ಅಷ್ಟಾಧ್ಯಾಯ ಎಂಬ ಸಂಸ್ಕೃತ ವ್ಯಾಕರಣ ಸೂತ್ರಕರ್ತ ಮಹರ್ಷಿ ಪಾಣಿನಿಯು ಈ ದಿವ್ಯದೇಶದಲ್ಲಿ ನೆಲೆಗೊಂಡಿರುವ ಪರಮಶಿವನ ಆನಂದ ತಾಂಡವದಲ್ಲಿ ಅದ್ಭುತವಾದ ಡಮರುಗದಿಂದ ಹೊರಬಂದ ಶಬ್ದಗಳಲ್ಲಿ 'ಅಇಉಣ್' ಎಂಬ 14 ಸೂತ್ರಗಳನ್ನು ರಚಿಸಿದನೆಂದು ಹಾಗೇ ಸಾಹಿತ್ಯ ಶಾಸ್ತ್ರದಲ್ಲಿ ಪ್ರಸಿದ್ಧಿ ಪಡೆದಿರುವ ನಾಟ್ಯ ಶಾಸ್ತ್ರವೆಂಬ ಗ್ರಂಥವನ್ನು ಭರತ ಮಹಾಮುನಿಯು ಈ ಕ್ಷೇತ್ರದಲ್ಲೇ ರಚಿಸಿದರೆಂದು ಐತಿಹ್ಯವಿದೆ.

ಭಗವಂತ ಐದು ರೂಪಗಳಲ್ಲಿ ವ್ಯೂಹರೂಪ, ವಿಭವ ರೂಪ, ಈ ಎರಡೂ ಇಲ್ಲಿ ನಮಗೆ ಕಂಡು ಬರುತ್ತವೆ. ಮೂಲ ಮೂರ್ತಿ ಭೋಗಶಾಯಿಯಾಗಿ, ಉತ್ಸವಮೂರ್ತಿ ಕುಳಿತಿರುವ ಭಂಗಿಯಲ್ಲಿ ನಮಗೆ ಇಲ್ಲಿ ದರ್ಶನವನ್ನು ನೀಡುತ್ತಿದ್ದಾರೆ. ತಿರುಮಂಗೈ ಆಳ್ವಾರರು ಇಪ್ಪತ್ತು ಪಾಶುರಗಳಲ್ಲಿ, ಕುಲಶೇಖರ ಆಳ್ವಾರರು ಹತ್ತು ಪಾಶುರಗಳಲ್ಲಿ ಈ ಗೋವಿಂದರಾಜ ಸ್ವಾಮಿಗೆ ಮಂಗಳಾಶಾಸನವನ್ನು ಮಾಡಿರುವುದು ಇಲ್ಲಿ ವಿಶೇಷವಾಗಿದೆ.

**1. ಸ್ಥಳ ಪುರಾಣ :**

ಈ ದಿವ್ಯದೇಶದ ಬಗೆಗೆ ಸ್ಥಳ ಪುರಾಣವನ್ನು ಭವಿಷ್ಯೋತ್ತರ ಮತ್ತು ಬ್ರಹ್ಮಾಂಡಪುರಾಣಗಳಲ್ಲಿ ಕಾಣಬಹುದು. ತಂಜಕ ಮತ್ತು ಗಜಮುಖ, ದಂಡಕ ಎಂಬ ಮೂವರು ರಾಕ್ಷಸರು ಕಠಿಣವಾದ ತಪಸ್ಸನ್ನು ಮಾಡಿ,ಅತ್ಯಂತ ಶಕ್ತಿಯುತವಾದ ವರಗಳನ್ನು ಪಡೆದು, ದೇವತೆಗಳನ್ನು ಹಿಂಸಿಸುತ್ತಿರುವಾಗ ದೇವತೆಗಳೆಲ್ಲರೂ ಭಗವಂತನ ಮೊರೆಯನ್ನು ಹೊಕ್ಕರು, ಆಗ ದೇವ ದೇವನಾದ ಶ್ರೀಮನ್ನಾರಾಯಣನು ತನ್ನ ವಾಹನವಾದ ಗರುಡನ ಮೂಲಕ ತಂಜಕಗಜಮುಖರನ್ನು ಸಂಹರಿಸಿ ದಂಡಕನನ್ನು ತಾನೇ ಸಂಹಾರ ಮಾಡಿದ. ಆದರೂ ಈ ಮೂವರ ತಂಗಿಯರಾದ ಚಿಲ್ಲಿ, ದಿಲ್ಲಿ ಎಂಬುವವರು ಭಗವಂತನನ್ನು ಕುರಿತು ಘೋರವಾದ ತಪಸ್ಸನ್ನು ಮಾಡಿ ಭಗವಂತನ ಅನುಗ್ರಹದಿಂದ ಶ್ರೀಮುಷ್ಣಂ ಎಂಬ ದಿವ್ಯ ಕ್ಷೇತ್ರದಲ್ಲಿ ಚಿಲ್ಲಿಯು ಕಾವಲು ಕಾಯುವ ದೇವತೆಯಂತೆ, ಈ ತಿಲ್ಲೈ ತಿರುಚಿತ್ತರಕೂಟದಲ್ಲಿ ದಿಲ್ಲಿಯು ನೆರಳನ್ನು ನೀಡುವ ಒಂದು ವೃಕ್ಷವಾಗಿರುವ ವರವನ್ನು ಪಡೆದರೆಂದು ಸ್ಥಳ ಪುರಾಣವು ತಿಳಿಸುತ್ತಿದೆ.

| | |
|---|---|
| **ಮೂಲಮೂರ್ತಿ :** | **ಭೋಗಶಯನ, ಗೋವಿಂದರಾಜ ಸ್ವಾಮಿ** |
| **ಉತ್ಸವಮೂರ್ತಿಗಳು :** | **ದೇವಾದಿದೇವ ಮತ್ತು ಚಿತ್ತರ ಕೂಡತ್ತುಳ್ಳಾನ್** |
| **ಅಮ್ಮನವರು :** | **ಪುಂಡರೀಕವಲ್ಲಿ** |
| **ತೀರ್ಥ :** | **ಪುಂಡರೀಕ ಪುಷ್ಕರಿಣಿ** |
| **ಪ್ರತ್ಯಕ್ಷ :** | **ಪಾಣಿನಿ, ಪತಂಜಲಿ, ಪುಂಡರೀಕ ಋಷಿ ಕಣ್ವ ಋಷಿ** |
| **ಮಂಗಳಾಶಾಸನ :** | **ತಿರುಮಂಗೈ ಆಳ್ವಾರರು, ಕುಲಶೇಖರ ಆಳ್ವಾರರು.** |
| **ಆಗಮ :** | **ವೈಖಾನಸ ಆಗಮ** |

### 2. ಸ್ಥಳ ಪುರಾಣ :

ಕಳಿಂಗರಾಜ ಎಂಬ ಒಬ್ಬ ಮಹಾರಾಜನು ದ್ವಾಪರ ಯುಗದಲ್ಲಿ ಕಠೋರವಾದ ತಪಸ್ಸನ್ನು ಮಾಡಿ ಆ ಮೂಲಕ ಕಾವೇರ ಎಂಬ ಪುತ್ರನನ್ನು ಪಡೆದ. ಕಾವೇರನು ಮಾಡಿದ ತಪಸ್ಸಿನ ಫಲದಿಂದಾಗಿ ಪವಿತ್ರವಾದ ಕಾವೇರಿ ನದಿ ಅವನ ಮಗಳಾದಳು. ಕಾವೇರನ ತಂದೆ ಕಳಿಂಗರಾಜ ಮುಕ್ತಿಯನ್ನು ಪಡೆಯದೇ ಹಿಂಸೆಯನ್ನು ಅನುಭವಿಸುತ್ತಿರುವಾಗ ಕಾವೇರನು ತಂದೆಗಾಗಿ ಭಗವಂತನ ಆದೇಶದ ಪ್ರಕಾರ ಈ ತಿಲ್ಲೈವನಕ್ಕೆ ಬಂದು ತಪಸ್ಸು ಮಾಡಿ ತನ್ನ ತಂದೆಗೆ ಮುಕ್ತಿ ದೊರೆಯುವಂತೆ ಮಾಡಿದ.

### 3. ಸ್ಥಳ ಪುರಾಣ :

ವೀರಶೈವನಾದ ಕುಲೋತ್ತುಂಗಚೋಳನ ಕಾಲದಲ್ಲಿ ಮೂಲಮೂರ್ತಿಯನ್ನು ಸಮುದ್ರದಲ್ಲಿ ಹಾಕಿದಾಗ ಉತ್ಸವ ಮೂರ್ತಿ ಗೋವಿಂದರಾಜ ಸ್ವಾಮಿಯನ್ನು ಭಕ್ತರ ಸಹಾಯದಿಂದ ತಿರುಪತಿಗೆ ತೆಗೆದುಕೊಂಡು ಬಂದಾಗ ವಿಜಯನಗರದ ಸಾಮ್ರಾಜ್ಯದ ಒಡೆಯನಾದ ಅಚ್ಯುತರಾಯನ ಕಾಲದಲ್ಲಿ ಭಗವದ್ ರಾಮಾನುಜಾಚಾರ್ಯರ ಮೂಲಕ ತಿರುಚ್ಚಿತ್ತಿರಕೂಡ ಗೋವಿಂದರಾಜಸ್ವಾಮಿಯನ್ನು ತಿರುಪತಿಯಲ್ಲಿ ಪ್ರತಿಷ್ಠಾಪನೆಯನ್ನು ಮಾಡಲಾಯಿತು. ಆದ್ದರಿಂದ ಇಂದು ತಿರುಪತಿಯಲ್ಲಿ ದರ್ಶನಭಾಗ್ಯವನ್ನು ನೀಡುತ್ತಿರುವ ಗೋವಿಂದ



ರಾಜ ಸ್ವಾಮಿಯು ತಿರುಚ್ಚಿತ್ತರಕೂಡ ಭಗವಂತನೇ ಆಗಿದ್ದಾನೆ. ಹೀಗೆ ಅನೇಕ ಸ್ಥಳಪುರಾಣವನ್ನು ನಾವು ನೋಡಬಹುದು. ಹಾಗೆ ಕಣ್ವಮಹರ್ಷಿ ಈ ಸ್ವಾಮಿಯ ಅನುಗ್ರಹದಿಂದ ಮುಕ್ತಿಯನ್ನು ಪಡೆದರು. ಪುಂಡರೀಕವಲ್ಲಿ ನಾಯಿಕಾ ಸಮೇತನಾದ ಗೋವಿಂದರಾಜಸ್ವಾಮಿಯನ್ನು ದರ್ಶಿಸಿ ಭಕ್ತರು ತಮ್ಮ ಅಭೀಷ್ಟಗಳನ್ನು ಪಡೆಯುತ್ತಾರೆಂದು ಪ್ರತೀತಿ.

### ಧ್ಯಾನ ಶ್ಲೋಕ

ದಿವ್ಯಶ್ರೀಚಿತ್ರಕೂಟೇ ಕನಕಮಯಸಭಾ ತತ್ರ ಗೋವಿಂದರಾಜಃ
ಮೋದಾತ್ ಅದ್ಯಾಪಿ ನೃತ್ಯತ್ ಪಶುಪತಿವಿನುತಃ ಭೋಗಿ ಭೋಗೇ ಶಯಾನ।
ತತ್ರ ಶ್ರೀ ಪ್ರಂಡರೀಕಾ ಅತ್ಯಭಿಮತಫಲದಾ ಸಾತ್ವಿಕಂ ತದ್ವಿಮಾನಂ
ತಸ್ಮಿನ್ ಕಣ್ವಪ್ರಸನ್ನೋ ಹರಿದಿಗಭಿಮುಖಃ ತತ್ಸರಃ ಪುಂಡರೀಕಮ್॥

**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

# ಹರಿಕಥಾಮೃತ ಸಾರ ಮಹಿಮೆ ಅಪಾರ

- ಶ್ರೀಮತಿ. ಪ್ರಿಯ ಪ್ರಾಣೇಶ ಹರಿದಾಸ

80504 36752



**ಹಿಂದಿನ ಸಂಚಿಕೆಯಿಂದ**

(ನಾಡಿ ಪ್ರಕರಣ ಸಂಧಿ)

ಈ ನಾಡಿ ಪ್ರಕರಣ ಸಂಧಿಯಲ್ಲಿ ಭಗವಂತನ ನಾಡಿಗತ ರೂಪದಲ್ಲಿದ್ದು ಸಲಹುತ್ತಾನೆ ಎಂಬುದು ಈ ಸಂಧಿಯಲ್ಲಿ ತಿಳಿಸಿದ್ದಾರೆ.

**ಹರಿಕಥಾಮೃತಸಾರ ಗುರುಗಳ**
**ಕರುಣದಿಂದಾಪನಿತು ಪೇಳುವೆ**
**ಪರಮ ಭಾಗವದ್ಭಕ್ತರಿದನಾದ**
**ರಿದಿ ಕೇಳುವುದು**

ಪ್ರತಿ ಸಂಧಿಯಲ್ಲೂ ಈ ನುಡಿಯನ್ನು ಪುನರಾವರ್ತಿಸಿದ್ದಾರೆ.

**ನುಡಿ**

**ವಾಸುದೇವನು ಪ್ರಾಣಮುಖ ತ**
**ತ್ವೇಶರಿಂದಲಿ ಸೇವೆ ಕೈ ಕೊಳು**
**ತೀ ಶರೀರದೊಳಿಪ್ಪ ಮುವತ್ತಾರು**
**ಸಾಹಸ್ರ॥**

**ಈ ಸುನಾಡಿಗಳೊಳಗೆ ಶ್ರೀ ಭೂಮೀ ಸಮೇತ ವಿಹಾರಗೈವ**
**ಪರೇಶ ನಮಲ ಸುಮೂರ್ತಿಗಳ ಚಿಂತಿಸುತ ಹಿಗ್ಗುತಿರು॥**

ಭಗವಂತನು ನಮ್ಮ ದೇಹದ ಒಂದು ಭಾಗದಲ್ಲಿ ತತ್ವಾಭಿಮಾನಿ ಅಂತರ್ಗನಾದ ವಾಯುದೇವರಲ್ಲಿ ವಾಸುದೇವ ರೂಪದಿಂದ 36,000 ಪುರುಷ ನಾಡಿಯಲ್ಲಿ ಶ್ರೀ ಮತ್ತು ಭೂಮಿ ದೇವಿಯರೊಡನೆಯಿದ್ದು ವಿಹರಿಸುತ್ತಾನೆ. ಒಟ್ಟಾರೆ ದೇಹದ ಎಡಬಲ ಭಾಗದಲ್ಲಿ 32,000 ರೂಪದಿಂದ ಇರುತ್ತಾನೆ.

ನಮ್ಮ ದೇಹದ ಒಂದು ಭಾಗದಲ್ಲಿ ಪಾದದಲ್ಲಿ 12,000 ನಾಡಿ ದೇಹದ ಮಧ್ಯದಲ್ಲಿ 14,000 ತೋಳಿನಲ್ಲಿ, 4000 ತಲೆಯಲ್ಲಿ 6,000 ಈ ಮೂಲಕ ಎರಡು ಭಾಗದಲ್ಲಿ 76,000 ನಾಡಿಗಳಲ್ಲಿ ನಮ್ಮನ್ನು ಸಲಹುವನು ಎಂದು ಚಿಂತಿಸಬೇಕು.

ಒಬ್ಬ ಮನುಷ್ಯನ ಸರಾಸರಿ ನೂರು ವರುಷ ಅಂತ ತಿಳಿದರೆ 36,000 ದಿನಗಳಾಗುತ್ತವೆ. ಹಾಗೇ ನಮ್ಮ ದೇಹದಲ್ಲಿ ಸ್ತ್ರೀ ಪುರುಷ ರೂಪದಿಂದ ಇರುತ್ತಾನೆ ಎಂದು ಜ್ಞಾನದಿಂದ ಪೂಜೆ ಮಾಡಿದರೆ 36,000 ದಂಪತಿಗಳ ಅರ್ಚನೆಯ ಮಹಾಪುಣ್ಯ ಬರುತ್ತದೆ. ನಾಡಿಗಳಲ್ಲಿಯೂ ತತ್ವಾಭಿಮಾನಿಯಲ್ಲಿರುವ 14 ಲೋಕದಲ್ಲಿರುವ ಜೀವರನ್ನು ರಕ್ಷಿಸುವ ಶಾಶ್ವತನಾದ ಹರಿಯನ್ನು ನೋಡುತ್ತಾ ತತ್ವಾಭಿಮಾನಿ ದೇವತೆಗಳು ಆನಂದ ಪಡುತ್ತಾರೆ. ಬ್ರಹ್ಮಾದಿದೇವತೆ ಮತ್ತು ಲಕ್ಷ್ಮಿ ಜೊತೆ ಇರುತ್ತಾನೆ. ಸತ್ಯ ಸಂಕಲ್ಪನಾಗಿ ನಿತ್ಯದಲ್ಲಿಯೂ, ಎಡಬಲದಲ್ಲಿಯೂ ತತ್ವಾಭಿಮಾನಿಗಳು ಒಟ್ಟಾರೆ 48 ರೂಪದೊಳು ಅಂತರ್ಗತವಾಗಿ 32,000 ನಾಡಿಗಳಲ್ಲಿ 34 ಲಕ್ಷ 56 ಸಾವಿರ ರೂಪದಿಂದ ನಿತ್ಯ ಮಂಗಳಕಾರನಾಗಿ ಭಕ್ತರಿಗೆ ಸೇವಕನಾಗಿ ಸದಾ ರಕ್ಷಿಸುವನು.

ಭಗವಂತ ನಮ್ಮ ದೇಹದಲ್ಲಿ ಯಾವ ರೀತಿ ಇದ್ದಾನೆಂದರೆ ಧಾರದಲ್ಲಿ ಮಣಿಗಳನ್ನು ಪೋಣಿಸಿದ ರೀತಿ ಇದ್ದು ಸದಾ ರಕ್ಷಿಸುತ್ತಾನೆ. ಸುಷಮ್ನ ನಾಡಿಯಲ್ಲಿ ತುಂದಿ ಎಂಬ ಹೆಸರಿನಿಂದ ಇರುತ್ತಾನೆ.

ಈ ಸುಷಮ್ನ ನಾಡಿಯಲ್ಲಿರುವ ಬ್ರಹ್ಮಾದಿ ದೇವತೆಗಳು ಮೂಲೇಶ ನಾಮಕದಿಂದ ನಾರಾಯಣನ ಚಿಂತನೆ ಮಾಡುತ್ತಿರುತ್ತಾರೆ. ಜ್ಞಾನಿಗಳು 32000 ನಾಡಿಗಳಲ್ಲಿ ಭಾಗೀರಥಿ ಮೊದಲಾದ ತೀರ್ಥಗಳ ಚಿಂತನೆ ನಾಡಿನದಿಯಲ್ಲಿ ಸ್ನಾನವನ್ನು ಮಾಡುತ್ತಾ ಆನಂದದಿಂದಿರುತ್ತಾರೆ.

ದೇಹದ ಎಡ ಬಲದಲ್ಲಿರುವ ಬಲನಾಡಿಗಳಲ್ಲಿ ಬ್ರಹ್ಮ, ವಾಯು, ವಾಣಿ, ಮುಂತಾದವರು ಇದ್ದರೆ ಎಡ ನಾಡಿಯಲ್ಲಿ ಶೇಷ, ಗರುಡ, ಶಿವ, ಹಾಗೂ ಇವರ ಪತ್ನಿಯರು ಮತ್ತು ಷಣ್ಮಹಿಷಿಯರು ಇದ್ದಾರೆ. ಇವರೆಲ್ಲರಲ್ಲಿದ್ದು ನಾರಾಯಣನು ಜೀವರಿಗೆ ಅವರ ಯೋಗ್ಯತೆ ತಕ್ಕಂತೆ ಸಾಧನ ಮಾಡಿಸುತ್ತಾ ಭಕ್ತರನ್ನು ರಕ್ಷಿಸುತ್ತಾನೆ. ತುಂದಿಯಿಂದ ಶಿರ ಪರ್ಯಂತ ಬ್ರಹ್ಮ ದೇವರಿರುತ್ತಾರೆ. ಈ ನಾಡಿಯ ಹತ್ತು ಕವಲುಗಳು ಹನ್ನೊಂದು ಇಂದ್ರೀಯಗಳಿಗೆ ಬೆಸೆದಿವೆ. ಇಲ್ಲಿ ಸೂರ್ಯ, ಚಂದ್ರ, ವರುಣ, ಅಶ್ವಿನಿ ದೇವತೆಗಳು ನೆಲೆಸಿರುತ್ತಾರೆ. ಈ ಸುಷಮ್ನ ನಾಡಿಯಲ್ಲಿ ಎಲ್ಲಿಯೂ ಅಂಕಡೊಂಕು ಇರದೇ ವಾಯುದೇವರು ದೇಹದ ಹತ್ತು ದಿಕ್ಕಿನಲ್ಲಿ ರಕ್ಷಿಸುತ್ತಿರುತ್ತಾನೆ. ರಮಾದೇವಿಯೊಡನೆ ಇರುತ್ತಾ ಹಗಲು ರಾತ್ರಿ ಬ್ರಹ್ಮಾಂಡದಲ್ಲಿರುವ ಜೀವರನ್ನು ಮೋಹಿಸುತ್ತಾನೆ.

**ನುಡಿ**

**ಈ ತನುವಿನೊಳಗಿಹವು ಓತ ಪ್ರೋತರೂಪದಿ ನಾಡಿಗಳು**
**ಪುರುಹೂತಮುಖರಲ್ಲಿಹರು ತಮ್ಮಿಂದಧಿಕರೊಡಗೂಡಿ**
**ಭೀತಿಗೊಳಿಸುತ ದಾನವರ ಸಂಧಾತನಾಮಕ ಹರಿಯ ಗುಣ**
**ಸಂಪ್ರೀತಿಯಲಿ ಸದುಪಾಸನೆಯ ಗೈವುತಲೆ ಮೋದಿಪರು**

ಈ ದೇಹದೊಳಗೆ ಓತಪ್ರೋತವಾಗಿರುವ ನಾಡಿಗಳು ಇದ್ದಿದ್ದರಿಂದ ಇಲ್ಲಿಯೂ ಇಂದ್ರಾದಿ ದೇವತೆಗಳು ತಮ್ಮಿಂದ ಉತ್ತಮರಾದ ಬ್ರಹ್ಮಾದಿಗಳಿಂದ ಎಲ್ಲರೂ ದಾನವರನ್ನು ಹೆದರಿಸುತ್ತಾ ಸಂಧಾತ ನಾಮಕ ಹರಿಯನ್ನು ಸ್ಮರಿಸುತ್ತಾ ಆನಂದದಿಂದ ಇರುತ್ತಾರೆ. ಭಗವಂತ ದೋಷ ದೂರ ಹೇಗೆಂದರೆ ಭೂಮಿಯಲ್ಲಿ ವಾಸಿಸುವ ನೀರಿನಲ್ಲಿರುವ ಜೀವಜಂತು, ಆಕಾಶದಲ್ಲಿ ಹಾರಾಡುವ ಪಕ್ಷಿಗಳು, ಸಂಚರಿಸುವ ಎಲ್ಲ ವಿಧ

ಜೀವರಲ್ಲಿದ್ದು ಆ ಜೀವರಿಂದ ಕರ್ಮಕ್ಕನುಗುಣವಾಗಿ ನಿತ್ಯದಲ್ಲಿ ಮಾಡಿಸಿ ಫಲದ ಭೋಗ ಕೊಡುತ್ತಾನೆ. ಆದರೆ ಎಲ್ಲವೂ ಎಲ್ಲದರಲ್ಲಿಯೂ ಇದ್ದು ಮಾಡಿಸಿ, ಫಲವನ್ನು ಕೊಟ್ಟು ಎಲ್ಲದರಿಂದಲೂ ದೋಷವಿದೂರನಾಗಿ ರುತ್ತಾನೆ.

ಭಗವಂತ ಸರ್ವೋತ್ತಮನು ಸಣ್ಣವನಿರದೆ ನಾಯಿ, ಹಂದಿ, ಪಕ್ಷಿ, ಪ್ರಾಣಿ ಎಲ್ಲದರಲ್ಲಿಯೂ ಎಲ್ಲ ಕಡೆಯಲ್ಲಿಯೂ ಏಕಮೇವನಾಗಿ ಒಬ್ಬನೇ ಅನೇಕ ರೂಪಗಳಿಂದ ಅನೇಕ ನಾಮಗಳಿಂದ ಲಕ್ಷ್ಮಿ ಬ್ರಹ್ಮಾದಿ ಸಕಲ ದೇವತೆಗಳ ಮೂಲಕ ಪೂಜಿತನಾಗಿ ಸೇವೆ ಸ್ವೀಕರಿಸಿ, ರಕ್ಷಿಸುವನು.

ಭೋಗಿಸುವ ವಸ್ತುವಿನಲ್ಲಿದ್ದು **"ಭೋಗ್ಯ"**ನೆಂದು ಭೋಗ ಮಾಡು ವನಲ್ಲಿದ್ದು **"ಭೋಕ್ತ"** ಇರುತ್ತಾ ಅವರ ಯೋಗ್ಯತೆ ಅನುಗುಣವಾಗಿ ವೈರಾಗ್ಯ, ಭಕ್ತಿ , ಜ್ಞಾನ ನೀಡುವನು. ಅಯೋಗ್ಯರಿಗೆ ತನ್ನಲ್ಲಿ ದ್ವೇಷಾದಿ ಕೊಡುವನು. ಶ್ರೀ ಹರಿಯು ನಿತ್ಯದ ಸಂಸಾರದಲ್ಲಿ ಬೇಡುವ ಹಾಗೂ ಕೊಡುವವರಲ್ಲಿದ್ದು ಆಡಿಸುವನು. ಉದಾಹರಣೆಗೆ ಹೇಳ ಬೇಕಾದರೆ ಬಲಿ ಮತ್ತು ವಾಮನ ಪ್ರಸಂಗ ಮತ್ತು ರಾಮ ಮಾರೀಚಿ ಪ್ರಸಂಗ.

**ನುಡಿ :**

**ತ್ರಿಪದ ತ್ರಿದಶಾಧ್ಯಕ್ಷ ತ್ರಿಸ್ಥ ತ್ರಿಪಥಗಾಮಿನಿಪಿತ ತ್ರಿವಿಕ್ರಮ**
**ಕೃಪಣ ವತ್ಸಲ ಕುವಲಯದಳಶ್ಯಾಮ ನಿಸ್ಸೀಮ ॥**
**ಅಪರಿಮಿತ ಚಿತ್ಸುಖ ಗುಣಾತ್ಮಕ ವಪುಷ ವೈಕುಂಠಾದಿ**
**ಲೋಕಾಧಿಪ ತ್ರಯೀಮಯ ತನ್ನವರ ನಿಷ್ಕಪಟದಿಂ ಪೊರೆವ ॥25॥**

ಅಂದರೆ ಮೂರು ಲೋಕದಲ್ಲಿ ವೇದಗಳಲ್ಲಿಯೂ, ಗಂಗೆಯ ಜನಕನಾದ ತ್ರಿವಿಕ್ರಮನಾಗಿ ದೇವತೆಗಳ ಅಧ್ಯಕ್ಷನಾಗಿ ದೀನರ ವಾತ್ಸಲ್ಯ ರಕ್ಷಕನಾಗಿ, ಕನ್ನೈದಿಲೆ ಶ್ಯಾಮ ವರ್ಣದವನಾಗಿ ಪರಿಮಿತಿಯಿಲ್ಲದ ಜ್ಞಾನ ಆನಂದದ ದೇಹವುಳ್ಳವನಾಗಿ ಭಕ್ತರನ್ನು ರಕ್ಷಿಸುವನು.

ಹರಿಯ ವ್ಯಾಪ್ತಿ ಹೇಗಿದೆ ಎಂದರೆ ನೀರಿನಲ್ಲಿ ಉಪ್ಪು ಕರಿದಾಗ ಕಾಣದೇ ನಾಲಿಗೆ ರುಚಿಗೆ ತಿಳಿಯುವಂತೆ ಚರಾಚರದೊಳಗೆ ಅಪರಿ ಮಿತನಾಗಿ ಇರುವನು.ಮೂರು ಜಗತ್ತನ್ನು ಪೋಷಿಸುವ ದೋಷವಿದೂರ ಶೇಷನನ್ನೇ ಹಾಸಿಗೆ ಮಾಡಿ ಮಲಗಿ ಕೊಂಡವ, ವಿಭೀಷಣನಿಗೆ ಪ್ರಿಯ ನಾದ, ಅರ್ಜುನನ ಗೆಳೆಯನಾದ ನಾರಾಯಣನು ನಿಷ್ಕಾಮ ಭಕುತರಿಗೆ ಇಷ್ಟಾರ್ಥ ಕೊಡುವನು ಎಂದು ವರ್ಣಿಸಲಾಗಿದೆ.

ನಾರಾಯಣನು ದೇವದಾನವರಲ್ಲಿದ್ದು ಯೋಗ್ಯತಾನುಸಾರ ಕರ್ಮವ ಮಾಡಿಸಿ ಜನನ ಮರಣಾದಿ ಎಲ್ಲದರಲ್ಲಿದ್ದು ನಮ್ಮೊಡನೆ ಜನಿಸುವ, ಜೀವಿಸುವ, ಒಟ್ಟಾರೆ ಭೂಮಿಯಲ್ಲಿನ ನಿಧಿ ಸರ್ಪ ಕಾಯು ವಂತೆ ನಮ್ಮ ಜೊತೆ ಇದ್ದು ರಕ್ಷಿಸುವನು.

ಹರಿಯ ವಂಶದಲ್ಲಿರುವ ಮೂರು ಲೋಕಗಳು ಪ್ರಳಯ ಕಾಲದಲ್ಲಿ ತನ್ನ ಉದರದೊಳಗೆ ಲೀನ ಮಾಡಿಸುವ ಸೃಷ್ಟಿಯಲ್ಲಿ ಕಾಣು ವಂತೆ ಮಾಡುವನು.ಇಷ್ಟೆಲ್ಲಾ ನಮ್ಮನ್ನು ತಾಯಿಯಂತೆ ರಕ್ಷಿಸುವ ಭಗವಂತನು ಲಕ್ಷ್ಮಿದೇವಿಯಿಂದ ಅಲಂಗಿತನಾಗಿ ಸ್ವೇಚ್ಛೆಯಿಂದ ಅವ ತರಿಸುವ ಬಂಗಾರದ ಬಣ್ಣ ಹೊಂದಿರುವ ಗರುಡನನ್ನು ಶ್ರೇಷ್ಠ ವಾಹನ ನ್ನಾಗಿ ಮಾಡಿಕೊಂಡ ಅಭಯವರದಾಯಕನಾದ ಅನಂತ ಸೂರ್ಯ ಚಂದ್ರ ಕಾಂತಿಯುಳ್ಳ ನಾರಾಯಣನನ್ನು ಚಿಂತಿಸಿ ನಮಸ್ಕಾರ ಮಾಡಿದರೆ ಸಕಲ ಅಭೀಷ್ಟೆ ಕೊಡುವನು.

ಒಬ್ಬ ಮನುಷ್ಯನ ಆಯುಷ್ಯ 116 ಅಂದರೆ ಚಾಂದ್ರಮಾನದ ಪ್ರಕಾರ 100 ಆಯುಷ್ಯದಲ್ಲಿ ಪ್ರಾತಃಸವನ ಎಂದರೆ ಜನ್ಮದಿಂದ 24 ವರ್ಷಗಳಲ್ಲಿ ವಸುವನಲ್ಲಿದ್ದು ಪವನಾಂತರ್ಗತನಾಗಿ ಪ್ರದ್ಯುಮ್ನನಾಗಿ ರುವನು ಮಾಧ್ಯಂದಿನಸವನ ಎಂದರೆ ಮುಂದಿನ 44 ವರ್ಷದಲ್ಲಿ ರುದ್ರನಲ್ಲಿದ್ದ ಪ್ರಾಣಾಂತರ್ಗತನಾಗಿ ಸಂಕರ್ಷಣನಾಗಿರುವನು.

ಇನ್ನು ಮುಂದಿನ 48 ವರ್ಷದಲ್ಲಿ ಆದಿತ್ಯನಲ್ಲಿದ್ದು ಪ್ರಾಣಾಂತ ರ್ಗತನಾಗಿ ವಾಸುದೇವ ರೂಪದಿಂದ ಇರುವನು. ಈ ಮೂರು ರೂಪ ಗಳನ್ನು ಚಿಂತಿಸಿ ದಿನಗಳೆಂಬ ಆಹುತಿಗಳಿಂದ ಅರ್ಚಿಸುತ್ತಾ ಸುಖ ವಾಗಿರಬೇಕು. 83520 ರೂಪದಿಂದ ಹಗಲು ರಾತ್ರಿಗಳಿಗೆ ಅಧಿಪತಿ ಯಾದ ಭಾರತಿ ಪ್ರಾಣರಲ್ಲಿದ್ದು ಭಕ್ತರ ಪಾಪಗಳನ್ನು ತಡೆದು ಹಿಂಕಾರ, ನಿಧನ, ಪ್ರಥಮ ರೂಪದಿಂದ ಪಿತೃಗಳನ್ನು ರಕ್ಷಿಸುವನು.

ನಮ್ಮ ದಿನದ ಶ್ವಾಸ ತಿಂಗಳಿಗೆ ಲೆಕ್ಕಿಸಿದರೆ 6 ಲಕ್ಷ 48 ಸಾವಿರ ವಾಗುವುದು. ಒಂದು ವರುಷಕ್ಕೆ 77 ಲಕ್ಷ 76 ಸಾವಿರ ಶ್ವಾಸ ಜಪ ಹಾಗೇ ನಿತ್ಯದಲ್ಲಿಯೂ ನಮ್ಮ ನಾಲ್ಕು ದೇಹಗಳ 86 ಸಾವಿರದ 4 ನೂರು ಶ್ವಾಸ ಜಪ ಮಾಡುತ್ತಾ ತ್ರಿವಿಧ ಜೀವರಲ್ಲಿ ವಾಯುದೇವರು ಹಂಸರೂಪ ದಿಂದ ಇದ್ದು 116 ಆಯಸ್ಸಿನವರಿಗೆ ಅರ್ಪಿಸುವರೆಂದು ತಿಳಿದರೆ ಸುಧಾ ಮನಿಗೆ ಅನುಗ್ರಹಿಸಿದಂತೆ ಅನುಗ್ರಹಿಸುವನು.

**ನುಡಿ :**

**ಶ್ರೀಧವ ಜಗನ್ನಾಥವಿಠಲನು**
**ತಾ ದಯದಿ ವದನದೊಳು**
**ನುಡಿದೋಪಾದಿಯಲಿ ನಾ**
**ನುಡಿದೆನಲ್ಲದೆ ಕೇಳಿ ಬುಧಜನರು॥**
**ಸಾಧುಲಿಂಗ ಪ್ರದರ್ಶಕರು**
**ನಿಷೇಧಿಸಿದರೇನಹುದು**
**ಎನ್ನಪರಾಧವೇನಿದರೊಳಗೆ**
**ಪೇಳ್ವುದು ತಿಳಿದು ಕೋವಿದರು॥**

ಶ್ರೀಪತಿಯಾದ ಜಗನ್ನಾಥವಿಠಲನು ನಾಲಿಗೆಯಲ್ಲಿದ್ದು ನುಡಿಸು ವಂತೆ ನಾನು ನುಡಿದಿದ್ದೇನೆ. ಜ್ಞಾನಿಗಳು ಕೇಳಬೇಕು. ತಪ್ಪಿದ್ದರೆ ಜ್ಞಾನಿ ಗಳು ತಿಳಿಸಿ ಹೇಳಬೇಕು ಎಂದು ಶ್ರೀ ಜಗನ್ನಾಥದಾಸರು ನಮ್ರ ವಿನಯ ದಿಂದ ಹೇಳಿದ್ದಾರೆ.

ಈ ನಾಡಿ ಪ್ರಕರಣ ಸಂಧಿ ತಿಳಿದಾಗ ದೇಹದ ಒಳಗು ಹೊರಗು ಭಗವಂತ ಇದ್ದು ಸಲಹುವ ರೀತಿ ನಾಡಿಗತ ಅಂಕೆ ಸಂಖ್ಯೆ ಸಹಿತ ಕೊಟ್ಟಿದ್ದು ನೋಡಿದರೆ ಇಂದಿನ ವಿಸ್ಮಯ ವಿಜ್ಞಾನ ಜಗತ್ತು ನಮ್ಮ ವೇದ ಶಾಸ್ತ್ರಗಳು ಮತ್ತು ಧರ್ಮದ ಬಗ್ಗೆ ಮೂಗಿನ ಮೇಲೆ ಬೆರಳು ಇಟ್ಟು ಕೊಳ್ಳುವ ಹಾಗೇ ಮಾಡುತ್ತದೆ.



**(ಮುಂದುವರೆಯುತ್ತದೆ)**

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿರುವ ತಾಲ್ಲೂಕು ಕೇಂದ್ರದಿಂದ 19 ಕಿ.ಮೀ. ದೂರದಲ್ಲಿರುವ ಐತಿಹಾಸಿಕ ಹಾಗೂ ನಿಸರ್ಗರಮಣೀಯ ಸುಂದರ ಗ್ರಾಮ. ಇದು ಮಿಡಿಗೇಶಿಯು ಬೆಟ್ಟದ ತಪ್ಪಲಿನಲ್ಲಿದೆ. ಹಿಂದೆ ಮಿಡಿಗೇಶಿಯು ಮಿಡಿಗೇಶಿ ನಾಡು ಎಂಬ ಆಡಳಿತ ಪ್ರದೇಶದ ಕೇಂದ್ರ ಸ್ಥಾನವಾಗಿರುವುದಕ್ಕೆ ಶಾಸನದ ಆಧಾರವಿದೆ. ಮಧುಗಿರಿಯ ಸಮೀಪದಲ್ಲಿರುವ ಹೊಸಕೆರೆಯಲ್ಲಿ ದೊರೆತಿರುವ ಸಾ.ಶ. 1503 ರ ಶಾಸನದಲ್ಲಿ ಹೊಸಕೆರೆಯು ಮಿಡಿಗೇಶಿ ನಾಡಿಗೆ ಸೇರಿದ ಪ್ರದೇಶ ಎಂದಿದೆ. ವಿಜಯನಗರಸರ ಪೂರ್ವಕ್ಕೂ ಊರು ಅಸ್ತಿತ್ವದಲ್ಲಿದ್ದು. ಮಿಡಿಗೇಶಿಯನ್ನು ನಾಗಿರೆಡ್ಡಿ ಎಂಬ ಪಾಳೆಗಾರನು ಆಡಳಿತ ನಡೆಸಿದ್ದನು. ಮಿಡಿಗೇಶಿಯನ್ನು ಮಧುಗಿರಿ ಮಹಾನಾಥಪ್ರಭುಗಳು, ನಾಗಿರೆಡ್ಡಿ, ಹರತಿಯ ವಂಶಸ್ಥರು ಮೈಸುರು ಒಡೆಯರ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಆಳ್ವಿಕೆ ನಡೆಸಿದ್ದರು. ಮಿಡಿಗೇಶಿಯ ಬೆಟ್ಟದ ಮೇಲೆ ಒಂದು ಸುಂದರವಾದ ಕೋಟೆಯಿದೆ. ಕೋಟೆಯಲ್ಲಿ ಬತೇರಿಗಳು ಕಾವಲುಗಾರರ ತಂಗುದಾಣಗಳು, ಗೋಡೆಯಲ್ಲಿ ಪಿರಂಗಿ ರಂಧ್ರಗಳು, ಪ್ರವೇಶದ್ವಾರಗಳಲ್ಲಿ ಕಮಾನುಗಳು, ಗುಮ್ಮಟಾಕಾರದ ಛಾವಣಿಗಳಿವೆ. ಬೆಟ್ಟದ ಮೇಲೆ ನೀರಿನ ದೋಣಿ, ಮಸೀದಿ, ಮದ್ದಿನ ಉಗ್ರಾಣ, ಧಾನ್ಯದ ಕಣಜಗಳು ದೇವಾಲಯಗಳು ಮುಂತಾದವುಗಳೂ ಈಗಲೂ ಇಲ್ಲಿನ ಗತ ವೈಭವಕ್ಕೆ ಸಾಕ್ಷೀಭೂತವಾಗಿದೆ.

**ವೆಂಕಟೇಶ್ವರ ದೇವಾಲಯ :**

ಮಿಡಿಗೇಶಿಯ ಬೆಟ್ಟವನ್ನು ಏರುವ ದಾರಿಯಲ್ಲಿಯೇ ಭವ್ಯವಾದ ವೆಂಕಟೇಶ್ವರ ದೇವಾಲಯವಿದೆ. ಮಿಡಿಗೇಶಿಯ ಅರಮನೆ ಎಂದು ಗುರುತಿಸುವ ಸ್ಥಳದಿಂದ ದೇವಾಲಯಕ್ಕೆ ದಾರಿಯನ್ನು ರಚಿಸಲಾಗಿದೆ. ಹೀಗಾಗಿ ಈ ದೇವಾಲಯವು ಪಾಳೆಯಗಾರರ ಪರಿವಾರದವರು ನಡೆದುಕೊಳ್ಳುವ ದೇವಾಲಯವಾಗಿರುವುದು. ದೇವಾಲಯವು ಎತ್ತರವಾದ ಪ್ರದೇಶದಲ್ಲಿದ್ದು ಪ್ರವೇಶಿಸಲು ಮೆಟ್ಟಿಲುಗಳಿವೆ. ದೇವಾಲಯವು ವಿಶಾಲವಾದ ಪ್ರಾಕಾರದಲ್ಲಿದ್ದು ಸುತ್ತಲೂ ರಕ್ಷಣಾ ಗೋಡೆಯಿದೆ. ದೇವಾಲಯಕ್ಕೆ ಪೂರ್ವದಿಕ್ಕಿನಲ್ಲಿ ಮತ್ತು ದಕ್ಷಿಣದಿಕ್ಕಿನಲ್ಲಿ ಪ್ರವೇಶ ಮಂಟಪಗಳಿವೆ. ದಕ್ಷಿಣ ದಿಕ್ಕಿನ ಪ್ರವೇಶ ಗೋಪುರವು ಗಾರೆಯಿಂದ ರಚಿತವಾದ ಸುಮಾರು 300 ವರ್ಷಗಳ ಹಿಂದಿನದು, ಪೂರ್ವದಿಕ್ಕಿನ ದ್ವಾರದ ಮೇಲೆ ಮೂರು ಸ್ತರಗಳ ಗೋಪುರವಿದೆ. ಜೀರ್ಣಾವಸ್ಥೆಯಲ್ಲಿದ್ದ ದೇವಾಲಯವನ್ನು ರಾಜ್ಯ ಸರ್ಕಾರ ಮತ್ತು ಸ್ಥಳೀಯರ ನೆರವಿನಿಂದ ಮೂಲಸ್ವರೂಪಕ್ಕೆ ಧಕ್ಕೆಯಾಗದಂತೆ ಜೀರ್ಣೋದ್ಧಾರ ಮಾಡಿ ಪ್ರಾಚೀನ ದೇವಾಲಯವನ್ನು ಸಂರಕ್ಷಿಸಿರುವುದು ಅಭಿನಂದನಾರ್ಹ, ಮಿಡಿಗೇಶಿಯ ವೆಂಕಟೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ರಂಗಮಂಟಪವನ್ನು ಒಳಗೊಂಡ ರಚನೆಯಾಗಿದೆ. ಗರ್ಭಗುಡಿಯ ಮೇಲೆ ಇತ್ತೀಚಿನ ಶಿಖರವಿದೆ.

# ಮಿಡಿಗೇಶಿ ಶ್ರೀ ವೆಂಕಟೇಶ್ವರ ದೇವಾಲಯ

– ಕೆಂಗೇರಿ ಚಕ್ರಪಾಣಿ
94483 86886

63

ಕರ್ನಾಟಕ ವೈಷ್ಣವ ದೇವಾಲಯಗಳು



ಮಿಡಿಗೇಶಿಯ ವೆಂಕಟೇಶ್ವರನ ದೇವಾಲಯವು ಸುಮಾರು 400 ವರ್ಷಗಳ ಹಿಂದಿನ ಆಲಯವಾದರೂ ಗರ್ಭಗುಡಿಯಲ್ಲಿರುವ ವೆಂಕಟೇಶ್ವರನ ಮೂರ್ತಿಯು ಹೊಯ್ಸಳ ಶೈಲಿಯಲ್ಲಿದ್ದು ಸುಮಾರು 13-14 ನೆಯ ಶತಮಾನದ್ದು. ಸುಮಾರು 5 ಅಡಿ ಎತ್ತರವಿರುವ ವೆಂಕಟೇಶ್ವರನ ಮೂರ್ತಿಯು ಬಹಳ ಆಕರ್ಷಕವಾಗಿದೆ. ಒಮ್ಮೆಲೆ ಗದುಗಿನ ವೀರನಾರಾಯಣ ಸ್ವಾಮಿಯ ಮೂರ್ತಿಯನ್ನು ನೆನಪಿಸುವ ಪ್ರಸ್ತುತ ವಿಗ್ರಹವು ಸ್ಥಾನಕ ಭಂಗಿಯಲ್ಲಿದ್ದು ದೇವನ ಸುತ್ತಲು ಪ್ರಭಾವಳಿಯಲ್ಲಿ ನಿಲುವಿನ ಭಂಗಿಯಲ್ಲಿರುವ ಮಹಾವಿಷ್ಣುವಿನ ದಶಾವತಾರದ ಕಿರುಶಿಲ್ಪಗಳಿವೆ. ಗರುಡ ಪೀಠದ ಮೇಲಿರುವ ವೆಂಕಟೇಶ್ವರನ ಮೂರ್ತಿಯ ಮೇಲಿನ ಕೈಗಳಲ್ಲಿ ಚಕ್ರ, ಶಂಖಗಳನ್ನು ಹಿಡಿದಿದ್ದು, ಕೆಳಬಲಗೈ ವರದ ಹಸ್ತ ಮತ್ತು ಕೆಳಎಡಗೈ ಕಟಿ ಹಸ್ತದಲ್ಲಿದೆ, ವರದ ಹಸ್ತದಲ್ಲಿ ಪದ್ಮ ಲಾಂಛನವಿದೆ. ಸ್ವಾಮಿಯು ಕಿರೀಟಮಕುಟ ವನ್ನು ಧರಿಸಿರುವನು. ದೇವನು ಧರಿಸಿರುವ ಕೊರಳಿನ ಹಾರ, ಉಪವೀತ, ಭುಜ ಕೀರ್ತಿ, ಕೈಗಳಿಗೆ, ಕಾಲಿಗೆ ಧರಿಸಿರುವ ಕಡಗ, ಕೊರಲಿಗೆ ಧರಿಸಿರುವ ಹಾರ ಎಲ್ಲವೂ ಸೂಕ್ಷ್ಮ ಕೆತ್ತನೆಗಳಿಂದ ಕೂಡಿವೆ. ಶ್ರೀನಿವಾಸನ ಪಾದದ ಬಳಿ ಇಕ್ಕೆಲಗಳಲ್ಲಿ ಶ್ರೀದೇವಿ, ಭೂದೇವಿಯರ ಸಣ್ಣ ಮೂರ್ತಿಗಳಿವೆ. ನವರಂಗದಲ್ಲಿ ನಾಲ್ಕು ಸ್ತಂಭ ಗಳಿದ್ದು ವಿಜಯನಗರ ಶೈಲಿಯಲ್ಲಿದೆ. ಇಲ್ಲಿ ಉತ್ಸವಮೂರ್ತಿ ಲೋಹದ ಗರುಡ ದೇವನನ್ನು ಇರಿಸಲಾಗಿದೆ.

ಈ ದೇವಾಲಯದ ಮುಖಮಂಟಪವು ಅಂದವಾಗಿ ಮೂಡಿ ಬಂದಿದೆ. ಇಲ್ಲಿ ಒಟ್ಟು 12 ಸ್ತಂಭಗಳಿದ್ದು ಸಿಂಹಯಾಳಿ ಸ್ತಂಭಗಳು, ಸಂಯುಕ್ತ ಸ್ತಂಭಗಳಿಂದ ಕೂಡಿವೆ. ಇಲ್ಲಿರುವ ಒಂದು ಸ್ತಂಭದ ಮೇಲೆ ಪ್ರಣಾಮ ಮುದ್ರೆಯಲ್ಲಿರುವ ವ್ಯಕ್ತಿಯ ಶಿಲ್ಪವಿದ್ದು, ಅದನ್ನು ದೇವಾಲಯದ ಸಂಸ್ಥಾಪಕನಾಗಿ ರೆಡ್ಡಿಯ ಶಿಲ್ಪವಿರಬೇಕೆಂದು ಗುರ್ತಿಸಲಾಗಿದೆ.ರಂಗಮಂಟಪದ ನಡುವಿನ ನಾಲ್ಕು ಸ್ತಂಭಗಳಲ್ಲಿ ನಾರದ, ವಿಶ್ವಾಮಿತ್ರ, ವಸಿಷ್ಟ, ಕಶ್ಯಪರ ವಿಗ್ರಹಗಳನ್ನು ನಿರ್ಮಿಸಲಾಗಿದೆ. ಮುಖಮಂಟಪದ ಸ್ತಂಭಗಳಲ್ಲಿ ಕೃಷ್ಣನ ಲೀಲೆಗಳನ್ನು ಉಬ್ಬು ಶಿಲ್ಪವಾಗಿ ಬಿಡಿಸಲಾಗಿದೆ. ಗರ್ಭಗುಡಿಗೆ ನೇರವಾಗಿ ಗರುಡದೇವನ ಸಣ್ಣ ಗುಡಿಯಿದೆ. ಇಲ್ಲಿದ್ದ ಧ್ವಜಸ್ತಂಭವೂ ಇಪ್ಪತ್ತು ಅಡಿ ಎತ್ತರವಾಗಿದ್ದು ಭಗ್ನವಾಗಿರುವುದರಿಂದ ದೇವಾಲಯದ ಹೊರಭಾಗದಲ್ಲಿ ನಿಲ್ಲಿಸಲಾಗಿದೆ. ವೆಂಕಟೇಶ್ವರ ದೇವಾಲಯದ ದಕ್ಷಿಣ ದಿಕ್ಕಿನ ಒಳಗೋಡೆಯಲ್ಲಿ ದೊಡ್ಡ ಗಾತ್ರದ ಕಾಳಿಂಗನ ಮೇಲೆ ನರ್ತಿಸುತ್ತಿರುವ ಬಾಲಕೃಷ್ಣನ ಅಂದದ ಮೂರ್ತಿಯಿದೆ. ದೇವಾಲಯದ ಉತ್ತರ ದಿಕ್ಕಿನಲ್ಲಿ ಮಾರುತಿಯ ಗುಡಿಯಿದೆ. ಮಿಡಿಗೇಶಿಯ ಶ್ರೀದೇವಿ, ಭೂದೇವಿ ಸಹಿತ ವೆಂಕಟರಮಣ ಸ್ವಾಮಿಯ ಬ್ರಹ್ಮ ರಥೋತ್ಸವವು ಪ್ರತಿವರ್ಷ ಮಾಘಶುದ್ಧ ಚತುರ್ದಶಿಯಿಂದ ದಿನ ಶ್ರೀಸ್ವಾಮಿ ಯವರಿಗೆ ಅಭಿಷೇಕ, ಗೋಪೂಜೆ, ಅಂಕುರಾರ್ಪಣೆ, ಕಲಸಸ್ಥಾಪನೆ ಮುಂತಾದ ಧಾರ್ಮಿಕ ಸೇವಾಕಾರ್ಯಗಳು ನಡೆದು ಸಂಜೆ ಧ್ವಜಾರೋಹಣ ಮತ್ತು ಶ್ರೀನಿವಾಸ ಕಲ್ಯಾಣೋತ್ಸವವು ಜರುಗುತ್ತದೆ. ದ್ವಿತೀಯ ದಿನ ಹುಣ್ಣಿಮೆಯಲ್ಲಿ 11-15 ರಿಂದ 12-15 ರವರೆಗೆ ಸಲ್ಲುವ ಲಗ್ನದಲ್ಲಿ ಬ್ರಹ್ಮರಥೋತ್ಸವವು ಬಹು ವಿಜೃಂಭಣೆಯಿಂದ ನೆರವೇರುತ್ತದೆ. ಅದೇ ದಿನ ಸಂಜೆ ಗಜೇಂದ್ರಮೋಕ್ಷ, ಶಯನೋತ್ಸವಗಳ ಆಚರಣೆ ನಡೆಯುತ್ತದೆ. ಮೂರನೆಯ ದಿನ ಪಾಡ್ಯದಂದು ಶ್ರೀಸ್ವಾಮಿಯವರಿಗೆ ಸುಪ್ರಭಾತ



ಸೇವೆ, ಮೂಲಮಂತ್ರ ಹೋಮ, ಮಹಾ ಪೂರ್ಣಾಹುತಿ, ಕಲಶವಿಸರ್ಜನೆ, ಧ್ವಜಾವರೋಹಣ, ಚಕ್ರಸ್ನಾನ ದೊಂದಿಗೆ ಅದ್ದೂರಿಯ ರಥೋತ್ಸವಕ್ಕೆ ತೆರೆ ಬೀಳುತ್ತದೆ.

ಮಿಡಿಗೇಶಿಯ ಮಲ್ಲೇಶ್ವರ ದೇವಾ ಲಯದ ಅತೀ ಸಮೀಪದಲ್ಲಿ ವಿಜಯ ನಗರದ ಅರಸರ ಕಾಲದ ಮಲ್ಲೇಶ್ವರ ದೇವಾಲಯವಿದೆ.

ಮಿಡಿಗೇಶಿಯು ಹಿಂದೆ ಜೈನ ಕೇಂದ್ರವೂ ಆಗಿತ್ತು. ಇಲ್ಲಿ 7ಯ ತೀರ್ಥಂಕರರಾದ ಭಗವಾನ್ ಸುಪಾರ್ಶ್ವ ನಾಥರ ಬಸದಿಯಿದೆ. ಮಿಡಿಗೇಶಿಯಲ್ಲಿ ಆಂಜನೇಯ, ಕಾಳಮ್ಮ ಮುಂತಾದ ಗುಡಿಗಳೂ ಇವೆ.

**ಹೀಗೆ ಬನ್ನಿ :**

ಮಧುಗಿರಿ ತಾಲ್ಲೂಕಿನ ಮಿಡಿ ಗೇಶಿಯು ಮಧುಗಿರಿ-ಪಾವಗಡ ರಸ್ತೆ ಯಲ್ಲಿ ತಾಲ್ಲೂಕು ಕೇಂದ್ರದಿಂದ ಸುಮಾರು 19 ಕಿ.ಮೀ. ದೂರದಲ್ಲಿದೆ.



# ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

– ಡಿ|| ಬಿ.ಎನ್.ಶ್ರೀನಿವಾಸನ್

### ಕಳೆದ ಸಂಚಿಕೆಯಿಂದ

**ಶುದ್ಧಿ :**

ವಿಶ್ವರೂಪದರ್ಶನವಾದ ಬಳಿಕ ಬಂಗಾರದ ಬಾಗಿಲ ಬಳಿಯ ಪರದೆಯನ್ನೆಳೆದು ಗರ್ಭಗುಡಿಯಲ್ಲಿ ಸ್ವಾಮಿಯ ಹಿಂದಿನ ದಿನದ ಎಲ್ಲ ಪುಷ್ಪಾಲಂಕಾರವನ್ನೂ ತೆಗೆದು ಶುದ್ಧ ಗೊಳಿಸಲಾಗುತ್ತದೆ. ಪೂಜಾ ಪಾತ್ರೆ ಪರಿಕರಗಳನ್ನು ಶುದ್ಧ ಗೊಳಿಸಲಾಗುವುದು. ಎಲ್ಲ ಪುಷ್ಪಗಳನ್ನೂ-ಆಗಮಶಾಸ್ತ್ರದ ಆದೇಶಾನುಸಾರ ವಿಷ್ವಕ್ಸೇನರಿಗೆ ಅಲಂಕಾರ ಮಾಡುವ ಹೂಗಳ ಹೊರತು-ಇನ್ನಿತರರು ಬಳಸಲಾಗದಂತೆ ಒಂದು ಬಾವಿಗೆ ಎಸೆಯಲಾಗುವುದು. ತಾಂತ್ರಿಕವಾಗಿ ಇದನ್ನು ನಿರ್ಮಾಲ್ಯ ಶೋಧನವೆನ್ನುವರು. ರಂಗದಾಸನಿಂದ ಸಂಪಂಗಿ ಪ್ರದಕ್ಷಿಣೆಯಲ್ಲಿ ನಿರ್ಮಿತವಾದ ಬಾವಿಗೆ ಈ ಹೂವುಗಳನ್ನು ಹಾಕಲಾಗುತ್ತಿದ್ದಿತು,

ಈ ನಡುವೆ ಪೂಜೆಗಾಗಿ ಶುದ್ಧ ನೀರು ಆಕಾಶ ಗಂಗೆಯಿಂದ ಬರುತ್ತದೆ. ತಿರುಮಲೆ ಆಲಯದ ಪ್ರಧಾನ ಆಚಾರ್ಯರಾದ ತಿರುಮಲನಂಬಿ ಅವರ ಕುಟುಂಬದ ಹಕ್ಕು-ಈ ನೀರಿನ ಜವಾಬ್ದಾರಿ. ಈ ಆಕಾಶಗಂಗೆಯ ನೀರನ್ನೇ ಬೆಳಗಿನ, ಸಂಜೆಯ ಪೂಜೆಗಳಲ್ಲಿ ಬಳಸಲಾಗುತ್ತದೆ ಹಾಗೂ ರಾತ್ರಿಯ ವೇಳೆಯಲ್ಲಿ ಬ್ರಹ್ಮಕೃತ ಪೂಜೆಗೂ ಇದನ್ನೇ ಮೀಸಲಿಡಲಾಗುತ್ತದೆ. ವೈಖಾನಸ ಸಂಹಿತೆಯ ಪ್ರಕಾರ ಪೂಜೆಯ ತೀರ್ಥವನ್ನು ಮಂಗಳ ವಾದ್ಯಗಳ ಗಾಯನದೊಡನೆ ಆನೆಯ ಮೇಲೆ ಮೆರವಣಿಗೆಯಲ್ಲಿ ತರಬೇಕು. ಮರೀಚಿ ಸಂಹಿತೆಯಲ್ಲಿ ಈ ಮಾತು ಇಲ್ಲ. ತಿರುಮಲೆಯ ಆಲಯದಲ್ಲಿ ಇಂದು ಬ್ರಹ್ಮೋತ್ಸವಗಳಲ್ಲಿ ಮಾತ್ರವೇ ಮೆರವಣಿಗೆಯಲ್ಲಿ ಜಲವನ್ನು ತರಲಾಗುತ್ತದೆ. ಆಗಲೂ ಹೀಗೆ ತೆಗೆದುಕೊಂಡು ಬಂದ ತೀರ್ಥವನ್ನು ಪೂಜೆಗೆ ಬಳಸದೆ, ಭಕ್ತರು ತಲೆಯ ಮೇಲಿಟ್ಟುಕೊಂಡು ತಂದ ನೀರನ್ನೇ ಬಳಸಲಾಗುವುದು.

**ತೋಮಾಲ ಸೇವೆ :**

(ಆರ್ಜಿತ) ಆರ್ಜಿತವೆಂದರೆ ನಿರ್ದಿಷ್ಟ ಹಣವನ್ನು ದೇವಸ್ಥಾನಕ್ಕೆ ನೀಡುವುದರ ಮೂಲಕ ದೇವರಿಗೆ ಮಾಡುವ ಸೇವೆ. ಈ ತೋಮಾಲೆ ಸೇವೆಯಲ್ಲಿ, ಭೋಗಮೂರ್ತಿಗೆ ಸ್ನಪನವಾಗುವಲ್ಲಿ ಹಾಗೂ ಮೂಲಮೂರ್ತಿಗೆ ಪ್ರಬಂಧ ಪಠಣದೊಡನೆ ನಡೆಯುವ ಪುಷ್ಪಕೈಂಕರ್ಯದಲ್ಲಿ ಹಾಜರಾತಿಗೆ ಭಕ್ತರಿಗೆ ಅನುಮತಿ ದೊರೆಯುವುದು.

ತೋಮಾಲೆ ಎನ್ನುವ ಪದ ತಮಿಳಿನಲ್ಲಿ ಕಟ್ಟಿದ ಹೂವುಗಳ ಮಾಲೆ ಎಂಬರ್ಥಕೊಡುವ ತೊಡುತ್ತಮಾಲೆ ಎಂಬುದರ ಸಂಕ್ಷೇಪರೂಪ. ಹೂವುಗಳನ್ನು ವಿವಿಧ ಗುಚ್ಛಗಳಲ್ಲಿ ಕಟ್ಟಿ ಕಣ್ಣಿಗೆ ಕಟ್ಟುವಂತೆ ಅಲಂಕರಿಸಲಾಗುತ್ತದೆ.

ತೋಮಾಲೆ ಸೇವೆಯ ಹೊತ್ತಿನಲ್ಲಿ ದೇವರಿಗೆ ನಿತ್ಯಾವಸರಕ್ಕಾಗಿ ನೀರನ್ನರ್ಪಿಸಲಾಗುತ್ತದೆ. ಮೂಲವರನ್ನೂ ಭೋಗ ಶ್ರೀನಿವಾಸನನ್ನೂ ಆವರಿಸುವ ಬಂಗಾರದ ಕವಚಗಳಿಗೆ ಅಭಿಷೇಕ ಮಾಡಲಾಗುತ್ತದೆ. ಅಭಿಷೇಕವನ್ನು ಮಂತ್ರ ಘೋಷದ ನಡುವೆ ಮಾಡಲಾಗುತ್ತದೆ. ನಂತರ ದೇವರನ್ನು ಬಹು ದೊಡ್ಡದಾದ ಹೂವಿನ ಹಾರಗಳಿಂದ ಅಲಂಕರಿಸಿ ತೋಮಾಲಸೇವೆ ಮಾಡಲಾಗುವುದು.

ಆಕಾಶಗಂಗೆಯಿಂದ ತಂದ ನೀರಿಗೆ ಪೂಜಾದ್ರವ್ಯಗಳನ್ನು ಸೇರಿಸಿ ವಿಧಿವತ್ತಾಗಿ ಅರ್ಚನೆ ಮಾಡುವುದರಿಂದ ನಿತ್ಯಾರ್ಚನೆ ಆರಂಭವಾಗುವುದು. ನಂತರ ಕೆಳಕಾಣುವ ರೀತಿಯಲ್ಲಿ ಅವರ ಅರ್ಚನೆ ನಡೆಯುವುದು.

**ಮಂತ್ರಾಸನ :**

ದೇವರಿಗೆ ಅರ್ಘ್ಯ,ಪಾದ್ಯ ಆಚಮನಗಳಿಗಾಗಿ ತೀರ್ಥ ನೀಡುವುದು.

## ಸ್ನಾನಾಸನ :

ಧ್ರುವ ಮೂರ್ತಿಗೆ ಪ್ರತಿದಿನವೂ ಅಭಿಷೇಕ ಮಾಡುವುದು ಸಾಧ್ಯವಿಲ್ಲದ ಮಾತಾಗಿ ಕೌತುಕಬೇರಕ್ಕೆ ಮಾಡಲಾಗುತ್ತದೆ. ಧ್ರುವ ಮೂರ್ತಿಯ ಪಾದಗಳಿಗಿರುವ ಬಂಗಾರದ ಕವಚಗಳನ್ನು ದಿನವೂ ತೆಗೆದು ಅವುಗಳಿಗೆ ಪ್ರತ್ಯೇಕವಾಗಿ ಅಭಿಷೇಕ ಮಾಡಲಾಗುವುದು. ಭೋಗ ಶ್ರೀನಿವಾಸಮೂರ್ತಿ ಅಥವಾ ಕೌತುಕ ಬೇರವನ್ನು ಅದರ ಸ್ಥಾನದಿಂದ ತೆಗೆದು ಸ್ನಪನ ಪೀಠದ ಮೇಲೆ ಆಸೀನಗೊಳಿಸಲಾಗುವುದು. ಹಗುರು ವಸ್ತ್ರದ ಆವರಣದಲ್ಲಿ ವೇದ ಮಂತ್ರಗಳೊಡನೆ ಅಭಿಷೇಕ ಮಾಡಲಾಗುವುದು. ಎಣ್ಣೆಯನ್ನೂ ಹಚ್ಚಿ, ಹುಣಿಸೆಯ ಹಣ್ಣಿನಿಂದ ತೊಳೆದು ನೀರಿನಿಂದ ಶುಭ್ರಗೊಳಿಸುವರು. ನಂತರ ಹಸುವಿನ ಹಾಲು,ಚಂದನ, ಹರಿದ್ರೋದಕಗಳಿಂದ ಅಭಿಷೇಕ ವಾಗುವುದು. ಪ್ರತಿ ಅಭಿಷೇಕಾನಂತರವೂ ಜಲಶುದ್ಧಿ ಇರುತ್ತದೆ. ಕೊನೆಯಲ್ಲಿ ಗಂಧೋದಕಸ್ನಾನ ಮಾಡಿಸಿ ನಂತರ ಶುದ್ಧೋದಕ ಸ್ನಾನವಾಗುವುದು. ಕೌತುಕ ಬೇರವನ್ನು ಒಣಗಿದ ವಸ್ತ್ರದಿಂದ ಒರೆಸಿ, ಪುಷ್ಪಾಂಜಲಿಯನ್ನರ್ಪಿಸಿ ಅದರ ಜೀವಸ್ಥಾನಕ್ಕೆ ಸೇರಿಸಲಾಗುವುದು. ಧ್ರುವ ಬೇರಕ್ಕೆ ಪ್ರೋಕ್ಷಣೆ ಆದನಂತರ ಎರಡೂ ವಿಗ್ರಹಗಳ ನಡುವಣ ಚಿನ್ನದ ದಾರ ಬಂಧವನ್ನು ಪುನಃ ಸ್ಥಾಪನೆ ಮಾಡಿ, ಮುಖ್ಯ ದೇವರಿಗೆ ಪುಷ್ಪ ನ್ಯಾಸ ಮಾಡಲಾಗುವುದು. ಇವೆಲ್ಲವನ್ನೂ ಸೂಕ್ತ ಮಂತ್ರ ಘೋಷಗಳ ನಡುವೆ ನಡೆಸಲಾಗುವುದು.

## ಪುಷ್ಪನ್ಯಾಸ :

ಪುಷ್ಪನ್ಯಾಸವು 1,2,3 ನೇ ಆವರಣಗಳಲ್ಲಿರುವ ದೇವತೆಗಳಿಗೆ ಪುಷ್ಪಸಲ್ಲಿಸುವ ಸೇವೆ. ಇದು ಆರಂಭವಾಗುವುದು ಪೂರ್ವದಲ್ಲಿರುವ ಪುರುಷ ವಿಗ್ರಹದಿಂದ. ನಂತರ ಮಾರ್ಕಂಡೇಯ, ದ್ವಾರಪಾಲಕರು, ವಿಮಾನ ಪಾಲಕರು- ಮೊದಲಾದವರಿಗೆ ನಡೆಯುತ್ತದೆ. ನಂತರ ಗರ್ಭಗೃಹದ ಬಾಗಿಲ ಹೊಸ್ತಿಲನ್ನು ನೀರಿನಿಂದ ತೊಳೆದು ಅರ್ಚನೆ ಆರಂಭವಾಗಬೇಕು. ಈಗ ಈ ಸೇವೆ ನಡೆಯುವುದಿಲ್ಲ.

ಆಗಮಶಾಸ್ತ್ರದ ಪ್ರಕಾರ ಹಾಜರಿಲ್ಲದ ದೇವತೆಯ ನಿವೇದನೆಯನ್ನು ಸ್ವಾಮಿಯ ಪಾದದಲ್ಲಿಡಬೇಕು. ತಿರುಮಲೆಯ ಆಲಯದಲ್ಲಿ ಇತರ ಯಾವ ಸ್ಥಾವರ ಮೂರ್ತಿಯೂ ಇಲ್ಲವಾಗಿ,ಎಲ್ಲ ಹೂವುಗಳನ್ನೂ ಸ್ವಾಮಿಯ ಪಾದದಲ್ಲಿಯೇ ನಿವೇದನ ಗೊಳಿಸಲಾಗುತ್ತದೆ. ಎಲ್ಲ ದೇವತೆಗಳಿಗೂ ಸೇರುವ ಎಲ್ಲ ಪುಷ್ಪಗಳನ್ನೂ ದೇವರ ಪಾದದಲ್ಲಿಯೇ ಸಮರ್ಪಿಸಲಾಗುವುದರಿಂದ ಸ್ವಾಮಿಯ ಪ್ರಸಾದವಾಗಿ ತುಲಸಿಯನ್ನು ಭಕ್ತರಿಗೆ ನೀಡಲಾಗುವುದಿಲ್ಲ.

## ಅಲಂಕಾರಾಸನ:

ಈ ಆಸನದಲ್ಲಿ ವಸ್ತ್ರ,ಭೂಷಣ,ಉತ್ತರೀಯಗಳನ್ನು ತೊಡಿಸುವರು. ಊರ್ಧ್ವ ಪುಂಡ್ರವನ್ನು ಕರ್ಪೂರದಿಂದ ತಿದ್ದಿ ಯಜ್ಞೋಪವೀತವನ್ನು ತೊಡಿಸಲಾಗುತ್ತದೆ. ಶಾಸನಗಳಲ್ಲಿ ಕಂಡು ಬರುವಂತೆ, ಊರ್ಧ್ವಪುಂಡ್ರಕ್ಕಾಗಿ ಕರ್ಪೂರ ಹಾಗೂ ಚಂದನಗಳನ್ನು ಕ್ರಿ.ಶ.1465 ರಿಂದ ಈಚೆಗೆ ಬಳಸಲಾಗುತ್ತಿದೆ.

## ಕೊಲುವು :

(ಓಲಗ ಅಥವಾ ದರ್ಬಾರ್) ಕೊಲುವು ಶ್ರೀನಿವಾಸ ಮೂರ್ತಿಯನ್ನು ಹೊರತಂದು ತಿರುಮಾಮಣಿ ಮಂಟಪದಲ್ಲಿ ರಜತ ಪೀಠದಲ್ಲಿ ಶ್ವೇತಛತ್ರದಡಿಯಲ್ಲಿ ಆಸೀನಗೊಳಿಸಲಾಗುವುದು. ಈ ಶ್ವೇತಛತ್ರವನ್ನು ಮೈಸೂರು ಮಹಾರಾಜರು ನೀಡಿದರೆಂದು ಹೇಳಲಾಗಿದೆ. ಕೊಲುವು ಶ್ರೀನಿವಾಸನಿಗೆ ಕರಿದ ಶುಂಠಿಯ ಬೀಜವನ್ನು ಬೆಲ್ಲದೊಡನೆ ಬೆರೆಸಿ ನಿವೇದಿಸಲಾಗುವುದು. ನಂತರ ಹಿಂದಿನ ದಿನದ ಆದಾಯ ವೆಚ್ಚದ ಲೆಕ್ಕವನ್ನೊಪ್ಪಿಸಿ, ಹಿಂದಿನ ದಿನದ, ಅಂದಿನ ಹಾಗೂ ಮುಂದಿನ ದಿನದ ಪಂಚಾಂಗವನ್ನು ಓದಲಾಗುವುದು.

ಸಾಮಾನ್ಯವಾಗಿ ಗರ್ಭಗುಡಿಯಲ್ಲಿ ಮಾಡಿದ ಅಲಂಕಾರಾಸನವೇ ದರ್ಬಾರ್ ಆಗಿರುವುದು. ಆದರೆ ಈ ಆಲಯದಲ್ಲಿ ತಿರುಮಾಮಣಿ ಮಂಟಪವೆನ್ನುವ ಮುಖಮಂಟಪದಲ್ಲಿ ಓಲಗವನ್ನು ನಡೆಸಲಾಗುತ್ತದೆ. ಈ ಸಮಯದಲ್ಲಿ ಅರ್ಚಕರಿಗೆ ತಾಂತ್ರಿಕವಾಗಿ ಮಾತ್ರಾದಾನವೆಂದು ಕರೆಯವ ಅಕ್ಕಿ, ಶುಂಠಿ, ಅಡಿಕೆಗಳ ಪಡಿಯನ್ನು ನೀಡಲಾಗುವುದು ಈವಿಧಿಯಾಗಲೀ, ಕೊಲುವು ಶ್ರೀನಿವಾಸ ಮೂರ್ತಿಯಾಗಲೀ ಯಾವುದೇ ಶಾಸನದಲ್ಲಿಯೂ ಈ ಸಂಬಂಧದಲ್ಲಿ ಹೆಸರಿಸಲ್ಪಟ್ಟಿಲ್ಲ. ಆಲಯದಲ್ಲಿ ಈ ಕ್ರಮ ಎಂದು ಆರಂಭವಾಯಿತೆಂಬುದು ತಿಳಿ ಯದು.

## ಸಹಸ್ರನಾಮಾರ್ಚನೆ :

(ಆರ್ಜಿತ) ಇಂದೊಂದು ಆರ್ಜಿತ ಸೇವೆಯಾಗಿ ನಿಗದಿಯಾದ ಆರ್ಜಿತ ಸೇವಾ ಶುಲ್ಕ ನೀಡುವುದರಿಂದ ಪ್ರವೇಶ ಪಡೆಯಬಹುದಾಗಿದೆ.

ಸಹಸ್ರನಾಮಾರ್ಚನೆಯ ಕಾಲದಲ್ಲಿ ಸ್ವಾಮಿಯನ್ನು ಸಾವಿರ ನಾಮಗಳಿಂದ ಅರ್ಚಿಸಿ, ಸೇವಾದಾರರ ಗೋತ್ರ, ಹೆಸರುಗಳನ್ನು ತಿಳಿಸಿ ಆಶೀರ್ವಾದವನ್ನು ಬೇಡಲಾಗುತ್ತದೆ.

ಆಲಯಕ್ಕೆ ಒಂದೇ ಬಾರಿಗೆ ಒಂದು ಧನದ ಮೊತ್ತವನ್ನು ನೀಡುವುದರಿಂದ ಈ ಸೇವೆಯನ್ನು ಗೊತ್ತಾದ ದಿನದಲ್ಲಿ ನಡೆಯುವಂತೆಯೂ ಮಾಡಬಹುದು. ಇತರ ದೇವಾಲಯಗಳಲ್ಲಿ ಪ್ರತಿ ಗೃಹಸ್ಥರಿಗಾಗಿ ಪ್ರತ್ಯೇಕವಾದ ಅರ್ಚನೆ ನಡೆದರೆ ತಿರುಮಲೆಯಲ್ಲಿ ಮಾತ್ರ ಒಂದೇ ಸಹಸ್ರನಾಮಾರ್ಚನೆಯಾಗಿ ನಂತರ ಗೋತ್ರ, ಹೆಸರುಗಳನ್ನು ಓದಲಾಗುವುದು.

ಇಲ್ಲಿನ ಸಹಸ್ರನಾಮಾರ್ಚನೆಯು ಶ್ರೀವೆಂಕಟೇಶ್ವರ ಸ್ವಾಮಿಯ ಸಹಸ್ರನಾಮ ಆಗಿದ್ದು, ಇದನ್ನು ತಿರುಮಲೆಯ ಆಲಯದಲ್ಲಿ ಮಾತ್ರವೇ ಮಾಡಬಹುದು. ಇತರ ವಿಷ್ಣು ಆಲಯಗಳಲ್ಲಿ ವಿಷ್ಣುಸಹಸ್ರನಾಮವು ಸಾಮಾನ್ಯವಾಗಿರುತ್ತದೆ. ಕ್ರಿ.ಶ. 1518 ರಲ್ಲಿನ ಒಂದು ಶಾಸನವು ಇಲ್ಲಿನ ಸಹಸ್ರನಾಮಾರ್ಚನೆಯನ್ನು ಮೊದಲಬಾರಿಗೆ ಉಲ್ಲೇಖಿಸುವುದು. ಶ್ರೀ ವೀರ ಪ್ರತಾಪ ವೀರ ಅಚ್ಯುತರಾಯನು,ಅರ್ಚಕರು ದೇವರ ನಾಮಾವಳಿಯ ಪಾರಾಯಣ ಮಾಡುತ್ತಿರುವಂತೆ ಈ ಅರ್ಚನೆಯನ್ನು ಸ್ವಾಮಿಗೆ ಒಮ್ಮೆ ತಾನೇ ಮಾಡಿದ.

**ನೈವೇದ್ಯ :**

(ಮೊದಲಗಂಟೆ) ಎರಡು ದೊಡ್ಡ ಗಂಟೆಗಳ ಗಣಗಣ ಸದ್ದು ಆದನಂತರ ಜಿಯ್ಯಂಗಾರ್ಯರೂ ಅವರ ಶಿಷ್ಯರೂ, ಇತರ ವೈಷ್ಣವ ಆಚಾರ್ಯಪುರುಷರೂ, ದ್ರಾವಿಡಪ್ರಬಂಧಗಳ ಪಠಣವಾದ ಶಾತ್ತುಮೊರೆಯನ್ನು ಹೇಳುತ್ತಿರುವಂತೆ ದೇವರಿಗೆ ಆಹಾರ ನಿವೇದನೆಯಾಗುತ್ತದೆ. ಇದಾದ ನಂತರ ಶಾತ್ತುಮೊರೆಯಲ್ಲಿ ಭಾಗವಹಿಸಿದವರಿಗೆ ಮಾತ್ರ ಅಥವಾ ದಧ್ಯೋದನ ವಿತರಣೆಯಾಗುವುದು.

ಗಂಟೆಗಳ ಅನುರಣನ ಹಾಗೂ ನೈವೇದ್ಯಗಳನ್ನು ಆಲಯದಲ್ಲಿ ಮೊದಲನೆಯಗಂಟೆ ಎಂದು ಕರೆಯಲಾಗಿದೆ. ದೇವರಿಗೆ ಆಹಾರ ನಿವೇದನೆಯಾಗುವ ಸಮಯದಲ್ಲಿ ಅರ್ಚಕರು ಮಾತ್ರವೇ ಇದ್ದು ಬಂಗಾರದ ಬಾಗಿಲನ್ನು ಮುಚ್ಚಿರುವರು. ಈ ಹೊತ್ತಿಗೆ ದೊಡ್ಡ ದೊಡ್ಡ ಗಂಗಾಳಗಳಲ್ಲಿ-ಸೋಲ, ಅರ್ಧ ಸೋಲಗಳ-ಅಳತೆಯವು-ಪಕ್ವವಾದ ಅನ್ನವನ್ನು ಮಂಟಪದ ಒಳಕ್ಕೆ ತಂದಿಡಲಾಗುವುದು. ವಿಷ್ವಕ್ಸೇನ, ಗರುಡ, ನಿತ್ಯಸೂರಿಗಳಿಗೂ ನಿವೇದನೆಯಾಗುವುದು.

ಮಧುಪರ್ಕವನ್ನು ನಿವೇದಿಸುವ ಪ್ರಯತ್ನ ಒಂದೊಮ್ಮೆ ನಡೆಯಿತಾದರೂ ಸ್ಥಳೀಯ ಸಂಪ್ರದಾಯಗಳಿಗೆ ವಿರುದ್ಧವಾದ್ದರಿಂದ ಈ ಪ್ರಯತ್ನವನ್ನು ಕೈಬಿಡಲಾಯಿತೆಂದು ತಿಳಿದು ಬರುತ್ತದೆ. ಆಗಮ ಹೇಳುವಂತೆ ನಿವೇದನೆಯಾದ ಮೇಲೆ ಪ್ರತಿದಿನವೂ ಮೂರು ಬಾರಿ ಹೋಮವನ್ನು ಮಾಡಬೇಕು. ಕನಿಷ್ಠ ಬೆಳಗಿನ ಪೂಜೆಯ ನಂತರವಾದರೂ ಮಾಡಬೇಕು ಎಂದಿದ್ದರೂ ತಿರುಮಲೆಯ ಆಲಯದಲ್ಲಿ ಇದು ನಡೆಯುವುದಿಲ್ಲ.

**ಮಾತ್ರಾಸನ :**

ಆಲಯದ ಪ್ರಾಕಾರದಲ್ಲಿರುವ ಎಲ್ಲ ದೇವತೆಗಳಿಗೆ ಬಲಿಯನ್ನು ನೀಡಲು ಬಲಿಬೇರ ಅಥವಾ ಕೊಲುವು ಶ್ರೀನಿವಾಸನನ್ನು ಮಂತ್ರ ಪುರಸ್ಸರವಾಗಿ, ಮಂಗಳ ವಾದ್ಯಗಳೊಡನೆ ಕರೆದು ಕೊಂಡು ಹೋಗಬೇಕು. ತಿರುಮಲೆಯ ಆಲಯದಲ್ಲಿ ಈ ಪದ್ಧತಿಯಿರುವಂತೆ ಕಾಣುವುದಿಲ್ಲ. ಅರ್ಚಕ ಪರಿಚಾರಕರು ವಿಮಾನ ಪ್ರದಕ್ಷಿಣೆಯಲ್ಲಿ ನಡೆದು ಬಂದು ವಿಷ್ವಕ್ಸೇನ, ಗರುಡಧ್ವಜ, ಬಲಿಯನ್ನು ನೀಡಿ ಮಿಕ್ಕ ಬಲಿಯನ್ನು ಬಲಿಪೀಠ ಧ್ವಜಸ್ತಂಭಗಳ ನಡುವಿನ ಕಲ್ಲಿನ ಮೇಲಿಡುವರು.

**ಶಾತ್ತುಮೊರ್ರೈ :**

ಆಳ್ವಾರರ ಪ್ರಬಂಧಗಳ ವಿಧಿವತ್ತಾದ ವಾಚನವನ್ನು ಶಾತ್ತುಮೊರ್ರೈ ಎನ್ನುವರು. ನಾಲಾಯಿರ ಪ್ರಬಂಧಗಳನ್ನು ಈಗ ಶ್ರೀವೈಷ್ಣವರು ಮಾತ್ರವೇ ಇದ್ದಾಗ ವಿಧಿವತ್ತಾಗಿ ವಾಚಿಸಲಾಗುತ್ತದೆ. ಅರ್ಚಕರು ಬಲಿಯನ್ನರ್ಪಿಸಿ ಬಂದ ಮೇಲೆ ಗರ್ಭಗೃಹದ ಬಳಿಗೆ ಶ್ರೀವೈಷ್ಣವರು ಮಾತ್ರವೇ ಜೀಯಂಗಾರರ ನೇತೃತ್ವದಲ್ಲಿ ಸೇರುವರು. ಪ್ರಬಂಧಗಳ ಭಾಗಗಳನ್ನು - ಪಾತ್ರದಿಂದ ಆರಂಭಿಸಿ ವಾಳಿ ತಿರುನಾಮಂದೊಡನೆ ಕೊನೆ ಗೊಳ್ಳುವಂತೆ ಹೇಳಲಾಗುವುದು. ನಂತರ ಇದ್ದವರಿಗೆಲ್ಲ ಅನುಕ್ರಮವಾಗಿ ತೀರ್ಥ ಚಂದನ ಪ್ರಸಾದ ವಿತರಣೆಯಾಗುತ್ತದೆ.

ಕ್ರಿ.ಶ.1476 ರಲ್ಲಿನ ಒಂದು ಶಾಸನವು ದೇವರಿಗಾದ ಶಾತ್ತುಮೊರೆಯನ್ನಲ್ಲದೆ ಆಳ್ವಾರರ ಶಾತ್ತುಮೊರ್ರೈಯನ್ನು ಹೆಸರಿಸಿದರೂ,ಈ ಆಚಾರವನ್ನು ಇತರ ಯಾವ ಶಾಸನವೂ ಹೇಳುವುದಿಲ್ಲ. ಪೂರ್ವೋಕ್ತ ಶಾಸನದಲ್ಲೂ ಶಾತ್ತುಮೊರ್ರೈ ಆದದ್ದು ರಾಮಾನುಜರ ಗುಡಿಯಲ್ಲಿಯೇ ಹೊರತು ಗರ್ಭಗೃಹದಲ್ಲಿ ಅಲ್ಲ. ಶಾತ್ತುಮೊರ್ರೈ ಎಲ್ಲಿಯೇ ಆಗುವಂತಿದ್ದರೂ, ಅದು ಶ್ರೀವೈಷ್ಣವರಿಗೇ ಮೀಸಲಾದ ಹಕ್ಕು ಎಂದು ಪರಿಗಣಿತವಾಗಿದ್ದು,ತೋಮಾಲ ಸೇವೆ ಶಾತ್ತುಮೊರ್ರೈಯೊಡನೆ ಪೂರ್ಣಗೊಳ್ಳುತ್ತದೆ.

(ಮುಂದುವರೆಯುತ್ತದೆ)





# ಶ್ರೀನಿವಾಸ ಮಂಗಾಪುರಂ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**07-02-2026 ರಿಂದ**

**16-02-2026 ರ ವರೆಗೆ**

ಜಗತ್ಕಲ್ಯಾಣದಂಪತಿಗಳಾದ ಶ್ರೀ ಪದ್ಮಾವತಿ ಶ್ರೀನಿವಾಸರು ಇಂದಿಗೂ ನಿತ್ಯ ನೂತನ ವಧುವರರಾಗಿ ದರ್ಶನ ನೀಡುತ್ತಿರುವ ನಿತ್ಯ ಕಲ್ಯಾಣಪುರಂ ಶ್ರೀನಿವಾಸಮಂಗಾಪುರಂ! ತಿರುಪತಿಯಿಂದ ಹತ್ತು ಮೈಲಿ ದೂರದಲ್ಲಿರುವ ಕ್ಷೇತ್ರ ಶ್ರೀನಿವಾಸಮಂಗಾಪುರಂ. ಈ ಕ್ಷೇತ್ರದ ಉತ್ತರಕ್ಕೆ ಪರಮಪಾವನವಾದ ಶೇಷಾಚಲ ಶಿಖರಗಳು, ಚಂದ್ರಗಿರಿ ಕೋಟೆಯಲ್ಲಿ ವಾಸ್ತವ್ಯ ಹೂಡಿದ್ದ ವಿಜಯನಗರದರಸರು ಈ ಮಾರ್ಗವಾಗಿಯೇ ಬೆಟ್ಟವನ್ನು ಸೇರುತ್ತಿದ್ದರಂತೆ. ಪದ್ಮಾವತಿಯನ್ನು ಮದುವೆಯಾದ ಸ್ವಾಮಿ ಬೆಟ್ಟವನ್ನು ಸೇರುವ ಮೊದಲು ಈ ಗ್ರಾಮದಲ್ಲಿ ಸ್ವಲ್ಪ ಕಾಲ ತಂಗಿದ್ದನೆಂದು ಸ್ಥಳ ಪುರಾಣ ತಿಳಿಸುತ್ತದೆ. ಇಲ್ಲಿರುವ ಅರ್ಚಮೂರ್ತಿ ಕಲ್ಯಾಣ ವೆಂಕಟೇಶ್ವರಸ್ವಾಮಿ. ತಾಳ್ಳಪಾಕ ಅನ್ನಮಾಚಾರ್ಯರ ಮೊಮ್ಮೊಗ ಚಿನ್ನನ್ನ (ಚಿನ್ನ ತಿರುವೆಂಗಳನಾಥ) ಶ್ರೀನಿವಾಸಮಂಗಾಪುರಂನಲ್ಲಿರುವ ಕಲ್ಯಾಣವೆಂಕಟೇಶ್ವರ ಸ್ವಾಮಿಯವರ ಆಲಯವನ್ನು ಜೀರ್ಣೋದ್ಧಾರಗೊಳಿಸಿದರು. 26-04-1967 ರಂದು ಈ ಆಲಯವನ್ನು ತಿ.ತಿ.ದೇ., ಅನುಬಂಧ ಆಲಯವಾಗಿ ಸ್ವೀಕರಿಸಲಾಯಿತು. 1981 ರಿಂದ ಇಲ್ಲಿ ಅತ್ಯಂತ ವೈಭವವಾಗಿ ಬ್ರಹ್ಮೋತ್ಸವಗಳು ಪ್ರಾರಂಭವಾಯಿತು. ಇಲ್ಲಿ ಕಲ್ಯಾಣೋತ್ಸವ ನಡೆದ ನಂತರ ಇಲ್ಲಿ ಕೊಡುವ ಸ್ವಾಮಿಯವರ ಕಲ್ಯಾಣ ಕಂಕಣಗಳನ್ನು ಅವಿವಾಹಿತರು ಧರಿಸಿದರೆ ಅವರಿಗೆ ಅಲಸ್ಯವಿಲ್ಲದೆ ಶೀಘ್ರದಲ್ಲಿಯೇ ವಿವಾಹವಾಗುತ್ತದೆಂಬ ಭಕ್ತರ ವಿಶ್ವಾಸ.

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 07-02-2026 | ಶನಿವಾರ | -------------- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 08-02-2026 | ಭಾನುವಾರ | ತಿರುಚ್ಚಿ ಉತ್ಸವ , ಧ್ವಜಾರೋಹಣ | ದೊಡ್ಡಶೇಷವಾಹನ |
| 09-02-2026 | ಸೋಮವಾರ | ಚಿಕ್ಕಶೇಷವಾಹನ | ಹಂಸವಾಹನ |
| 10-02-2026 | ಮಂಗಳವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 11-02-2026 | ಬುಧವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 12-02-2026 | ಗುರುವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 13-02-2026 | ಶುಕ್ರವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 14-02-2026 | ಶನಿವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 15-02-2026 | ಭಾನುವಾರ | ರಥೋತ್ಸವ | ಅಶ್ವವಾಹನ |
| 16-02-2026 | ಸೋಮವಾರ | ಪಲ್ಲಕಿ ಉತ್ಸವ, ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |

# ಶ್ರೀ ಶಿವಾಷ್ಟಕಮ್



ತಸ್ಮೈ ನಮಃ ಪರಮಕಾರಣಕಾರಣಾಯ
ದೀಪ್ತೋಜ್ಜ್ವಲಜ್ವಲಿತ ಪಿಂಗಳ ಲೋಚನಾಯ ।
ನಾಗೇಂದ್ರ ಹಾರ ಕೃತ ಕುಂಡಲ ಭೂಷಣಾಯ
ಬ್ರಹ್ಮೇಂದ್ರ ವಿಷ್ಣು ವರದಾಯ ನಮಶ್ಶಿವಾಯ ॥

ಶ್ರೀಮತ್ಪ್ರಸನ್ನ ಶಶಿಪನ್ನಗ ಭೂಷಣಾಯ
ಶೈಲೇಂದ್ರಜಾ ವದನ ಚುಂಬಿತಲೋಚನಾಯ ।
ಕೈಲಾಸ ಮಂದರ ಮಹೇಂದ್ರ ನಿಕೇತನಾಯ
ಲೋಕತ್ರಯಾರ್ತಿ ಹರಣಾಯ ನಮಶ್ಶಿವಾಯ ॥

ಪದ್ಮಾವದಾತ ಮಣಿಕುಂಡಲ ಗೋವೃಷಾಯ
ಕೃಷ್ಣಾಗರುಪ್ರಚುರ ಚಂದನ ಚರ್ಚಿತಾಯ ।
ಭಸ್ಮಾನುಷಕ್ತ ವಿಕಚೋತ್ಪಲ ಮಲ್ಲಿಕಾಯ
ನೀಲಾಬ್ಜಕಂಠ ಸದೃಶಾಯ ನಮಶ್ಶಿವಾಯ ॥

ಲಂಬತ್ ಸಪಿಂಗಳ ಜಟಾ ಮುಕುಟೋತ್ಕಟಾಯ
ದಂಷ್ಟ್ರಾಕರಾಳ ವಿಕಟೋತ್ಕಟ ಭೈರವಾಯ ।
ವ್ಯಾಘ್ರಾಜಿನಾಂಬರಧರಾಯ ಮನೋಹರಾಯ
ತ್ರೈಲೋಕ್ಯನಾಥ ನಮಿತಯ ನಮಶ್ಶಿವಾಯ ॥

ದಕ್ಷಪ್ರಜಾಪತಿ ಮಹಾಮಖ ನಾಶನಾಯ
ಕ್ಷಿಪ್ರಂ ಮಹಾತ್ರಿಪುರ ದಾನವ ಘಾತನಾಯ ॥
ಬ್ರಹ್ಮೋರ್ಜಿತೋರ್ಧ್ವಗ ಕರೋಟಿ ನಿಕೃಂತನಾಯ
ಯೋಗಾಯ ಯೋಗನಮಿತಾಯ ನಮಶ್ಶಿವಾಯ ॥

ಸಂಸಾರ ಸೃಷ್ಟಿ ಘಟನಾ ಪರಿವರ್ತನಾಯ
ರಕ್ಷಃ ಪಿಶಾಚ ಗಣಸಿದ್ಧ ಸಮಾಕುಲಾಯ ।
ಸಿದ್ಧೋರಗಗ್ರಹಗಣೇಂದ್ರ ನಿಷೇವಿತಾಯ
ಶಾರ್ದೂಲಚರ್ಮವಸನಾಯ ನಮಶ್ಶಿವಾಯ ॥

ಭಸ್ಮಾಂಗರಾಗ ಕೃತರೂಪ ಮನೋಹರಾಯ
ಸೌಮ್ಯಾವದಾತ ವನಮಾಶ್ರಿತ ಮಾಶ್ರಿತಾಯ ।
ಗೌರೀಕಟಾಕ್ಷ ನಯನಾರ್ಧ ನಿರೀಕ್ಷಣಾಯ
ಗೋಕ್ಷೀರ ಧಾರ ಧವಳಾಯ ನಮಶ್ಶಿವಾಯ ॥

ಆದಿತ್ಯ ಸೋಮ ವರುಣಾನಿಲ ಸೇವಿತಾಯ
ಯಜ್ಞಾಗ್ನಿಹೋತ್ರ ವರಧೂಮ ನಿಕೇತನಾಯ ।
ಋಕ್ಸಾಮವೇದಮುನಿಭಿಃ ಸ್ತುತಿಸಂಯುತಾಯ
ಗೋಪಾಯ ಗೋಪನಮಿತಾಯ ನಮಶ್ಶಿವಾಯ ॥

ಶಿವಾಷ್ಟಕ ಮಿದಂ ಪುಣ್ಯಂ ಯಃ ಪಠೇತ್ ಶಿವಸನ್ನಿಧೌ
ಶಿವಲೋಕ ಮವಾಪ್ನೋತಿ ಶಿವೇನ ಸಹ ಮೋದತೇ

**ಇತಿ ಶ್ರೀಮಚ್ಛಂಕರಾಚಾರ್ಯ ವಿರಚಿತ**
**ಶಿವಾಷ್ಟಕಂ ಸಂಪೂರ್ಣಂ**




# ಶ್ರೀ ವಿಶ್ವನಾಥಾಷ್ಟಕಮ್

ಗಂಗಾತರಂಗ ರಮಣೀಯ ಜಟಾಕಲಾಪಮ್
ಗೌರೀ ನಿರಂತರ ವಿಭೂಷಿತ ವಾಮಭಾಗಮ್ ।
ನಾರಾಯಣಪ್ರಿಯ ಮನಂಗಮದಾಪಹಾರಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥

ವಾಚಾಮಗೋಚರ ಮನೇಕಗುಣಸ್ವರೂಪಂ
ವಾಗೀಶ ವಿಷ್ಣು ಸುರಸೇವಿತ ಪಾದಪೀಠಮ್ ।
ವಾಮೇನ ವಿಗ್ರಹವರೇಣ ಕಳತ್ರವಂತಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥

ಭೂತಾಧಿಪಂ ಭುಜಗಭೂಷಣ ಭೂಷಿತಾಂಗಂ
ವ್ಯಾಘ್ರಾಜಿನಾಂಬರಧರಂ ಜಟಿಲಂ ತ್ರಿನೇತ್ರಮ್ ।
ಪಾಶಾಂಕುಶಾಭಯ ವರಪ್ರದ ಶೂಲಪಾಣಿಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥

ಶೀತಾಂಶುಶೋಭಿತ ಕಿರೀಟ ವಿರಾಜಮಾನಂ
ಫಾಲೇಕ್ಷಣಾನಲ ವಿಶೋಷಿತ ಪಂಚಬಾಣಮ್
ನಾಗಾಧಿಪಾರಚಿತ ಭಾಸುರ ಕರ್ಣಪೂರಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥

ಪಂಚಾನನಂ ದುರಿತಮತ್ತ ಮತಂಗಜಾನಾಂ
ನಾಗಾಂತಕಂ  ದನುಜಪುಂಗವಪನ್ನಗಾನಾಮ್ ।
ದಾವಾನಲಂ ಮರಣಶೋಕಜರಾಟವೀನಾ ಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥

ತೇಜೋಮಯಂ ಸಗುಣನಿರ್ಗುಣ ಮದ್ವಿತೀಯಂ
ಆನಂದಕಂದ ಮಪರಾಜಿತ ಮಪ್ರಮೇಯಮ್ ।
ನಾಗಾತ್ಮಕಂ ಸಕಳನಿಷ್ಕಳ ಮಾತ್ಮರೂಪಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥

ರಾಗಾದಿದೋಷರಹಿತಂ ಸ್ವಜನಾನುರಾಗಂ
ವೈರಾಗ್ಯ  ಶಾಂತಿನಿಲಯಂ  ಗಿರಿಜಾಸಹಾಯಮ್ ।
ಮಾಧುರ್ಯಧೈರ್ಯಸುಭಗಂ ಗರಳಾಭಿರಾಮಂ
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥

ಆಶಾಂ ವಿಹಾಯ ಪರಿಹೃತ್ಯ ಪರಸ್ಯನಿಂದಾಂ
ಪಾಪೇ ರತಿಂ ಚ ಸುನಿವಾರ್ಯ ಮನಸ್ಸಮಾಧೌ ।
ಆದಾಯ ಹೃತ್ಕಮಲಮಧ್ಯಗತಂ ಪರೇಶಮ್
ವಾರಾಣಸೀಪುರಪತಿಂ ಭಜ ವಿಶ್ವನಾಥಮ್ ॥

ವಾರಾಣಸೀಪುರಪತೇಃ ಸ್ತವನಂ ಶಿವಸ್ಯ
ವ್ಯಾಖ್ಯಾತ ಮಷ್ಟಕ ಮಿದಂ ಪಠತೇ ಮನುಷ್ಯಃ ।
ವಿದ್ಯಾಂ ಶ್ರಿಯಂ ವಿಪುಲ ಸೌಖ್ಯ ಮನಂತಕೀರ್ತಿಂ
ಸಂಪ್ರಾಪ್ಯ ದೇಹವಿಲಯೇ ಲಭತೇ ಚ ಮೋಕ್ಷಮ್ ॥

ಇತಿ ಶ್ರೀ ವಿಶ್ವನಾಥಾಷ್ಟಕ ಮಿದಂ ಯಃ ಪಠೇತ್ ಶಿವಸನ್ನಿಧೌ
ಶಿವಲೋಕ ಮವಾಪ್ನೋತಿ ಶಿವೇನ ಸಹ ಮೋದತೇ

**30-12-2025 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ವೈಕುಂಠ ಏಕಾದಶಿಯ ಸಂದರ್ಭವಾಗಿ ಏರ್ಪಡಿಸಿದ ಪುಷ್ಪಾಲಂಕಾರ, ಸ್ವರ್ಣರಥೋತ್ಸವದ ದೃಶ್ಯಮಾಲಿಕೆ. ಭಕ್ತರೊಂದಿಗೆ ಮಾತನಾಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು. 31-12-2025 ದ್ವಾದಶಿಯಂದು ನಡೆದ ಚಕ್ರಸ್ನಾನದಲ್ಲಿ ತಿ.ತಿ.ದೇ., ಕಾರ್ಯನಿರ್ವಾಹಣಾಧಿಕಾರಿ, ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಪಾಲ್ಗೊಂಡರು.**

















# ಕೊರೆಯುವ ಚಳಿಯ ನಡುವೆ ಅಡಿ ಇಡುವ ಮಾಘಮಾಸ...

– ಶ್ರೀಮತಿ ವಾರುಣಿ ಹೊನ್ನಾಳಿ
99160 22982

## ದೈವಿಕ ಶಕ್ತಿ ಭರಿತ ಆಧ್ಯಾತ್ಮಿಕ ತಿಂಗಳು ಮಾಘ :

ಮೆಲ್ಲನೆ ಹಿಮ ಅಡಿಯಿಡುವ ಹೊತ್ತು. ಮುಂಜಾನೆ ಮುಸುಕಿನಲ್ಲಿ ಅವಿಸಿಕೊಳ್ಳುವ ಗಮ್ಮತ್ತು. ಹಗಲು ಕಿರಿದು, ಇರುಳು ಹಿರಿದಾಗುವ ಕಾಲ. ಬೆಳಗ್ಗೆ ಏಳುವಾಗ ಇನ್ನಷ್ಟು ಹೊತ್ತು ಕತ್ತಲಾಗೇ ಇರಬಾರದೇ ಎಂದು ಮಗ್ಗುಲು ಬದಲಿಸಿ ಹೊದ್ದಿಕೆಯೊಳಗೇ ಕನವರಿಸುವ ಘಳಿಗೆ. ಆಗಲೇ ಮಾಗಿ ಕನಸು. ಸುಗ್ಗಿ ಮುಗಿಯುವ ಹೊತ್ತಿನಲ್ಲಿ ಧಾನ್ಯಗಳ ರಾಶಿಗಳು ಮೂಟೆಮೂಟೆಗಳಲ್ಲಿ ಮನೆಗೆ ಆಗಮಿಸಿ ಸಮೃದ್ಧಿಯನ್ನು ಸೂಚಿಸುವ ಕಾಲವೇ ಮಾಘ. ಇದನ್ನು **"ಮಾಗಿ ಕಾಲ"** ಎಂದೂ ಕರೆಯುತ್ತಾರೆ.

ನಯವಾದ ಮೈ, ಕೈ - ಕಾಲುಗಳು ಒಡೆಯುವ, ತುಟಿಗಳು ಬಿರಿಯುವ, ಮರ, ಗಿಡವೆಲ್ಲವೂ ಒಮ್ಮೆಲೇ ಎಲೆ ಉದುರಿಸಿಕೊಂಡು ಬೋಳಾಗುವ ಕಾಲವಿದು. ನಸುಕಿನಲ್ಲಿ ಬೇಗನೆ ಗೂಡು ಬಿಡದ ಪುಟ್ಟ ಹಕ್ಕಿಗಳು, ಮಂಜಿನ ಮರೆಯಲ್ಲಿ ಅಡಗಿ ಅವಿತಿರುವ ದಿನಕರ, ಮೆಲ್ಲ ಮೆಲ್ಲನೆ ಭೂ ಸ್ಪರ್ಶ ಮಾಡುವ ಅರುಣನ ಕಿರಣಗಳ ನಡುವೆಯೇ ಚುಮುಚುಮು ಚಳಿರಾಯ ಇನ್ನಷ್ಟು ಕಚಗುಳಿ ಇಡುತ್ತಾನೆ. ಬಿಸಿಲೇರಿದಂತೆ ತನ್ನ ತೀವ್ರತೆ ತೋರಿಸುವ ಬೆಳಗುಗಳು, ಅಲ್ಲೊಂದಿಷ್ಟು ಹೊಳವುಗಳು, ಎಲೆ ಕಳಚಿಕೊಂಡು ಬೋಳಾಗಿ ನಿಂತ ಮರಗಳು ಇವುಗಳು ನಡುವೆಯೇ ಅಡಿ ಇಡುತ್ತದೆ ಮಾಘಮಾಸ. ಇಳೆಗೆ ಶಿಶಿರನ ಆಗಮನಕ್ಕೆ ನಿಸರ್ಗ ಪುಳಕಿತಗೊಂಡು ಸ್ವಾಗತಿಸುವ ಪರಿ ಇದು.

ಹೌದು, ಹಿಂದೂ ಪಂಚಾಂಗದ 11 ನೇ ತಿಂಗಳು ಮಾಘ ಬಂದಿತು ಎಂದರೆ ಪ್ರಕೃತಿಯೇ ಒಮ್ಮೆಮೆಲ್ಲನೆ ಮುದುರಿ ಕೂರುತ್ತದೆ. ಸೂರ್ಯೋದಯಕ್ಕೆ ಮುನ್ನವೇ ಸಂಪ್ರದಾಯಸ್ಥರ ಆಚರಣೆಗಳು ಗರಿಗೆದರುತ್ತವೆ. ಇದು ಶಿಶಿರ ಋತುವಿನ ಹೊಸ್ತಿಲೂ ಹೌದು. ಶಿಶಿರ ಎಂದರೆ ವಿಷ್ಣು ಎಂಬ ಅರ್ಥವಿದೆ. ಶಿವನ ತಂಪಾದ ಅಂಶಕ್ಕೆ ಶಿಶಿರಾತ್ಮಕ ಎಂದೂ ಪಂಡಿತರು ವ್ಯಾಖ್ಯಾನಿಸುತ್ತಾರೆ. ಹಾಗಾಗಿ ಮಾಘ - ಫಾಲ್ಗುಣಗಳು ಅಪ್ಪಟ ಚಳಿಗಾಲದ ದಿನಗಳಾಗಿವೆ. ಚಿಗುರೆಲೆ ಬರಲು ಅವಕಾಶ ಕಲ್ಪಿಸುವುದು ಪ್ರಕೃತಿಯ ನಿಯಮ, ಹಾಗಾಗಿ ಈ ಋತುವಿನ ಅಂತ್ಯದಲ್ಲಿ ವಸಂತನ ಆಗಮನಕ್ಕೆ ನಿಸರ್ಗವೇ ಸ್ವಾಗತ ಕೋರಲು ಹವಣಿಕೆ ನಡೆಸುವುದು ವಿಶೇಷ. ಹುಣ್ಣಿಮೆ ದಿನ ಮಘ ನಕ್ಷತ್ರ ಬರುವ ಮಾಸವೇ ಮಾಘ. ಸೂರ್ಯನು ಮಕರರಾಶಿಗೆ ಪ್ರವೇಶಿಸುವುದರೊಂದಿಗೆ ಸೌರ ಮಕರ ಮಾಸವೂ ಆಚರಣೆಗೆ ಬರುತ್ತದೆ. ಮಾಘಮಾಸ ಸೂರ್ಯನಿಗೆ ಅತ್ಯಂತ ಪ್ರೀತಿ ಪಾತ್ರ ತಿಂಗಳು. ಉತ್ತರ ಭಾರತದ ಬಹುಪಾಲು ರಾಜ್ಯಗಳಲ್ಲಿ ಮಾಘ ಮೇಳಗಳು ಈ ಮಾಸದಲ್ಲಿ ಸಂಪನ್ನಗೊಳ್ಳುತ್ತವೆ. ಕಾರ್ತಿಕ ಮಾಸದಲ್ಲಿ ದೀಪಗಳನ್ನು ಬೆಳಗಲು ಇರುವಷ್ಟೇ ಪ್ರಾಶಸ್ತ್ಯ ಮಾಘ ಮಾಸದ ಸ್ನಾನ ಮತ್ತು ದಾನಕ್ಕೆ ಇದೆ ಎಂಬುದೇ ಒಂದು ವೈಶಿಷ್ಟ್ಯ. ಇವುಗಳಿಂದ ಪಾಪ ಕ್ಷಯವಾಗುತ್ತದೆ. ಹಾಗಾಗಿ ಮಾಘ ಎಂಬುದು **"ದೈವಿಕ ಶಕ್ತಿ ಭರಿತ ಆಧ್ಯಾತ್ಮಿಕ ಮಾಸ"** ಎಂದೇ ಖ್ಯಾತವಾಗಿದೆ.

ಸೂರ್ಯನು ಮಕರ ರಾಶಿಯಿಂದ ಕುಂಭ ರಾಶಿಗೆ ಸಂಚರಿಸಲು ಈ ಕಾಲಘಟ್ಟದಲ್ಲಿ ಸಿದ್ಧನಾಗುತ್ತಾನೆ. ಈ ಸಂಚಾರವು ಸೂರ್ಯನ ಪ್ರಭಾವವನ್ನು ಪ್ರಬಲಗೊಳಿಸುತ್ತದೆ ಎನ್ನುತ್ತದೆ ಜ್ಯೋತಿಷ್ಯ ಶಾಸ್ತ್ರ. (ಕಡು ಬೇಸಿಗೆಯ ಆರಂಭಕ್ಕೆ ಇದು ಮೆಲ್ಲನೆ ಮುನ್ನುಡಿಯನ್ನೂ ಬರೆಯುತ್ತದೆ) ಹಾಗಾಗಿ ಈ ಮಾಸದಲ್ಲಿ ಜನಿಸಿದವರಿಗೆ ಆತ್ಮಶಕ್ತಿ. ಸ್ವಾವಲಂಬನೆ, ಸಾಹಸ ಮತ್ತು ದಿಟ್ಟ ನಿರ್ಧಾರವನ್ನು ತೆಗೆದುಕೊಳ್ಳುವ ಸ್ಥಿರಚಿತ್ತತೆ ಇರುತ್ತದೆ. ಇವರುಗಳು ಅಪಾರ ಧೈರ್ಯಶಾಲಿಗಳಾಗಿರುತ್ತಾರೆ.

## ಅರಿತು ಆಚರಿಸಲಿರುವ ಹಬ್ಬ - ಹರಿದಿನಗಳು :

ಮಾಘಮಾಸದಲ್ಲಿ ಕೆಲವು ವಿಶೇಷ ಹಬ್ಬ-ಹರಿದಿನಗಳಿವೆ. ಮೇಲು ನೋಟಕ್ಕೆ ಇವು ಥಾಳಾಗಿ ಕಾಣದಿದ್ದರೂ ಅರಿತು ಆಚರಿಸಬೇಕಿದೆ. ಮಾಘ ಪಂಚಮಿ (ಶ್ರೀ ಪಂಚಮಿ/ವಸಂತಪಂಚಮಿ) ದಿನದಂದು ಸರಸ್ವತಿ ಪೂಜೆ ಬಹು ವಿಶೇಷ. ಇಂದು ವಿದ್ಯಾಧಿದೇವತೆ ಸರಸ್ವತಿಯ ಜನ್ಮದಿನವಾಗಿದೆ. ಆಕೆಯ ಆರಾಧನೆಯು ಜ್ಞಾನ ಮತ್ತು ಬಹು ಪ್ರಕಾರದ ಕಲೆ-ಕುಶಲತೆ ಒಲಿಯಲು ಇದು ಶುಭ ದಿನವಾಗಿದೆ.

ಮಾಘಶುದ್ಧ ಸಪ್ತಮಿ-ರಥ ಸಪ್ತಮಿ. ಇಂದು ಸೂರ್ಯ ಉತ್ತರ ಮುಖಿ ಆಗುತ್ತಾನೆ. ಅದಿತಿ ಕಶ್ಯಪರಿಗೆ ಸೂರ್ಯ ಜನಿಸಿದ ದಿನವಿದು. ಹಾಗಾಗಿ ಹಲವೆಡೆ ಸೂರ್ಯ ಜಯಂತಿ ಆಚರಣೆಯೂ ನಡೆಯುತ್ತದೆ. ಮಾಘಶುದ್ಧ ಅಷ್ಟಮಿಯಂದು ಭೀಷ್ಮಾಷ್ಟಮಿ.

ಪಿತಾಮಹ ಭೀಷ್ಮಾಚಾರ್ಯರು ದೇಹತ್ಯಾಗ ಮಾಡಿದ ದಿನ. ಮಾಘ ಸ್ನಾನಾನಂತರ ಅಂದು ಭೀಷ್ಮತರ್ಪಣ ಕೊಡುವ ಪದ್ಧತಿ ಇದೆ. ಮಾಘ ಶುದ್ಧ ಹುಣ್ಣಿಮೆ ಇನ್ನೂ ಒಂದು ವಿಶೇಷವಿದೆ. ಇದನ್ನು ಭಾರತ ಹುಣ್ಣಿಮೆ, ಮಘೀ ಎಂದೂ ಕರೆಯುತ್ತಾರೆ. ಬನಶಂಕರಿ, ಚಂದ್ರಲಾ ಪರಮೇಶ್ವರಿ, ಸವದತ್ತಿ ಎಲ್ಲಮ್ಮದೇವಿ ಸೇರಿದಂತೆ ಕುಲದೇವಿಯರ ಒಕ್ಕಲಿನವರು ಅಂದು ವಿಶೇಷ ಪೂಜಾದಿಗಳನ್ನು (ಕುಲಧರ್ಮ) ಮಾಡುತ್ತಾರೆ. ದೇವಿಯ ಪಾದುಕೆ, ಮಾಂಗಲ್ಯಗಳಿಗೆ ಮನೆಯಲ್ಲೇ ಪೂಜೆ ಸಲ್ಲಿಸುತ್ತಾರೆ.

ಪತಿ ಸಮೇತರಾಗಿ ಬರುವ ಸುಮಂಗಲಿಯರಿಗೆ ಪಾದ ಪೂಜೆ ಮಾಡಿ, ಹರಿದ್ರಾ ಕುಂಕುಮಾದಿ ವಸ್ತ್ರ, ಮಂಗಳ ದ್ರವ್ಯಗಳನ್ನು ನೀಡುತ್ತಾರೆ. ಸಾಕ್ಷಾತ್ ದೇವಿಯೇ ಮುತ್ತೈದೆಯರ ರೂಪದಲ್ಲಿ ಮನೆಗೆ ಆಗಮಿಸಿದ್ದಾಳೆಂದು ಭಾವಿಸಿ ಬಾಗಿನ ಸಮರ್ಪಣೆ ಮಾಡುತ್ತಾರೆ. ಊಟೋಪಚಾರ ಮಾಡಿ ಆಶೀರ್ವಾದ ಬೇಡುತ್ತಾರೆ. ಮಾಘ ಪೂರ್ಣಿಮೆಯು ಚಂದ್ರನ ಪೂರ್ಣ ಶಕ್ತಿಯನ್ನು ಸೂಚಿಸುತ್ತದೆ. ಇದು ಸಾಧನೆ ಮತ್ತು ಧ್ಯಾನಕ್ಕೆ ಅತ್ಯಂತ ಶುಭಕರವಾದ ಮುಹೂರ್ತವಾಗಿದೆ.

**ಮಧ್ವನವಮಿ :**

ಜಗತ್ತಿಗೆ **"ಪೂರ್ಣಪ್ರಜ್ಞ"** ದೃಷ್ಟಿಯನ್ನು ನೀಡಿದ ದ್ವೈತ ಮತ ಸಿದ್ಧಾಂತಿ ಆಚಾರ್ಯ ಶ್ರೀ ಮಧ್ವರು ಪುಷ್ಪರಾಶಿಯ ನಡುವೆ ಉಡುಪಿಯಲ್ಲಿ ಅದೃಶ್ಯರಾದ ಪುಣ್ಯ ದಿನ. ಮಾಘದಲ್ಲಿ ಅಮಾವಾಸ್ಯೆಯ ಹಿಂದಿನ ದಿನ ಎಂದರೆ ಚತುರ್ದಶಿಯು **'ಶಿವರಾತ್ರಿ'** ಎಂದೇ ಖ್ಯಾತವಾಗಿದೆ. ಶಿವನ ಆರಾಧನೆಗೆ ಮೀಸಲಾದ ದಿನವಿದು. ಇದು ಮೋಕ್ಷಪ್ರಾಪ್ತಿಗೆ ಮಹಾಮಾರ್ಗ ಒದಗಿಸಿ ಕೊಡುತ್ತದೆ ಎಂಬ ನಂಬಿಕೆ ಇದೆ. ಮಾಘ ಮಾಸದ ಅಮಾವಾಸ್ಯೆಯಂದು ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ಸಮಸ್ತ ತೀರ್ಥಗಳೂ ಸಂಗಮವಾಗುತ್ತದೆ ಎನ್ನುತ್ತದೆ. ಮಹಾಭಾರತದ ಅನುಶಾಸನ ಪರ್ವ, ಈ ದಿನಕ್ಕೆ ಮೌನಿ ಅಮಾವಾಸ್ಯೆ ಎಂದೂ ಕರೆಯುತ್ತಾರೆ. ಇಂದು ಮೌನವ್ರತ ಆಚರಿಸಿ ಪುಣ್ಯ ಸ್ನಾನ ಮಾಡಿದರೆ ಅಧಿಕ ಪುಣ್ಯ ಲಭ್ಯವಾಗಲಿದೆ.

**ಪುಣ್ಯ ಸ್ನಾನಕ್ಕೆ ಮಹತ್ವ :**

ಮಾಘ ಮಾಸ ಪರ್ಯಂತ ನಸುಕಿನಲ್ಲಿ ನಕ್ಷತ್ರಗಳು ಇರುವಾಗಲೇ ನದಿ ಸ್ನಾನ (ಗಂಗಾ ಸ್ನಾನ)ನಂತರ ಇಷ್ಟ ದೇವರ ಪೂಜೆ, ವೇದ-ಉಪನಿಷತ್ತುಗಳ ಪಠಣ, ಪಾರಾಯಣ ಮತ್ತು ದಾನಾದಿಗಳಿಗೆ ಪ್ರಾಮುಖ್ಯ ನೀಡಲಾಗಿದೆ. ಈ ಸಂದರ್ಭದಲ್ಲಿ ಬ್ರಹ್ಮಚರ್ಯ ಪಾಲನೆ, ಸೂರ್ಯ ಮತ್ತು ವಿಷ್ಣುವಿನ ಆರಾಧನೆ ಪ್ರಧಾನವಾಗಿದೆ.

**ಶಾಂಡಿಲ್ಯ ಸ್ಮೃತಿ ಹೀಗೆ ಹೇಳಿದೆ:**

ಶಾಂಡಿಲ್ಯ ಸ್ಮೃತಿಯಲ್ಲಿ ಮಾಘಮಾಸದ ಮಹಾತ್ಮೆಯನ್ನು ಸೋದಾಹರಣವಾಗಿ ವಿವರಿಸಲಾಗಿದೆ.

ಸೂರ್ಯೋದಯಕ್ಕೆ ಮೊದಲು ಪವಿತ್ರ ಸ್ನಾನ ಮಾಡಲು ಒಂದೊಂದು ಕೆರೆ, ನದಿ, ಸಂಗಮ, ಸಮುದ್ರಗಳತ್ತ ಹೆಜ್ಜೆಗಳನ್ನು ಹಾಕಿದರೂ ಸಾಕು. ಅದರಿಂದ ಅಶ್ವಮೇಧಯಾಗ ಮಾಡಿದ ಪುಣ್ಯ ಲಭಿಸುತ್ತದೆ. ಪುಣ್ಯ ಸ್ನಾನದ ಫಲವಾಗಿ ದೈಹಿಕ, ವಾಚಿಕ, ಮಾನಸಿಕ ಪಾಪ ಮಾತ್ರವಲ್ಲ. 7 ಜನ್ಮದ ದೋಷಗಳೂ ನಾಶವಾಗುತ್ತವೆ ಎಂದು ಸ್ಮೃತಿ ಹೇಳಿದೆ.

**ಗಂಗಾಯಾಂ ಸ್ನಾನ ಮಾತ್ರೇಣ**
**ಲಭತೇ ಮಾನವೋ ನೃಪಃ**

ಈ ಮಾಸದಲ್ಲಿ ಗುರುಗಳ ಸ್ಮರಣೆಯೊಂದಿಗೆ ನಿತ್ಯವೂ ಭಗವದ್ಗೀತೆ, ಭಾಗವತ, ವಿಷ್ಣು ಸಹಸ್ರನಾಮ ಪಾರಾಯಣ, ಸೂರ್ಯಾಷ್ಟಕ, ಆದಿತ್ಯ ಹೃದಯ ಪಠಣ, ತುಳಸೀ ಪೂಜೆ ಮಾಡುವುದು ಅತಿ ಶ್ರೇಷ್ಠ ಶುದ್ಧವಾದ ಪದಾರ್ಥದಿಂದ ಅಡುಗೆಯನ್ನು ಮಾಡಿ, ಬ್ರಹ್ಮಜ್ಞಾನಿ, ತಪಸ್ವಿ, ವ್ರತಾನುಷ್ಠಾನ ಮಾಡುವವರಿಗೆ ಭೋಜನ ಮಾಡಿಸಬೇಕು. ನಂತರ ಮುತ್ತುಗದ ಎಲೆಯಲ್ಲಿ ಭೋಜನ ಸ್ವೀಕಾರ ಮಾಡಿದರೆ ತತ್ವಾಭಿಮಾನಿ ದೇವತೆಗಳು, ಪ್ರಾಣದೇವರು ಮತ್ತು ಭಗವಂತ ಸಂಪ್ರೀತನಾಗುತ್ತಾನೆ ಎಂದಿದ್ದಾನೆ ಶ್ರೀಕೃಷ್ಣ. ಕಂಬಳಿ, ಉಣ್ಣೆಯ ಬೆಚ್ಚಗಿನ ವಸ್ತ್ರ, ಕಪ್ಪು ಎಳ್ಳನ್ನು ದಾನ ಮಾಡುವುದು ಪುಣ್ಯಪ್ರದ.

ಇವುಗಳಿಂದ ಆಜನ್ಮ ಪರ್ಯಂತ ನಾವು ಆನಂದವಾಗಿ ಇರಬಹುದು. ಹೀಗೆ ಪ್ರತಿಯೊಬ್ಬರೂ ಆನಂದ ಕಂಡು ಕೊಂಡರೆ ಜಗತ್ತೇ ನಂದನ ವನವಾಗುತ್ತದೆ. ಮಾಘ ಮಾಸದಲ್ಲಿ ತ್ರಿವೇಣಿ ಸಂಗಮದ ಸ್ನಾನ ಮಾಡಿದರೆ ರಾಜಸೂಯಾ ಯಾಗಕ್ಕಿಂತ ಅಧಿಕ ಫಲ ಲಭ್ಯ ಎಂದಿದೆ ಪದ್ಮಪುರಾಣ.

**ರಾಜಸೂಯಾ ಸಹಸ್ರಸ್ಯ**
**ರಾಜನ್ ನಭಿಕಲಂ ಫಲಂ.**

ಇದುವೇ ಮಾಸದ ಧರ್ಮ. ನಮ್ಮ ಹತ್ತಿರವೇ ಪುಣ್ಯನದಿಗಳು, ಸರೋವರಗಳು ಇದ್ದರೂ ನಾವು ಅತ್ತ ಸಾಗಲಿಲ್ಲ ಎಂದರೆ ಅದು ಏಳೇಳು ಜನ್ಮದ ಕರ್ಮದ ಫಲ.





**ತೀರ್ಥಸ್ಯಾಸ್ಯ ಜಲೇ ನಿತ್ಯಮಿತಿ**

**ಸಂಕಲ್ಪ್ಯಚೇತಸಿ ॥**

ಈ ರೀತಿಯಾಗಿ ಆರಂಭದಲ್ಲಿ ವಿಧಿಪೂರ್ವಕವಾಗಿ, ಮಾನಸಿಕವಾಗಿ ಮಾಧವನೇ ಮಾಘಮಾಸ ಪೂರ್ತಿ ಈ ತೀರ್ಥ ಜಲದಲ್ಲಿ ನಾನು ಪುಣ್ಯ ಸ್ನಾನ ಮಾಡುತ್ತೇನೆ, ಎಂದು ಸಂಕಲ್ಪಿಸಬೇಕು.

## ಯಾಗ - ಯಜ್ಞಕ್ಕೆ ಪ್ರಶಸ್ತ ತಿಂಗಳು :

ಮಾಘ ಮಾಸವು ಯಾಗ-ಯಜ್ಞ ಮಾಡಲು ಬಹಳ ಪ್ರಶಸ್ತವಾದ ತಿಂಗಳು. **'ಮಘ'** ಎಂದರೆ ಯಾಗ ಎಂಬ ಅರ್ಥವೂ ಇದೆ. ವಿಧಿವತ್ತಾಗಿ ಯಜ್ಞವನ್ನು ನೆರವೇರಿಸಿ, ಯಜ್ಞ ಶೇಷವನ್ನು ಸ್ವೀಕಾರ ಮಾಡುವುದರಿಂದ ಜನ್ಮಾಂತರದ ಪಾಪಗಳು ನಾಶವಾಗಿ, ಅನಂತ ಪುಣ್ಯ ಲಭಿಸುತ್ತದೆ. ಅಗ್ನಿ ಕುಂಡದ ಎದುರು ಮಂತ್ರ ಸಹಿತವಾಗಿ ಯಜ್ಞ ಮಾಡಿ ಹವಿಸ್ಸನ್ನು ಅರ್ಪಿಸುವುದು, ಆ ಮೂಲಕ ದೇವತೆಗಳನ್ನು ತೃಪ್ತಿ ಪಡಿಸುವುದು ಒಂದೆಡೆಯಾದರೆ ಬದುಕೇ ಒಂದು ಯಜ್ಞ ಎನ್ನುತ್ತಾರೆ ಪ್ರಾಜ್ಞರು.

ನಾವು ನಿತ್ಯ ಮಾಡುವ ಪೂಜೆ, ಬ್ರಹ್ಮಯಜ್ಞ, ಋಷಿ-ಪಿತೃ ತರ್ಪಣ,ಪಶುಯಜ್ಞ(ಗೋಗ್ರಾಸ ಅರ್ಪಣೆ, ಗೋ ಸಂಗೋಪನೆ ) ಮತ್ತು ಭೋಜನ ಸ್ವೀಕಾರ -ಇವೆಲ್ಲವೂ ಒಂದೊಂದು ಯಜ್ಞಗಳೇ ಎಂದಿದ್ದಾನೆ ಶ್ರೀಕೃಷ್ಣ ಭಕ್ತಿ, ಭಾವ ಮತ್ತು ಏಕಾಗ್ರತೆಗಳಿಂದ ಇವೆಲ್ಲವನ್ನೂ ಮಾಡಿದರೆ ಫಲ ಖಚಿತ. ಇದರಿಂದ ನಮ್ಮಲ್ಲಿ ಧನಾತ್ಮಕ ಸುಧಾರಣೆ ಕಾಣಲು ಸಾಧ್ಯವಿದೆ ಎಂಬುದೂ ಭಾಗವತದ ಸಂದೇಶವಾಗಿದೆ.

## ಆರಂಭ ಯಾವಾಗ?

ಪುಷ್ಯಮಾಸದ ಪೂರ್ಣಿಮೆಯಂದು ಮಾಘಸ್ನಾನವು ಪ್ರಾರಂಭವಾಗುತ್ತದೆ. ಮಾಘ ದಶಮಿ ಅಥವಾ ಪೂರ್ಣಿಮಾದವರೆಗೆ ಒಂದು ತಿಂಗಳ ಪರ್ಯಂತವಾಗಿ ಅರುಣೋದಯ ಕಾಲದಲ್ಲಿ ಪುಣ್ಯಸ್ನಾನ ಮಾಡಬೇಕು. ಸೂರ್ಯನು ಸ್ವಲ್ಪ ಉದಯಿಸಿದಾಗ ಸ್ನಾನ ಮಾಡುವ ಯಾವ ಬ್ರಹ್ಮಘ್ನನನ್ನು, ಪಾಪ ಮಾಡಿದ ಜೀವಗಳನ್ನೂ **"ಪವಿತ್ರ ಮಾಡೋಣ"** ಎಂದು ಜಲಾಭಿಮಾನಿ ದೇವತೆಗಳು ಆಹ್ವಾನ ನೀಡುತ್ತ ನಿರೀಕ್ಷೆಯಲ್ಲಿ ಇರುತ್ತಾರೆ ಎನ್ನುತ್ತವೆ ಪುರಾಣಗಳು.

## ಸ್ನಾನ ಕಾಲ :

ನಕ್ಷತ್ರ ಇರುವಾಗಲೇ ಮಾಡುವ ಸ್ನಾನ ಉತ್ತಮ. ನಕ್ಷತ್ರ ಕಾಣದಿರುವಾಗ ಮಾಡುವ ಸ್ನಾನ ಮಧ್ಯಮ ಸ್ನಾನ.

ಸೂರ್ಯೋದಯದ ನಂತರ ಮಾಡುವ ಸ್ನಾನ **"ಕನಿಷ್ಠಸ್ನಾನ"** ಎಂದು ಪರಿಗಣಿಸಲಾಗಿದೆ. ಮಾಘ ಸ್ನಾನಕ್ಕೆ ಯಾವ ವಯಸ್ಸು, ಲಿಂಗ, ಜಾತಿ, ಪಂಗಡಗಳ ಭೇದ ಇಲ್ಲ. ಎಲ್ಲರೂ ನಸುಕಿನಲ್ಲೇ ಮಾಘ ಸ್ನಾನ ಮಾಡಿ ಪುಣ್ಯ ಸಂಪಾದಿಸಲು ಅರ್ಹರು.

**ಮಾಘಮಾಸಮಿಮಂ ಪೂರ್ಣಂ**

**ಸ್ನಾಸ್ಯೇಹಂ ದೇವ ಮಾಧವ**

"ನಮ್ಮೊಳಗಿರುವ ಪರಮಾತ್ಮನಿಗೆ ಅಹುತಿ ಸಮರ್ಪಣೆ ಮಾಡುತ್ತ ಇದ್ದೇನೆ. ಅದನ್ನು ಸ್ವೀಕಾರ ಮಾಡಿ ನಮ್ಮ ಬದುಕನ್ನು ಪಾವನ ಮಾಡು" ಎಂದು ಅನುಸಂಧಾನ ಪೂರ್ವಕವಾಗಿ ಮಹಾ ಪ್ರಸಾದ ಸ್ವೀಕಾರ ಮಾಡುವುದು **"ವೈಶ್ವಾನರ ಯಜ್ಞ"** ವಾಗಿದೆ. ಈ ಸಂದರ್ಭದಲ್ಲಿ ಮೌನ ಬಹಳ ಪ್ರಧಾನ. ಮಾಘ ಮಾಸದಲ್ಲಾದರೂ ಊಟ ಸ್ವೀಕಾರ ಸಂದರ್ಭ ಮೌನ ವಹಿಸಿ, ಭಗವದ್ ಚಿಂತನೆ ಮಾಡಿ ವೈಶ್ವಾನರ ಯಜ್ಞವನ್ನೇ ಮಾಡುತ್ತಿದ್ದೇನೆಂದು ಭಾವಿಸಿರಿ ಎಂದು ಶಾಸ್ತ್ರ-ಪುರಾಣಗಳು ಸಂದೇಶ ನೀಡಿವೆ.

ಒಂದು ತಿಂಗಳು ಈ ಮೌನವನ್ನು ಕಟುವಾಗಿ ಆಚರಿಸಿದರೆ ಅದೇ ನಮಗೆ ಅಭ್ಯಾಸವಾಗಿ ಬಿಡುತ್ತದೆ. ಮಾಘವು ಈ ಪಾಠವನ್ನು ಪ್ರೀತಿಯಿಂದಲೇ ಕಲಿಸುತ್ತದೆ.

## ತ್ರಿಮೂರ್ತಿಗಳೂ ಸಂಗಮಿಸಿರುತ್ತಾರೆ :

ಮೂರು ನದಿಗಳು ಸೇರುವ ಸಂಗಮ ಸ್ಥಾನದಲ್ಲಿ ಮಾಘ ಮಾಸದಲ್ಲಿ ಸಾಕ್ಷಾತ್ ತ್ರಿಮೂರ್ತಿಗಳೂ ಸಂಗಮಿಸಿರುತ್ತಾರೆ ಎಂಬ ಪ್ರತೀತಿ ಇದೆ. ಮಾಘಮಾಸದ ಸಂದರ್ಭದಲ್ಲಿ ಸಂಗಮಗಳ ಬದಿಯಲ್ಲೇ ವಾಸ ಮಾಡಿ ವ್ರತಾಚರಣೆ ಮಾಡುವ ಪದ್ಧತಿ ಇದೆ. ಇದಕ್ಕೆ ಕಲ್ಪವಾಸ ಎಂಬ ಹೆಸರು ಇದೆ. ವೇದಕಾಲೀನ ಯುಗದಿಂದಲೂ ಈ ಪದ್ಧತಿ ಜಾರಿಯಲ್ಲಿದೆ. ಸಾಧು, ಸಂತರೊಂದಿಗೆ ಸಂಸಾರಿಗಳೂ ಮಾಘ ಶುಕ್ಲ ದ್ವಾದಶಿ ವರಗೆ ಶ್ರದ್ಧಾ ಭಕ್ತಿಯಿಂದ **"ಕಲ್ಪವಾಸ"** ಅನುಷ್ಠಾನದಲ್ಲಿ ಇರುತ್ತಾರೆ.

## ವೈಜ್ಞಾನಿಕ ಸಂಬಂಧ ಏನು?

ಮಾಘ ಮಾಸಕ್ಕೂ ನದಿಗಳಲ್ಲಿ ಪುಣ್ಯ ಸ್ನಾನಕ್ಕೂ ವೈಜ್ಞಾನಿಕ ಸಂಬಂಧ ಏನು? ಎಂದು ಚಿಂತನೆ ಮಾಡಿದರೆ ಅಲ್ಲೊಂದು ಸತ್ಯ ದರ್ಶನವಿದೆ. ಮಾಘದಲ್ಲಿ ಚಳಿ ತೀವ್ರತೆ ಹೆಚ್ಚು. ಥಂಡಿ ವಾತಾವರಣ ಮತ್ತು ಹಿಮಪಾತದ ಕಾರಣ ಮುಂಜಾನೆ ಸೂರ್ಯನ ತಾಪ ಅತಿ ಕಡಿಮೆ ಇರುತ್ತದೆ. ಹಾಗಾಗಿ ನದಿಗಳಲ್ಲಿ ನಸುಕಿನಲ್ಲೇ ಸ್ನಾನ ಮಾಡಿದರೆ ನಡುಗುವ ಮೂಲಕ ದೇಹ ತನ್ನ ತಾಪವನ್ನು ಸಮತೋಲನ ಮಾಡಿಕೊಳ್ಳುತ್ತದೆ.

ಬೀಳುವ ಕೆಲವೇ ಸೂರ್ಯನ ಕಿರಣಗಳು ಚರ್ಮವನ್ನು ಕಾಂತಿಗೊಳಿಸುತ್ತದೆ. ಹಾಗಾಗಿಯೇ ಶುದ್ಧ ವೈದಿಕರಂತೆ ಅಯ್ಯಪ್ಪಸ್ವಾಮಿ ಮಾಲೆ ಧರಿಸಿರುವ ವ್ರತ ಧಾರಿಗಳೂ ನಸುಕಿನಲ್ಲೇ ನದಿ, ಕೆರೆಗಳಲ್ಲಿ ಪುಣ್ಯ ಸ್ನಾನ ಮಾಡುತ್ತಾರೆ. (ಸಾತ್ವಿಕರು ಮಾಡುವ ಬಲವಂತಕ್ಕಾದರೂ ಮಾಘ ಸ್ನಾನ ಮಾಡಬೇಕಂತೆ) ಈ ಮಾಸದಲ್ಲಿ ಎಳ್ಳು-ಬೆಲ್ಲವನ್ನು ಸೇವಿಸಿದರೆ ದೇಹದಲ್ಲಿ ಉಷ್ಣತೆ ಮಟ್ಟ ಪಾಲನೆಯಾಗುತ್ತದೆ. ಇದಕ್ಕೊಂದು ಹಬ್ಬದ ಆಚರಣೆಯನ್ನೂ ಹಿರಿಯರು ಜಾರಿಗೆ ತಂದಿರುವ ಹಿನ್ನೆಲೆಯೂ ವೈಜ್ಞಾನಿಕವೇ ಆಗಿದೆ. ಸನಾತನ ಭಾರತೀಯ ಧರ್ಮ ಮತ್ತು ವಿಜ್ಞಾನ ಜತೆ ಜತೆಗೇ ಸಾಗುತ್ತವೆ ಎಂಬುದಕ್ಕೆ ಇವೇ ಉದಾಹರಣೆಗಳು.

## ಮಾಘ ಸ್ನಾನದ ವಿಶೇಷ ಕ್ಷೇತ್ರಗಳು :

ಮಾಘದಲ್ಲಿ ಮಾಡುವ ಸ್ನಾನವು ನಮ್ಮ ಪಾಪಗಳನ್ನು ತೊಳೆದುಕೊಳ್ಳುವ ಮತ್ತು ಆತ್ಮ ಶುದ್ಧಿ ಸಾಧಿಸುವ ನಿಟ್ಟಿನಲ್ಲಿ ಅತ್ಯಂತ ಸಹಾಯಕವಾಗಿದೆ. ಲಕ್ಷ ಕೋಟಿ ಜೀವರಾಶಿಗಳಲ್ಲಿ ಮಾನವರಿಗೆ ಮಾತ್ರ ಈ ಪುಣ್ಯ ಸಾಧನೆ ಅವಕಾಶ ದೊರಕಿರುವುದೇ ಅಹೋ ಭಾಗ್ಯವಾಗಿದೆ ಎಂಬುದನ್ನು ಎಂದಿಗೂ ಮರೆಯಬಾರದು.

ಕಾವೇರಿ,ಕಬಿನಿ ಮತ್ತು ಸ್ಪಟಿಕ ಸರೋವರದ ಸಂಗಮ ಕ್ಷೇತ್ರ ಟಿ.ನರಸೀಪುರ ಮತ್ತು ನಂಜನಗೂಡು (ಮೈಸೂರು ಜಿಲ್ಲೆ) ಶ್ರೀರಂಗಪಟ್ಟಣದ ಕಾವೇರಿ ಸ್ನಾನಘಟ್ಟ ಮತ್ತು ಮದ್ದೂರಿನ ಶಿಂಷಾ ನದಿ ದಂಡೆ (ಮಂಡ್ಯ ಜಿಲ್ಲೆ) ತುಂಗಭದ್ರಾ ಸಂಗಮವಾದ ಕೂಡಲಿ (ಶಿವಮೊಗ್ಗ ಜಿಲ್ಲೆ) ಕೊಡಗಿನ ಭಾಗಮಂಡಲ, ಕೃಷ್ಣಾ ಮತ್ತು ಭೀಮಾನದಿ ಸಂಗಮ ಸೇರಿದಂತೆ ಹಲವು ನದಿ, ಸಂಗಮಗಳಲ್ಲಿ ಮಾಘಸ್ನಾನಕ್ಕೆ ಪ್ರತಿವರ್ಷ ಸಾವಿರಾರು ಭಕ್ತರು ಬರುತ್ತಾರೆ. ಪ್ರಯಾಗರಾಜ್‌ನಲ್ಲಿ ಪ್ರತಿವರ್ಷ ಮಿನಿ ಕುಂಭಮೇಳವೂ ಮಾಘಮಾಸದಲ್ಲೇ ನಡೆಯುವುದು ಗಮನಾರ್ಹವಾಗಿದೆ. ಇವೆಲ್ಲವೂ ಕೋಟಿ ಕೋಟಿ ಭಕ್ತರ ಪಾಪ ವಿಮೋಚನೆ ಕ್ಷೇತ್ರಗಳಾಗಿವೆ. ಹೊರಗಿನ ಮತ್ತು ಒಳಗಿನ ಸ್ನಾನವಾದರೆ ಜೀವನ ಧನ್ಯ.

## ಜ್ಯೋತಿಷ್ಯ ಶಾಸ್ತ್ರದ ಉಲ್ಲೇಖ:

ಜ್ಯೋತಿಷ್ಯ ಶಾಸ್ತ್ರವೂ ಮಾಘ ಮಾಸದ ವಿಶೇಷತೆಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಿದೆ. ಈ ತಿಂಗಳು ಭಕ್ತಿ ಸಾಧನೆಗೆ ಪೂರಕ ಎಂದಿದೆ. ಆಧ್ಯಾತ್ಮಶಕ್ತಿ, ಆತ್ಮಶಕ್ತಿ ಮತ್ತು ಸ್ವಾವಲಂಬನೆಗಳನ್ನು ನಮ್ಮದನ್ನಾಗಿಸಿಕೊಳ್ಳಲು ಈ ಮಾಸದ ಆಚರಣೆಗಳನ್ನು ತಪ್ಪದೇ ಮಾಡಬೇಕು ಎಂದೂ ಭರತಖಂಡದ ಜನರಿಗೆ ಸೂಚಿಸಿದೆ. ಮಾಘಮಾಸದ ಕಾಲಘಟ್ಟದಲ್ಲಿ ವಿವಿಧ ಗ್ರಹಗಳ ಸಂಚಾರವು ಆಯಾ ವ್ಯಕ್ತಿಯ ಜೀವನದ ವಿವಿಧ ನೆಲೆಗಳಲ್ಲಿ ಶುಭ ಮತ್ತು ಅಶುಭ ಫಲಗಳನ್ನು ದೊರಕಿಸಿಕೊಡಬಹುದು. ಈ ಮಾಸದ ಗ್ರಹಗಳ ಸಂಚಾರದ ಪ್ರಭಾವವನ್ನು ತಜ್ಞ ಜ್ಯೋತಿಷಿಗಳಿಂದ ಸೂಕ್ತವಾಗಿ ತಿಳಿದು, ಜೀವನದ ಯೋಜನೆಗಳನ್ನು ಬೇಕಾದ ಸೂಕ್ತ ಮಾರ್ಗವನ್ನೂ ಹೊಂದಿಸಿಕೊಂಡು, ಮಂಗಳಕರ ಫಲಗಳನ್ನು ಪಡೆಯಬಹುದು ಎಂದು ಜ್ಯೋತಿಷ್ಯ ಶಾಸ್ತ್ರ ಸೂಚ್ಯವಾಗಿ ಹೇಳಿದೆ. ಒಟ್ಟಾರೆ ಮಾಘಮಾಸ. ಆಧ್ಯಾತ್ಮಿಕತೆ, ಪವಿತ್ರತೆ ಹಾಗೂ ದೈವಿಕ ಶಕ್ತಿಗಳ ತ್ರಿವೇಣಿ ಸಂಗಮವಾಗಿದೆ. ನಮ್ಮ ಬದುಕನ್ನು ಪರಮ ಪಾವನ ಮಾಡಲು ಸನ್ನದ್ಧವಾಗಿದೆ.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸ್ವಾಮಿಯವರ ಆರ್ಜಿತ ಸೇವೆಗಳು – ತಿರುಮಲೆ

## ಆರ್ಜಿತ ಸೇವೆಗಳು/ ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ಸೇವೆ ಸಮಯ | ಟಿಕೆಟ್ಟು ಬೆಲೆ | ಪ್ರವೇಶ |
|---|---|---|---|---|
| | **ನಿತ್ಯ ಸೇವೆ** | | | |
| 1. | ಸುಪ್ರಭಾತ | ಬೆ. 3.00 ಗಂ|| | 120.00 | 01 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಬೆ. 3.30 ಗಂ|| | 220.00 | 01 |
| 3. | ಅರ್ಚನೆ (ಮಂಗಳ, ಬುಧ, ಗುರು) | ಬೆ. 4.30 ಗಂ|| | 220.00 | 01 |
| | **ನಿತ್ಯ ಉತ್ಸವಗಳು** | | | |
| 4. | ಕಲ್ಯಾಣೋತ್ಸವ | ಮ. 12.00 ಗಂ|| | 1,000.00 | 02 |
| 5. | ಊಂಜಲ್ ಸೇವೆ | ಮ. 2.00 ಗಂ|| | 500.00 | 01 |
| 6. | ಆರ್ಜಿತ ಬ್ರಹ್ಮೋತ್ಸವ | ಮ. 3.00 ಗಂ|| | 500.00 | 01 |
| 7. | ಸಹಸ್ರದೀಪಾಲಂಕರಣ ಸೇವೆ | ಸಾ. 5.00 ಗಂ|| | 500.00 | 01 |
| | **ವಾರದ ಸೇವೆಗಳು** | | | |
| 8. | ಅಷ್ಟದಳ ಪಾದಪದ್ಮಾರಾಧನೆ ಸೇವೆ (ಮಂಗಳವಾರ) | ಬೆ. 9.30 ಗಂ|| | 1,250.00 | 01 |
| 9. | ತಿರುಪ್ಪಾವಡ ಸೇವೆ (ಗುರುವಾರ) | ಬೆ. 7.00 ಗಂ|| | 850.00 | 01 |
| 10. | ಅಭಿಷೇಕ ಸೇವೆ (ಶುಕ್ರವಾರ) | ಬೆ. 4.30 ಗಂ|| | 750.00 | 01 |
| | **ವಾರ್ಷಿಕ ಸೇವೆಗಳು** | | | |
| 11. | ತೆಪ್ಪೋತ್ಸವ (ಫೆಬ್ರವರಿ/ ಮಾರ್ಚ್) | ರಾ. 7.00 ಗಂ|| | 500.00 | 01 |
| 12. | ವಸಂತೋತ್ಸವ ( ಮಾರ್ಚ್/ ಏಪ್ರಿಲ್) | ಮ. 2.00 ಗಂ|| | 300.00 | 01 |
| 13. | ಜ್ಯೇಷ್ಠಾಭಿಷೇಕ (ಅಭಿದೇಯಕ ಅಭಿಷೇಕ) (ಜೂನ್) | ಬೆ. 9.00 ಗಂ|| | 400.00 | 01 |
| 14. | ಪವಿತ್ರೋತ್ಸವಗಳು (ಆಗಸ್ಟ್) | ಬೆ. 9.00 ಗಂ|| | 2,500.00 | 01 |
| 15. | ಪುಷ್ಪಯಾಗ (ನವೆಂಬರ್) | ಬೆ. 9.00 ಗಂ|| | 700.00 | 01 |

Toll free : 155257

whatsapp feedback : 9399399399

e-mail :helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಟಿಕ್ಕೆಟ್‌ಗಳನ್ನು ಆನ್‌ಲೈನ್ ನಲ್ಲಿ ಮಾತ್ರವೇ ಬುಕ್ ಮಾಡಿಕೊಳ್ಳಬೇಕು.ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ :

**ttdevasthanams.ap.gov.in**

ನು ಸಂಪ್ರದಿಸಬೇಕು.

**ಗಮನಿಸಿ :** ಸೇವೆಗಳು ಮತ್ತು ಬೆಲೆಗಳು ಯಾವುದೇ ಸಂದರ್ಭದಲ್ಲಿಯಾದರೂ ಬದಲಾವಣೆಗಳು ಆಗುವ ಸಾಧ್ಯತೆ ಇದೆ.



# ಕರ್ನಾಟಕ ಭಕ್ತಿ ಸಾಹಿತ್ಯಕ್ಕೆ ಹರಿದಾಸರ ಕೊಡುಗೆ



- ನಾಗೇಂದ್ರ ಪ್ರಸಾದ್

ಭಗವಂತ ಮತ್ತು ಭಕ್ತ ನಡುವಿನ ಸಂಬಂಧ ಇಂದಿನಿದಲ್ಲ ಅನಾದಿಯಾದದ್ದು. ಭಕ್ತಿಯ ಪ್ರಾಚೀನತೆ ವೇದಗಳ ಕಾಲದಿಂದಲೂ ಇದೆ. ವೇದಗಳಲ್ಲಿಯೂ ಸಹ ಭಕ್ತಿಯ ಪ್ರಧಾನತೆಯನ್ನು ಗುರುತಿಸ ಬಹುದು. ಸಿಂಧೂ ನಾಗರೀಕತೆ ಹರಪ್ಪ ಮತ್ತು ಮೊಹೆಂಜೋದಾರೋ ಗಳಲ್ಲಿಯೂ ಸಹ ಭಕ್ತಿಯ ಕುರುಹು ಪತ್ತೆಯಾಗಿದೆ. ಆಗಿನ ಜನರು ಆ ಕಾಲದಲ್ಲಿಯೇ ಪ್ರಕೃತಿಯ ಎಲ್ಲ ಕಾರ್ಯಗಳಿಗೂ ಒಂದೇ ಒಂದು ಕಾರಣೀಭೂತವಾದ ಶಕ್ತಿಯಿದೆ ಎಂದು ನಂಬಿದ್ದರು.

ಈ ರೀತಿ ದಾರ್ಶನಿಕರ ಮೂಲಕ ಬಂದ ವೇದಗಳಲ್ಲಿ ತಾನೇತಾನಾಗಿ ಹೊರಹೊಮ್ಮಿರುವ ಭಕ್ತಿಯ ಪ್ರೀತಿ ಉಪನಿಷತ್ತುಗಳಲ್ಲಿ ಗುಪ್ತಗಾಮಿಯಾಗಿದೆ. ಇದರಲ್ಲಿ ಭಕ್ತಿ ಪ್ರಾರ್ಥನಾರೂಪವನ್ನು ತಾಳಿದೆ.

**ಅಸತೋಮ ಸದ್ಗಮಯ**
**ತಮಸೋಮ ಜ್ಯೋತಿರ್ಗಮಯ**
**ಮೃತ್ಯೋರ್ಮಾ ಅಮೃತಂಗಮಯ**

ಇಂತಹ ಪ್ರಾರ್ಥನೆಗಳಲ್ಲಿ ಭಕ್ತಿ ಭಾವದ ಹೊಳಪನ್ನು ಕಾಣಬಹುದು. ಭಕ್ತಿ ಎಂಬ ಪದವು ನಮಗೆ ಶ್ವೇತಾಶ್ವತ ಉಪನಿಷತ್ತಿನಲ್ಲಿಯೇ ಮೊಟ್ಟಮೊದಲು ಕಾಣಸಿಗುವುದು.

**ಯಸ್ಯ ದೇವೇ ಪರಾಭಕ್ತಿ**
**ರ್ಯಥಾ ದೇವೇ ತಥಾ ಗುರೌ**
**ತಸ್ಯ ತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ**

ಎಂದು ಹೇಳುವಲ್ಲಿ ಭಕ್ತಿ ಎಂಬ ಪದವನ್ನು ಬಳಸಲಾಗಿದೆ.

ಮುಂಡಿ ಸೂತ್ರಗಳ ಕಾಲಕ್ಕೆ ಬಂದರೆ (ಕ್ರಿ.ಪೂ.5-6 ನೇ ಶತಮಾನ) ಪಾಣಿನಿಯ ಸೂತ್ರಗಳಲ್ಲಿಯೂ ಭಕ್ತಿ ಎಂಬ ಪದವನ್ನು ಕಾಣುತ್ತೇವೆ.

ಶ್ರೀಮದ್ಭಗವದ್ಗೀತೆಯಲ್ಲಂತೂ ಭಕ್ತಿ ಒಂದು ಯೋಗವಾಗಿದೆ. ಶ್ರೀಕೃಷ್ಣನೇ ಕರ್ಮಮಾರ್ಗವನ್ನು ಕುರಿತು **"ಗಹನಾಕರ್ಮಣೋ ಗತಿಃ"** ಎಂದಿದ್ದಾನೆ ವರ್ತನೆಯಲ್ಲೂ ಭಕ್ತಿಯು ಇರಬೇಕಾದ್ದು ಅತ್ಯವಶ್ಯವಾದುದು ಎಂದಿದ್ದಾರೆ.

ವೇದಗಳ ಕಾಲದಿಂದಲೂ ಬೆಳೆದು ಬಂದ ಭಕ್ತಿಯ ಪ್ರವಾಹ ತಮಿಳುನಾಡಿನ ಶೈವ-ವೈಷ್ಣವ ಸಂತರಿಂದ ಮತ್ತೆ ಪ್ರವಹಿಸಿ ಜನರಲ್ಲಿ ದೇವಾಲಯಗಳ ಪ್ರಾಮುಖ್ಯತೆಯ ಅರಿವು ಮೂಡಿಸಿದರು. ತುಂಬಾ ಕಷ್ಟಕರವಾಗಿರುವ ಸಂದರ್ಭದಲ್ಲಿ ಭಕ್ತಿ ಪಥವನ್ನು ಸಾಮಾನ್ಯ ಜನರಿಗೂ ಅನುಸರಿಸಲು ಸಾಧ್ಯವಾಗುವಂತೆ ಸರಳೀಕರಿಸಿರುವರು. ಭಕ್ತಿ ಸಾಧನೆಯಲ್ಲಿ ಪ್ರವೃತ್ತಿ ಮಾರ್ಗವನ್ನು ಅಳವಡಿಸಿಕೊಳ್ಳಲು ದಾರಿ ಮಾಡಿಕೊಟ್ಟರು.

ಇಪ್ಪತ್ತನೇ ಶತಮಾನ ವಿಜ್ಞಾನದಲ್ಲಿ ಮುಂದೆ ಇದ್ದರೂ ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದರೂ, ಸಹಾ, ಭಕ್ತಿ ಮಾರ್ಗವನ್ನು ಜೊತೆ ಜೊತೆಯಾಗಿ ಕೈಗೊಂಡು ಕೃತಕೃತ್ಯತೆಯನ್ನು ಪಡೆದಂತಹ ಆಧುನಿಕ ಮಹಾ ವ್ಯಕ್ತಿಗಳಿಗೆ ಏನೂ ನಮ್ಮಲ್ಲಿ ಕೊರತೆಯಿಲ್ಲ. ರಾಮಕೃಷ್ಣ ಪರಮಹಂಸರು, ಅರವಿಂದರು, ರಮಣಮಹರ್ಷಿಗಳು ಮಹಾತ್ಮಗಾಂಧೀಜಿ ಅವರು ಮುಂತಾದವರು ಹೆಮ್ಮೆಯಿಂದ ಹೇಳಬಹುದಾದ ಶ್ರೇಷ್ಠ ಭಕ್ತರು ಇಂದಿಗೂ ನಮ್ಮಲ್ಲಿ ಭಕ್ತಿ ಮಾರ್ಗದ ಸಾಧನೆಯಲ್ಲಿ ತೊಡಗಿಸಿಕೊಂಡವರನ್ನು ಕಾಣಬಹುದು.

ಹೀಗೆ ಸುಗುಣ ಹಾಗೂ ಸಾಕಾರ ಬ್ರಹ್ಮತತ್ವವನ್ನು ಒಪ್ಪಿಕೊಂಡು ಮುಂದುವರಿದ ಹಾಗೂ ಸಿದ್ಧಿಯ ಹಂತವನ್ನು ಮುಟ್ಟುವ ಹರಿದಾಸರ ಭಕ್ತಿಯ ಸಾಹಿತ್ಯವನ್ನು ಕಾಣಬಹುದು. ಮುಕ್ತಿ ಬಯಸುವವನಿಗೆ ಭಕ್ತಿ ಬೇಕೆಂಬುದೇ ಹರಿದಾಸರೆಲ್ಲರ ಮತ. ಶ್ರೀಕೃಷ್ಣನ ಪಾದಸೇವೆ ಮುಕ್ತಿಕನ್ಯಾ ಸೇರಿಪುದು ಎಂದವರು. ವ್ಯಾಸರಾಜರಾದರೆ ಸೃಷ್ಟೀಶ ಸಿರಿ ವಿಜಯ ವಿಟ್ಟಲನ ಪದ ಪದ್ಮಾ ಮುಟ್ಟದ ಭಜಿಸಿ ಮುಕ್ತಿ ಪಡೆಯುವವರು ಎಂದವರು ವಿಜಯದಾಸರು.

ಹೀಗೆ ಹರಿನಾಮ ಮಹಿಮೆ ಗುರು ಮೂಲಕ ಮುಕ್ತಿ ಸಾಧ್ಯ ಎಂಬ ತತ್ವಗಳು ಸಾಮಾನ್ಯವಾಗಿ ಎಲ್ಲಾ ಹರಿದಾಸರ ಕೃತಿಗಳಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಈ ಎಲ್ಲಾ ತತ್ವಗಳನ್ನು ನಂಬಿ ಇವುಗಳ ಆಧಾರದ ಮೇಲೆ ಹರಿದಾಸರು ಭಕ್ತಿ ಸಾಧನೆಗೆ ತೊಡಗಿದ್ದಾರೆ. ಹರಿದಾಸರು ಹಂಗಿಗಿಂತ ಹರಿ ನಾಮವೇ ಮಿಗಿಲೆಂಬ ಸಿದ್ಧಾಂತಕ್ಕೆ ಬಂದಿದ್ದಾರೆ.

**ನೀನ್ಯಾಕೋ ನಿನ್ನ ಹಂಗ್ಯಾಕೋ**
**ನಿನ್ನ ನಾಮದ ಬಲವೊಂದಿದ್ದರೆ ಸಾಕೋ**

ಎಂದಿದ್ದಾರೆ.

ನಾಮ ಸಂಕೀರ್ತನೆ ಹರಿಭಕ್ತರ ಜೀವನದ ಉಸಿರು. ಹರಿದಾಸರು ಅನುದಿನವೂ ಹರಿನಾಮವನ್ನು ಭಜಿಸುತ್ತಿರುತ್ತಾರೆ.

ಹರಿದಾಸರು ಈ ನವವಿಧ ಭಕ್ತಿ ಮಾರ್ಗದ ಮೂಲಕ ತಮ್ಮ ಭಕ್ತಿಯನ್ನು ಅಭಿವ್ಯಕ್ತಿಸಿದ್ದಾರೆ ಸಂಬಂಧಿಸಿದ ವಿಷಯಗಳನ್ನು ಅವನ ಅನಂತ ಗುಣಗಳನ್ನು ಅವನ ಚೆಲುವಿನ ವರ್ಣನೆಗಳನ್ನು ಶ್ರದ್ಧೆಯಿಂದ ಕೇಳುವುದು ಶ್ರವಣಭಕ್ತಿ. ಭಗವಂತನಿಗೆ ಸಂಬಂಧಿಸಿದ ಯಾವುದೇ ವಿಷಯವಾಗಲಿ ಅದನ್ನು ಮನಸಿಟ್ಟು ಕೇಳುವುದೇ ಶ್ರವಣ ಭಕ್ತಿ. ಹರಿದಾಸ ಎಲ್ಲರಿಗೂ ಶ್ರವಣ ಭಕ್ತಿಯ ಮಹಿಮೆಯ ಅರಿವಿದೆ. ಆದ್ದರಿಂದಲೇ ತಮ್ಮ ಕೀರ್ತನೆಗಳಲ್ಲಿ ಈ ರೀತಿ ಪ್ರಸ್ತಾಪ ಮಾಡಿದ್ದಾರೆ ಶ್ರೀಪಾದರಾಯರು ತಮ್ಮ ಕೀರ್ತನೆಗಳಲ್ಲಿ ಭಕ್ತಿಯ ಹಿರಿಮೆಯನ್ನು ಹೀಗೆ ಹೇಳಿದ್ದಾರೆ.

**ಭೂಷಣಕ್ಕೆ ಭೂಷಣ ಇದು ಭೂಷಣ**
**ಶೇಷಗಿರಿವಾಸ ಶ್ರೀವೆಂಕಟೇಶ**

ಎಂಬ ಕೀರ್ತನೆಯಲ್ಲಿ ಕಿವಿಗೆ ಭೂಷಣ ವಿಷ್ಣುಕಥೆ ಎಂದು ಸ್ಪಷ್ಟಪಡಿಸುವ ಮೂಲಕ ತೋರಿಸಿ ಕೊಟ್ಟಿದ್ದಾರೆ.

ವ್ಯಾಸರಾಯರು ಈ ರೀತಿ ಹೇಳಿದ್ದಾರೆ -**"ಸಂತಸ ಸವಿ ಕೃಷ್ಣ ಚರಿತೆಯ ಕೇಳದವನೇ ಜಡಮತಿ ಕಿವುಡನೊ ಎಂದೆಂದಿಗೂ"** ಎಂಬುದು ಅವರ ಭಾವನೆ. ಹರಿನಾಮವನ್ನು ಕೇಳದವ ಕಿವಿಯಿದ್ದೂ ಕಿವುಡನೆಂಬ ಅಭಿಪ್ರಾಯ ಅವರದು.

ವಾದಿರಾಜರು **"ಅನುದಿನವು ಶ್ರವಣ ಮೆನನಾದಿ ಸಾಧನ ಮಾಡೋ"** ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಾರೆ.ಪುರಂದರ ದಾಸರಂತೂ ನವವಿಧ ಭಕ್ತಿ ಸುಳಾದಿಯನ್ನೇ ರಚಿಸಿದ್ದಾರೆ.

ವಿಜಯದಾಸರು ಹಿತಾಹಿತವನ್ನು ಹೇಳಿ ಎಚ್ಚರಿಸುತ್ತ

**ಲೋಕವಾರ್ತೆಯ ನಿನ್ನ ಕಿವಿಗೆ ಕೇಳಿಸಬೇಡ**
**ಶ್ರೀಕಾಂತ ಚರಿತೆಯನ್ನು ಕೇಳದರಬೇಡ**

ಎಂದು ಅದರ ಅವಶ್ಯಕತೆ ಮನದಟ್ಟಾಗುವಂತೆ ನುಡಿದಿದ್ದಾರೆ. ಪ್ರಸನ್ನ ವೆಂಕಟದಾಸರು ಶ್ರವಣ ಭಕ್ತಿಯನ್ನು ಪ್ರತಿಪಾದಿಸುತ್ತಾ

**ಹರಿಕಥಾಶ್ರವಣ ಸಾಧನವೇ ಮುಕುತಿ ಇದಕೆ**
**ಸರಿ ಧರ್ಮ ವಿಲ್ಲೆಂದು ಪೇಳ್ವವು ಶ್ರುತಿತತಿ**

ಎಂದು ಫಲ ಸಮೇತವಾಗಿ ಶ್ರವಣ ಭಕ್ತಿಯ ಹೆಚ್ಚಳವನ್ನು ಸಾರಿದ್ದಾರೆ.



ಭಗವಂತನ ಅನಂತ ಗುಣಗಳನ್ನು ಕೇಳುವುದು ಶ್ರವಣ ಭಕ್ತಿಯಾದರೆ ಅವನು ಹೇಳುವುದು, ಕೀರ್ತಿಸುವುದು, ಸ್ತುತಿಸುವುದು ಕೀರ್ತನೆ ಭಕ್ತಿ ಕರಣಗಳಿಂದಲೂ ಪೂರ್ಣ ಮನಸ್ಸಿನಿಂದಲೂ ಹರಿಕೀರ್ತನೆ ಮಾಡಬೇಕು.

ಶ್ರೀ ಪಾದರಾಜರು ತಮ್ಮ ಒಂದು ಉಗಾಭೋಗದಲ್ಲಿ

**ಧ್ಯಾನವು ಕೃತಯುಗದಲ್ಲಿ ಯಜನ ಯಜ್ಞವು**
**ತ್ರೇತಾಯುಗದಲಿ ದಾನವಾಂತಕನ ದೇವತಾರ್ಚನೆಯು**
**ದ್ವಾಪರಯುಗದಲ್ಲಿ ಕಲಿಯುಗದಿ ಗಾನದಿ**
**ಕೇಶವಾ ಎಂದರೆ ಕೈಗೂಡುವನು ರಂಗವಿಠಲ**

ಎಂದು ಕೇಶವನನ್ನು ಒಲಿಸಿಕೊಳ್ಳುವ ಪ್ರೀತಿಯನ್ನು ಹೇಳಿದ್ದಾರೆ.

ಈ ಅಚಲ ನಂಬಿಕೆಯನ್ನು ವ್ಯಕ್ತಪಡಿಸಿ ದೃಢಮನಸ್ಸಿನಿಂದ ಹೊರಟ ಹರಿದಾಸರು ಸಂಗೀತ ಪ್ರಪಂಚಕ್ಕೆ,ಸಾಹಿತ್ಯ ಪ್ರಪಂಚಕ್ಕೆ ಅಮೂಲ್ಯವಾದ ಕೀರ್ತನೆ ಎಂಬ ಪ್ರಾಕಾರದ ಕಾಣಿಕೆಯಿತ್ತು ಅದರ ಬೆಳವಣಿಗೆಗೆ ಕಾರಣರಾಗಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಹರಿದಾಸರು ಕೀರ್ತನ ಭಕ್ತಿಯ ಅಗತ್ಯವನ್ನು ಹೇಳಿ, ಹರಿಯ ಗುಣಗಳನ್ನು ಕೀರ್ತಿಸಿ ಕೃತಾರ್ಥರಾಗಬೇಕೆಂದು ಕೇಳುತ್ತಾರೆ.

**ಕೀರ್ತಿಸಿ ಜನರೆಲ್ಲ ಹರಿಯ ಗುಣ**
**ಕೀರ್ತಿಸಿ ಜನರು ಕೃತಾರ್ಥರಾಗಿರೋ**

ಎಂದ ಹೇಳಿದ ಶ್ರೀಪಾದರಾಜರು ಎಲುಬಿಲ್ಲದ ನಾಲಿಗೆ ಹೇಗೆ ಬೇಕಾದರೂ ಹೊರಳಬಲ್ಲದು ಆದರೆ ಅದಕ್ಕೆ ಭೂಷಣವಾದದ್ದು

ಹರಿಯನಾಮವೊಂದೆ ಎಂಬ ತಮ್ಮ ಅಭಿಪ್ರಾಯವನ್ನು ನಾಲಿಗೆ ಭೂಷಣ ನಾರಾಯಣನ ನಾಮ ಎಂಬ ಮಾತುಗಳಲ್ಲಿ ಚಿತ್ರಿಸಿದ್ದಾರೆ.

ಶ್ರವಣ ಕೀರ್ತನೆಗಳಿಂದ ಸಂಗ್ರಹಿಸಿದ ಭಗವನ್ನಾಮ ರೂಪ ಗುಣ ಗಳನ್ನು ಸ್ಮರಿಸುವುದು ಸ್ಮರಣ ಭಕ್ತಿ. ಈ ಸ್ಮರಣ ಭಕ್ತಿಯಲ್ಲಿ ನಾಮಸ್ಮರಣೆಗೆ ವಿಶೇಷ ಸ್ಥಾನವಿದೆ.

**ವಾದಿರಾಜರು ಹರಿನಾಮಮೃತದ ಸ್ಮರಣೆಯನ್ನು ಕುರಿತು**
**ಪಾವನ ಮಾಡುವುದು ನಾಮಾಮೃತ ರಸ**
**ಪಾವನ ಮಾಡುವುದು**

ಎನ್ನುತ್ತಾರೆ.

ನಿರ್ಮಲ ಮನಸ್ಸಿನಿಂದ ತ್ರಿಕರಣಪೂರ್ವಕವಾಗಿ ಶ್ರೀಹರಿಯ ಪಾದಗಳನ್ನು ಸದ್ಗುರುಗಳ ಪಾದಗಳನ್ನು ಸೇವಿಸುವುದು ಪಾದಸೇವನ ಭಕ್ತಿ. ಶ್ರೀವಾದಿರಾಜರು ಶ್ರೀಹರಿಯನ್ನು ಕುರಿತು,

**ಬಿಡೆನು ಬಿಡೆನು ನಿನ್ನ ಚರಣ ಕಮಲವ , ಎನ್ನ**
**ಹೃದಯ ಮಧ್ಯದೊಳಿಟ್ಟು ಭಜಿಸುವೆ ಅನುದಿನ**

ಎಂದು ತಮ್ಮ ದಿವ್ಯ ಭಕ್ತಿಯ ಮೂಲಕ ಅವನ ಪಾದಗಳನ್ನು ಕಟ್ಟಿ ತಮ್ಮ ಹೃದಯ ಮಧ್ಯದಲ್ಲಿರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ಪ್ರಸನ್ನ ವೆಂಕಟದಾಸರು ತಮ್ಮ ಪಾದ ಸೇವನ ಭಕ್ತಿಯನ್ನು ಐದು ನುಡಿಗಳುಳ್ಳ ಕೀರ್ತನೆಯನ್ನು ಹೇಳಿದ್ದಾರೆ.

**ಶ್ರೀರಮಣನ ಪಾದ ಸೇವನೆ ಮಾಡಿ ಬುಧರು**
**ಮುಕುತರಿಗೆ ವ್ಯಕ್ತಪಾದ**
**ಭಕುತರಿಗೆ ಪೊಳೆವ ಪಾದ**
**ಶ್ರೀಕರ ಪ್ರಸನ್ವೆಂಕಟ ವಲ್ಲಭ**
**ಸುಖಮುನೀಶಗೋಷನಾಗಿಪ್ಪ**
**ಎಂದಿದ್ದಾರೆ ವೆಂಕಟದಾಸರು**

ಭಕ್ತಿಯ ವಿವಿಧತೆಯನ್ನು ಸಾಧಿಸಿದಂತಹ ಭಕ್ತರ ಸಾಹಿತ್ಯವನ್ನು ಸವಿಯುವ, ರಸಾಸ್ವಾದನೆ ಮಾಡುವ ದೃಷ್ಟಿಯಿಂದ ಆ ಭಕ್ತಿ ಸಾಹಿತ್ಯವನ್ನು ವಿವಿಧ ಭಕ್ತಿ ಭಾವಗಳಿಗನುಗುಣವಾಗಿ ಮಾಡಬಹುದು.

ಹೀಗೆ ಇಡೀ ಭಕ್ತಿ ವಾಕ್ಯವನ್ನೇ ನೋಡುವ ಹೊಸನೋಟಬೇಕು. ಆಗ ಅದರ ಮಹತ್ವ ಇಂದಿನ ಜನಾಂಗಕ್ಕೆ ಅರಿವಾಗುತ್ತದೆ. ಆ ದೃಷ್ಟಿ ಯನ್ನು ತಂದುಕೊಳ್ಳುವುದು ಬಿಡುವುದು ಆಯಾ ವ್ಯಕ್ತಿಯ ತಂತ್ರ ಬುದ್ಧಿ ವಂತಿಕೆಗೆ ಸೇರಿದ್ದು.

## ತಿರುಮಲ ತಿರುಪತಿ ದೇವಸ್ಥಾನಗಳು

# ಭಕ್ತರಿಗೆ ವಿಜ್ಞಪ್ತಿ

**ಇತ್ತೀಚೆಗೆ ತಿರುಮಲೆಗೆ ಕಾಲ್ನಡಿಗೆಯಲ್ಲಿ ಬರುವ ಭಕ್ತರಲ್ಲಿ ಹೃದಯಕ್ಕೆ ಸಂಬಂಧಿಸಿದ ಅನಾರೋಗ್ಯ ವ್ಯಕ್ತಿಗಳಿಗೆ ಸೂಚನೆ ಗಳು. ಈ ಕಾರಣಕ್ಕಾಗಿ ತಿ.ತಿ.ದೇ., ಭಕ್ತರಿಗೆ ಹಲವಾರು ಸೂಚನೆಗಳನ್ನು ನೀಡುತ್ತಿದೆ. ಭಕ್ತರ ಆರೋಗ್ಯ ಮತ್ತು ಯೋಗ ಕ್ಷೇಮಕ್ಕಾಗಿ ಈ ಸೂಚನೆಗಳನ್ನು ಪಾಲಿಸಬೇಕೆಂದು ವಿನಂತಿಸ ಲಾಗಿದೆ.**

**1. 60 ವರ್ಷ ವಯಸ್ಸಿನವರು ಮತ್ತು ಮಧುಮೇಹ, ಅಧಿಕ ರಕ್ತದೊತ್ತಡ, ಅಸ್ತಮಾ, ಫಿಟ್ಸ್ ಮತ್ತು ಸಂಧಿ ವಾತದಂತಹ ಕಾಯಿಲೆ ಇರುವವರು ತಿರುಮಲೆ ಬೆಟ್ಟವನ್ನು ಹತ್ತಬಾರದು.**

**2. ಸ್ಥೂಲಕಾಯ ಮತ್ತ ಕಾರ್ಡಿಯಾಕ್ ಸ್ಟಂಟ್ ಪ್ರಕ್ರಿಯೆಗೆ ಒಳಗಾದವರು ತಿರುಮಲೆ ಬೆಟ್ಟವನ್ನು ಹತ್ತ ಬಾರದು.**

**3. ತಿರುಮಲೆ ಬೆಟ್ಟವನ್ನು ಹತ್ತುವ ಸಮಯದಲ್ಲಿ ಅಧಿಕ ಒತ್ತಡ ಮತ್ತು ಎತ್ತರದಲ್ಲಿ ಕಡಿಮೆ ಆಮ್ಲಜನಕದ ಸಾಂದ್ರತೆಯಿಂದ ಹೃದಯದ ತೊಂದರೆಗಳು ಮತ್ತು ಅಸ್ತಮಾ ಹೆಚ್ಚಾಗಬಹುದು.**

**4. ದೀರ್ಘಕಾಲದ ಕಾಯಿಲೆ ಇರುವವರು ತಮ್ಮ ಔಷಧಿಗಳನ್ನು ತರಬೇಕು ಇದರಿಂದ ನಿಮ್ಮ ಆರೋಗ್ಯ ವನ್ನು ಕಾಪಾಡಿಕೊಳ್ಳಬಹುದು.**

**5. ತಿರುಮಲೆ ಬೆಟ್ಟವನ್ನು ಹತ್ತುವಾಗ ಯಾವುದೇ ರೀತಿಯ ತೊಂದರೆಯಾದರೆ ದಯವಿಟ್ಟು ವೈದ್ಯಕೀಯ ಕೇಂದ್ರಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆದು ಕೊಳ್ಳಿ. ಅಲಿಪಿರಿ ನಡೆದುಹೋಗುವ ಮಾರ್ಗದ 1500 ಮೆಟ್ಟಿಲುಗಳ ಬಳಿ ಗಾಳಿಗೋಪುರ ಮತ್ತು ಭಾಷ್ಯಕಾರರ ಸನ್ನಿಧಿ ಬಳಿ ವೈದ್ಯಕೀಯ ಕೇಂದ್ರಗಳಿವೆ.**

**6. ಯಾವುದೇ ವೈದ್ಯಕೀಯ ಸಹಾಯಕ್ಕಾಗಿ ತಿರುಮಲೆಯಲ್ಲಿರುವ ಅಶ್ವಿನಿ ಆಸ್ಪತ್ರೆ ಮತ್ತು ಇತರ ವೈದ್ಯ ಕೀಯ ಕೇಂದ್ರಗಳಲ್ಲಿ 24/7 ವೈದ್ಯಕೀಯ ಸೌಲಭ್ಯವನ್ನು ಪಡೆಯಬಹುದು.**

**7. ದೀರ್ಘ ಕಾಲದ ಮೂತ್ರಪಿಂಡದ ಕಾಯಿಲೆಯ ರೋಗಿಗಳಿಗೆ ಯಾವುದೇ ತುರ್ತು ಸಂದರ್ಭದಲ್ಲಿ ತಿರುಪತಿ ಯಲ್ಲಿರುವ (SVIMS) ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೌಲಭ್ಯಲಭ್ಯವಿದೆ.**

ಓಂ ನಮೋ ವೆಂಕಟೇಶಾಯನಮಃ
ತಿರುಮಲೆ ತಿರುಪತಿ ದೇವಸ್ಥಾನಗಳು,ತಿರುಪತಿ

# ಆಲಯ ದರ್ಶನ – ಪ್ಯಾಕೆಜ್ ಟೂರ್

ಆಂಧ್ರಪ್ರದೇಶ ಪ್ರವಾಸಾಭಿವೃದ್ಧಿ ಸಂಸ್ಥೆ, ಆಂಧ್ರಪ್ರದೇಶ ಸರ್ಕಾರ

## 1. ತಿರುಪತಿ ಸ್ಥಳೀಯ ಆಲಯ ಸಂದರ್ಶನ : (ಪ್ರತಿದಿನ)

(ಸಮಯ : ಬೆ: 6.00 ಗಂಟೆಯಿಂದ ಮ: 2.00 ಗಂಟೆಯವರೆಗೆ)

| ಶುಲ್ಕ | ಬಸ್ಸು ಆರಂಭವಾಗುವ ಸ್ಥಳ |
|---|---|
| ನಾನ್ ಎ.ಸಿ.ರೂ. 200/- | ಶ್ರೀನಿವಾಸಂ ಕಾಂಪ್ಲೆಕ್ಸ್ ಹಾಗೂ ವಿಷ್ಣುನಿವಾಸಂ, ತಿರುಪತಿ |

### ಸಂದರ್ಶಿಸುವ ಆಲಯಗಳು

1. ಶ್ರೀ ಪದ್ಮಾವತೀ ಅಮ್ಮನವರ ಆಲಯ - ತಿರುಚಾನೂರು
2. ಶ್ರೀ ಅಗಸ್ತೇಶ್ವರ ಸ್ವಾಮಿಯವರ ಆಲಯ - ತೊಂಡವಾಡ
3. ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಆಲಯ - ಶ್ರೀನಿವಾಸಮಂಗಾಪುರ
4. ಶ್ರೀ ವಕುಲಮಾತೆ ಆಲಯ - ಪಾತಕಾಲ್ವ, ತಿರುಪತಿ
5. ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯ - ತಿರುಪತಿ
6. ಶ್ರೀ ಗೋವಿಂದರಾಜಸ್ವಾಮಿಯವರ ಆಲಯ - ತಿರುಪತಿ, ಇಲ್ಲಿ ಭಕ್ತರನ್ನು ಇಳಿಸಲಾಗುತ್ತದೆ.

ಉತ್ತಮ ಪ್ರಯಾಣದ ಜೊತೆಗೆ ತರಬೇತಿ ಪಡೆದ ಮಾರ್ಗದರ್ಶಿಯ ಸೌಲಭ್ಯ ಇದೆ. ಸುಮಾರು 50 ಕಿ.ಮೀ. ಪ್ರಯಾಣ

## 2. ತಿರುಪತಿ ಸಮೀಪದಲ್ಲಿರುವ ಆಲಯಗಳ ಸಂದರ್ಶನ (ಪ್ರತಿದಿನ)

(ಸಮಯ : ಮೊದಲ ಪ್ರಯಾಣ ಬೆ : 8.30 ಗಂಟೆಗೆ- ಎರಡನೇ ಪ್ರಯಾಣ ಬೆ : 9.30 ಗಂಟೆಗೆ)

| ಶುಲ್ಕ | ಬಸ್ಸು ಆರಂಭವಾಗುವ ಸ್ಥಳ |
|---|---|
| ನಾನ್ ಎ.ಸಿ.ರೂ. 500/- | ಶ್ರೀನಿವಾಸಂ ಕಾಂಪ್ಲೆಕ್ಸ್ ಹಾಗೂ ವಿಷ್ಣುನಿವಾಸಂ, ತಿರುಪತಿ |

### ಸಂದರ್ಶಿಸಿಸುವ ಆಲಯಗಳು

1. ಶ್ರೀ ವೇಣುಗೋಪಾಲ ಸ್ವಾಮಿಯವರ ಆಲಯ - ಕಾರ್ವೇಟಿ ನಗರಂ
2. ಶ್ರೀ ವೇದನಾರಾಯಣ ಸ್ವಾಮಿಯವರ ಆಲಯ - ನಾಗುಲಾಪುರಂ
3. ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಆಲಯ - ನಾರಾಯಣವನಂ
4. ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಆಲಯ - ಅಪ್ಪಲಾಯಗುಂಟ
5. ಶ್ರೀ ಕರಿಯ ಮಾಣಿಕ್ಯ ಸ್ವಾಮಿಯವರ ಆಲಯ - ನಗರಿ
6. ಶ್ರೀ ಅನ್ನಪೂರ್ಣಾ ಸಮೇತ ಕಾಶೀವಿಶ್ವೇಶ್ವರ ಸ್ವಾಮಿಯವರ ಆಲಯ - ಬುಗ್ಗ
7. ಶ್ರೀ ಪಲ್ಲಿಕೊಂಡೇಶ್ವರ ಸ್ವಾಮಿಯವರ ಆಲಯ - ಸುರುಟುಪಲ್ಲಿ

ಉತ್ತಮ ಪ್ರಯಾಣದ ಜೊತೆಗೆ ತರಬೇತಿ ಪಡೆದ ಮಾರ್ಗದರ್ಶಿಯ ಸೌಲಭ್ಯ ಇದೆ. ಸುಮಾರು 250 ಕಿ.ಮೀ. ಪ್ರಯಾಣ

**1.ಕಾಣಿಪಾಕಂ - ಗೋಲ್ಡನ್ ಟೆಂಪಲ್ ಪ್ಯಾಕೆಜ್ ಟೂರ್ ಎ.ಸಿ. - ರೂ. 950/-**

(ಶ್ರೀನಿವಾಸಮಂಗಾಪುರಂ, ಕಾಣಿಪಾಕಂ,ಗೋಲ್ಡನ್‌ಟೆಂಪಲ್)

**2.ಕಾಣಿಪಾಕಂ - ತಿರುಪತಿ ಲೋಕಲ್ ಪ್ಯಾಕೆಜ್ ಟೂರ್ ಎ.ಸಿ. - ರೂ. 650/-**

(ಶ್ರೀ ಪದ್ಮಾವತಿ ಅಮ್ಮನವರ ದೇವಸ್ಥಾನ - ತಿರುಚಾನೂರು, ಶ್ರೀನಿವಾಸಮಂಗಾಪುರಂ,ಕಪಿಲತೀರ್ಥ, ಇಸ್ಕಾನ್ ಟೆಂಪಲ್, ಕಾಣಿಪಾಕಂ)

**3.ಶ್ರೀಕಾಳಹಸ್ತಿ - ತಿರುಪತಿ ಲೋಕಲ್ ಪ್ಯಾಕೆಜ್ ಟೂರ್ ಎ.ಸಿ. - ರೂ. 650/-**

(ಶ್ರೀ ಪದ್ಮಾವತಿ ಅಮ್ಮನವರ ದೇವಸ್ಥಾನ-ತಿರುಚಾನೂರು, ಶ್ರೀನಿವಾಸಮಂಗಾಪುರಂ, ಕಪಿಲತೀರ್ಥ, ಇಸ್ಕಾನ್ ಟೆಂಪಲ್, ಕಾಣಿಪಾಕಂ)

| ಟಿಕೆಟ್ಟು ಲಭ್ಯವಾಗುವ ಪ್ರದೇಶಗಳು ಮತ್ತು ಇತರ ವಿವರಗಳಿಗಾಗಿ ಸಂಪರ್ಕಿಸಿ :- | ಎ.ಪಿ. ಟೂರಿಜಮ್ ಇನ್‌ಫರ್‌ಮೇಷನ್ ಮತ್ತು ರಿಜರ್ವೇಷನ್ ಕಾರ್ಯಾಲಯ, ಶ್ರೀನಿವಾಸಂ ಕಾಂಪ್ಲೆಕ್ಸ್ ಮತ್ತು ವಿಷ್ಣುನಿವಾಸಂ ತಿರುಪತಿ. ದೂರವಾಣಿ - 0877 - 2289123, 9848007033 |
|---|---|



# ಆಳ್ವಾರುಗಳು ಕಂಡ ತಿರುವೇಂಗಡ

– ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

"ಮಹೋನ್ನತವಾದ ನೀಲಮೇಘನಿಭ ಶರೀರಿಯಾದ ಕೃಷ್ಣನು ನನ್ನ ಹೃದಯವನ್ನು ಪ್ರವೇಶಿಸಿ ದಾಸನಾದ ನನ್ನ ಹೃದಯವನ್ನೇ ಆಲಯವನ್ನಾಗಿ ಮಾಡಿಕೊಂಡು ಬಿಟ್ಟಿದ್ದಾನೆ. ಅದನ್ನವನು ತ್ಯಜಿಸುವುದೇ ಇಲ್ಲ. ಇನ್ನು ಶಿಲಾಮಯವಾದ ವೇಂಗಡವನ್ನೋ, ಜಲಮಯವಾದ ಕ್ಷೀರಸಾಗರವನ್ನೋ, ಜ್ಯೋತಿರ್ಮಯವಾದ ವೈಕುಂಠವನ್ನೋ, ಇಲ್ಲವೇ ಸರ್ವೋತ್ಕೃಷ್ಟವಾದ ಪರಮಪದವನ್ನೋ ತೃಣಪ್ರಾಯವನ್ನಾಗಿ ಪರಿಗಣಿಸಿ ಬಿಟ್ಟರೆ ಹೇಗೆ? ಅಯ್ಯೋ ಪಾಪ!"

ಪಿಳ್ಳೈಲೋಕಾಚಾರ್ಯರು ಒಂದೆಡೆ ಸ್ವಾರಸ್ಯವಾಗಿ ವಿವರಿಸಿದ್ದಾರೆ. ಭಕ್ತರ ಹೃದಯವನ್ನು ಸಮಯ ಸಾಧಿಸಿ ಪ್ರವೇಶಿಸುವುದಕ್ಕಾಗಿಯೇ ಸ್ವಾಮಿಯು ದಿವ್ಯ ಕ್ಷೇತ್ರಗಳಲ್ಲಿ ವಾಸಿಸುತ್ತಿರುವನಂತೆ! ಆಚಾರ್ಯರಿಗೆ ಈ ಭಾವ ಪ್ರೇರೇಪಣೆಯಾಗಲು ಆಳ್ವಾರ್ ಅವರ ಈ ಪಾಶುರವೇ ವಸ್ತುವಾಗಿರಬೇಕೆಂದು ಗ್ರಂಥಕರ್ತರು ಅಭಿಪ್ರಾಯ ಪಡುತ್ತಾರೆ. ಆದರೆ ಇದರಲ್ಲಿ ಒಂದು ಜಿಜ್ಞಾಸೆ ಏರ್ಪಡುತ್ತದೆಯಲ್ಲವೆ? ಈ ಪಾಶುರದ ಪ್ರಕಾರ ಭಕ್ತನ ಹೃದಯವೇ ಎಲ್ಲ ಕ್ಷೇತ್ರಾದಿಗಳಿಗಿಂತ ಅತಿ ಪವಿತ್ರವಾದ ಸ್ಥಾನ ಮತ್ತು ಹಿರಿದು! ಅದರ ಮುಂದೆ ವೇಂಗಡ, ಕ್ಷೀರಾಬ್ಧಿ, ಪರಮಪದ ಮುಂತಾದುವು ಯಾರ ಲೆಕ್ಕಕ್ಕೂ ಇಲ್ಲ ಎಂದಾಗ ಇದು ವೇಂಗಡದ ಮಂಗಳಾಶಾಸನ ಪರ ಪಾಶುರವೆಂಬುದಾಗಿ ಹೇಗೆ ಪರಿಗಣನೆ ಮಾಡಬೇಕು? ಆದರೆ ಪಿಳ್ಳೈಲೋಕಾಚಾರ್ಯ ವ್ಯಾಖ್ಯಾನವನ್ನು ಮುಂದಿಟ್ಟುಕೊಂಡು ಅದರಂತೆ ವ್ಯಾಖ್ಯಾನ ಮನನ ಮಾಡಿದಾಗ ಭಕ್ತನ ಮನಸ್ಸಿನಲ್ಲಿ ದೇವನು ಒಳಹೋಗಲು ಪ್ರೇರಕವಾಗುವಂತಹ ಜಾಗಗಳೆಂದರೆ ಪರಮಾತ್ಮನ ನೆಲೆಗಳಾದ ತಿರುಮಲೆಯಂತಹ ದಿವ್ಯಕ್ಷೇತ್ರಗಳೇ !ಇದರಿಂದ ಈ ದಿವ್ಯಕ್ಷೇತ್ರಗಳ ಮಹಿಮೆಗೆ ಮೆರುಗಿಟ್ಟಂತಾಗಲಿಲ್ಲವೆ? ಅದರಲ್ಲೂ 'ಕಲ್ಲುಂ'ಅನ್ನು ಮೊದಲಿಗೆ ಹೇಳಿ ನಂತರ "ಕನೆಗಡಲುಂ" ಎನ್ನುವುದನ್ನು ಪ್ರಯೋಗಿಸಿರುವುದರಿಂದ ಕ್ಷೀರಸಾಗರ, ಪರಮ ಪದಗಳಿಗಿಂತ ಉನ್ನತ ಸ್ಥಾನ ತಿರುವೇಂಗಡಕ್ಕೆ ಆಳ್ವಾರ್ ಕಲ್ಪಿಸಿರುವುದರಿಂದ ಈ ಪಾಶುರವನ್ನು ತಿರುಮಲೆಯ ಮಂಗಳಾಶಾಸನ ಪದ್ಯವೆಂದು ಅರ್ಥ ಮಾಡಲು ಅಡ್ಡಿಯಿಲ್ಲ.

ನಮ್ಮಾಳ್ವಾರ್ ಅವರ ಮತ್ತೊಂದು ಪ್ರಬಂಧ ತಿರುವಾಯ್ಮೊಳಿ ಇದನ್ನು ಎಲ್ಲಾ ವಿಶಿಷ್ಟಾದ್ವೈತ ಆಚಾರ್ಯರೂ ವಿಶಿಷ್ಟವಾದ ದಿವ್ಯಪ್ರಬಂಧವೆಂದೇ ಕೊಂಡಾಡಿದ್ದಾರೆ. ಇದನ್ನು ಸಾಮವೇದಕ್ಕೆ ಸಮ ಮಾಡಿದ್ದರೂ ಕೂಡ ಇದನ್ನು 'ದ್ರಾವಿಡ ವೇದ ಸಾಗರಂ' ತಮಿಳ್ ಮರೈಗಳ್ ಆಯಿರಮುಂ' ಎಂದೇ

ಕರೆದಿದ್ದಾರೆ, ಎಂದರೆ ತಮಿಳು ವೇದವೆಂದು ಅರ್ಥ. ಆದ್ದರಿಂದ ಇದು ವೇದ ಸಾಹಿತ್ಯಕ್ಕೆ ಸರಿಸಮನಾದ ದಿವ್ಯ ಪ್ರಬಂಧವೆಂದು ಪರಿಗಣಿಸಲ್ಪಟ್ಟಿದೆ. ಇದರ ಸೊಬಗಿಗೆ,ಸಾಹಿತ್ಯ ಸಂಪತ್ತಿಗೆ ಬೆರಗಾದ ಆಚಾರ್ಯನಾಥಮುನಿಗಳೂ, ಯಾಮುನಾಚಾರ್ಯರೂ ಇದನ್ನು ತಮ್ಮ ಸಂಶೋಧನೆಯ ಮೂಲಕ ಸಂಪೂರ್ಣವಾಗಿ ಸಂಪಾದನೆ ನಡೆಸಿ, ಇದರ ದೆಸೆಯಿಂದ ಮತ್ತೂ ಉತ್ತೇಜಿತರಾಗಿ ಇಡೀ ನಾಲಾಯಿರ ದಿವ್ಯಪ್ರಬಂಧಗಳ ಸಂಪಾದನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದರು, ಮತ್ತು ಈ ದಿವ್ಯ ಪ್ರಬಂಧಗಳ ಪ್ರಚಾರ ಕಾರ್ಯದಲ್ಲೂ ಜಯಶಾಲಿಗಳಾದರು. ಇವರು ಈ ತಿರುವಾಯ್ಮೊಳಿಯಿಂದ ಎಷ್ಟೊಂದು ಪ್ರಭಾವಿತರಾಗಿದ್ದರೆಂದರೆ ಇದಕ್ಕೆ ವಿಸ್ತಾರವಾದ ಭಾಷ್ಯವನ್ನು ಬರೆಯಬೇಕೆಂಬುದಾಗಿ ಪ್ರಯತ್ನಿಸಿದರು. ಆದರೆ ಇವರ ಕಾಲಕ್ಕೆ ಅದು ಸಾಧ್ಯವಾಗದೇ ಹೋಯಿತು. ಆಚಾರ್ಯ ರಾಮಾನುಜರಿಂದ ಈ ಕಾರ್ಯ ನಡೆಯಬೇಕೆಂದು ಸಲಹೆ ಸೂಚನೆಗಳನ್ನು ಇತ್ತರೂ, ಮತ ಪ್ರಸರಣ ಕಾರ್ಯಬಾಹುಳ್ಯ ಕಾರಣಗಳಿಂದ ಅವರಿಂದ ಈ ಕಾರ್ಯವು ನೆರವೇರದೇ ಹೋಯಿತು.

ಈ ತಿರುವಾಯ್ಮೊಳಿಯನ್ನು ಅಸಾಧಾರಣ ರೀತಿಯಿಂದ ಪೋಷಿಸಿ,ಅದರ ವ್ಯಾಖ್ಯಾನವನ್ನು ಶ್ರೀವೈಷ್ಣವ ಸಿದ್ಧಾಂತ ರೀತ್ಯಾ ಕಾಲಕ್ಷೇಪ ಮಾಡಿ ಶ್ರೀಪಿಳ್ಳಾನ್ ಎಂಬ ತಮ್ಮ ಶಿಷ್ಯರ 'ಆರಾಯಿರಪ್ಪಡಿ' ಎನ್ನುವ ವ್ಯಾಖ್ಯಾನಕ್ಕೆ ಪ್ರೇರಕವಸ್ತುವನ್ನಾಗಿ ಈ ಕಾಲಕ್ಷೇಪವನ್ನು ಮಾಡಿದ್ದರಿಂದಲೇ ರಾಮಾನುಜರ ಶಿಷ್ಯರು ರಾಮಾನುಜರನ್ನು "ಈನ್ರಮುದಲ್ ತಾಯ್ ಶಡಗೋಪನ್ ಮೋಯಿಂಬಾಲ್ ವಳರ್ತ್ತ ಇದತ್ತಾಯಿ ರಾಮಾನುಶನ್" ಎಂದು ಕೀರ್ತಿಸಿದ್ದು. ಎಂದರೆ 'ಈ ತಿರುವಾಯ್ಮೊಳಿಯನ್ನು ಹೆತ್ತ ತಾಯಿ ಶಡಗೋಪರಾದರೆ ಅದಕ್ಕೆ ಮೊಲೆ ಹಾಲನ್ನು ನೀಡಿ ಪ್ರವರ್ಧಮಾನಕ್ಕೆ ಬರುವಂತೆ ಮಾಡಿದ ಯಶಸ್ಸು ರಾಮಾನುಜರದು" ಎಂದು ಅರ್ಥ, ಇಂತಹ ರಾಮಾನುಜರಿಂದ ಮಾತೃಮಮತೆಯ ಸೊಗವನ್ನುಂಡು ಬೆಳೆದ ಶಿಶು ತಿರುವಾಯ್ಮೊಳಿ ಎಂದರೆ ಅದರ ವಿಶೇಷದ ಅರಿವಾಗುತ್ತದೆ.

ರಾಮಾನುಜರು ಕಾಲವಾದ ಮೇಲೆ ತಿರುವಾಯ್ಮೊಳಿಗೆ ಹಲವು ವ್ಯಾಖ್ಯಾನಗಳು ಹುಟ್ಟಿಕೊಂಡವು. ಇವೆಲ್ಲವೂ ಆಚಾರ್ಯ ರಾಮಾನುಜರು ಸ್ಥಾಪಿಸಿ ಶ್ರೀ ವೈಷ್ಣವ ತತ್ವಗಳ ಮೇಲೆಯೇ ಆಧಾರಿತವಾಗಿರುವುದರಿಂದ ಇಂದಿಗೂ 'ಭಗವದ್ವಿಷಯ' ಎಂಬ ಸಂಕೀರ್ಣವಾದ ನಾಮಧೇಯವನ್ನು ಈ ಎಲ್ಲಾ ವ್ಯಾಖ್ಯಾನಗಳೂ ಹೊಂದಿವೆ. ಈ ವ್ಯಾಖ್ಯಾನಗಳು ಯಾವುವೆಂದರೆ - ನಂಜೀಯರ್ ಅವರ ಒನ್ಬದ ನಾಯಿರಪ್ಪಡಿ', ವಾದಿಕೇಸರಿ ಅಳಗಿಯ ಮನವಾಳ ಜೀಯರ್ ಅವರ ಪನ್ನೀರಾಯಿರಪ್ಪಡಿ' ಪೆರಿಯ ವಾಚ್ಚಾನ್ಪಿಳ್ಳೈ ಅವರ 'ಇರಪತ್ತ ನಾಲಾಯಿರಪ್ಪಡಿ' ಮತ್ತು ವಡಕ್ಕುತ್ತಿರು ವೀಧಿಪಿಳ್ಳೈ ಎನ್ನುವವರ ಮುಪ್ಪತ್ತಿ ಆರಾಯಿರಪ್ಪಡಿ' ಈ ಕಡೆಯ ವ್ಯಾಖ್ಯಾನವು ಅದ್ಭುತವಾಗಿಯೂ, ವಿಸ್ತಾರವಾಗಿಯೂ ಇರುವುದರಿಂದ ಇಂತಹ ಗ್ರಂಥಕ್ಕೆ ಈಡು ಜೋಡು ಇಲ್ಲವೆಂಬುದಾಗಿ ವಿದ್ವಾಂಸರಿಂದ ಪರಿಗಣಿಸಲ್ಪಟ್ಟು.'ಈಡು' ಎಂದು ವಿದ್ವಾಂಸರ ಅರುಮೆಗೆ ಪಾತ್ರವಾಯಿತು. ಇದರಿಂದ ತಿರುವಾಯ್ಮೊಳಿಯ ಮಹಿಮೆ ಗರಿಮೆಗಳು ವಿದಿತಗೊಳ್ಳುತ್ತದೆ. ಈ ಮೇರುಕೃತಿಗೆ ಮನವಾಳ ಮಹಾಮುನಿಗಳು ಉಚಿತವಾದ ನಮನವನ್ನು ತಮ್ಮ ಉಪದೇಶರತ್ತಿನ ಮಾಲೆಯಲ್ಲಿ ಸಲ್ಲಿಸಿರುತ್ತಾರೆ.

"ಉಂಡೋ ವೈಗಾಶಿವಿಶಾಖತ್ತಕ್ಕೊಪ್ಪೊರುನಾಳ್
ಉಂಡೋ ಶಡಗೋಪರುಕ್ಕೊ ಪ್ಪೊರುವರ್
ಉಂಡೋತಿರುವಾಯ್ಮೊಳಿಕ್ಕ್ ಒಪ್ಪು-ತೆನ್‌ಕುರುಗೈಕ್ಕ್
ಉಂಡೋ ಒರುಪಾರ್‌ದನಿಲ್ ಒಕ್ಕುಮೂರ್
"ಉಂಟೋ ವೃಷಭದ ವಿಶಾಖೆಯ ನಕ್ಷತ್ರಕೆ ಸಮ
ಉಂಟೋ ಶಡಗೋಪರಿಗೆ ಸಮರೊಬ್ಬರ್ -
ಇನ್ನೊಂಟೋ
ತಿರುವಾಯ್ಮೊಳಿಗೆ ಸಮ ಭೂಲೋಕದಲಿ -
ತೆಂಕುರುಗೂರಿಗೆ
ಒಪ್ಪುವಾ ಊರು ಮತ್ತೊಂದುಂಟೋ"

(ಡಾ. ವಿನೋದಾ ಅವರ ಕನ್ನಡಾನುವಾದ ಮನವಾಳ ಮಹಾಮುನಿಯವರ ಉಪದೇಶ ರತ್ನಮಾಲೆಯಿಂದ)

ಇದು ಮಾತ್ರವಲ್ಲದೆ ತಮಿಳುನಾಡಿನ ಪ್ರಖ್ಯಾತ ಕವಿ ರಾಮಾಯಣದ ಕರ್ತೃ ಕಂಬರ್ ಎನ್ನುವವರು, ಈ ಶಡಗೋಪರ ತಿರುವಾಯ್ಮೊಳಿಯಲ್ಲಿಯ ಶೈಲಿ,ಗಾಂಭೀರ್ಯ, ರಚನಾ ಕೌಶಲ್ಯ, ತತ್ವನಿರೂಪಣೆ, ಮಹತ್ವ ಇವುಗಳಿಂದ ಆಕರ್ಷಿತರಾಗಿ 'ಶಡಗೋಪರಂದಾದಿ' ಎನ್ನುವ ನೂರು ಪಾಶುರಗಳ ದಿವ್ಯಕೃತಿಯಿಂದ ನಮ್ಮಾಳ್ವಾರ್ ಅವರಿಗೆ ಗೌರವ ಸಲ್ಲಿಸಿದ್ದಾರೆ. ಆಚಾರ್ಯ ವೇದಾಂತ ದೇಶಿಕರಂತೂ ತಮ್ಮ 'ಪಾದುಕಾಸಹಸ್ರ' ದಲ್ಲಿ ಪರಮಾತ್ಮನ ದಿವ್ಯ ಪಾದುಕೆಯೇ ಈ ಶಠಾರಿ ಗುರುವರ್ಯರು ಎಂಬುದಾಗಿ ಹೊಗಳಿ ದಣಿದಿದ್ದಾರೆ. ಈ ಪ್ರಬಂಧದ ದಿವ್ಯ ದಸೆಯಿಂದಾಗಿ ನಮ್ಮಾಳ್ವಾರ್ ಅವರು ಇಡೀ ಶ್ರೀವೈಷ್ಣವ ಸಮುದಾಯಕ್ಕೆ "ಆದ್ಯಸ್ಯನಃಕುಲ ಪತೇರ್ವಕುಳಾಭಿರಾಮಂ ಪ್ರಪನ್ನಜನ ಕೂಟಸ್ಥ" ಮುಂತಾದ ಗೌರವಕ್ಕೆ ಭಾಜನರಾದರು.

**- ಮುಂದುವರೆಯುತ್ತದೆ.**

ಕಳೆದ ಸಂಚಿಕೆಯಿಂದ

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ

ಅವನು ಹೋದ ದಿನದ ಹಿಂದೆ, ಸದಾಶಿವ ಬ್ರಹ್ಮ ರಾಜನು ಜಿಯ್ಯರೊಂದಿಗೆ "ತಾವು ಕೈಂಕರ್ಯದ ವೇಳೆಯಲ್ಲಿ ನರವಾಹನರಾಗಿ ಮೆರವಣಿಗೆ ಮಾಡತಕ್ಕದ್ದು" ಎಂಬ ನಿಯಮವನ್ನು ಮಾಡಿದ್ದಾರೆ. ನಂತರ ಒಂದು ದಿನ ಜಿಯ್ಯರು ಶಾಸ್ತ್ರ ತಿಳಿದವರಾಗಿ ತಮಗೆ ನರ ವಾಹನವು ಶಾಸ್ತ್ರ ವಿರುದ್ಧವು ಅಲ್ಲವೆ? ಆದ್ದರಿಂದ ಅದು ಪರಿತ್ಯಾಜ್ಯವು-ಎಂಬ ತಿಳುವಳಿಕೆಯುಳ್ಳವರಾಗಿ ಆಗಿನ ಅರ್ಚಕರು ಜಿಯ್ಯರನ್ನು ಕಂಡು ಪರವಶರಾಗಿ

"ವಾಹನಸ್ಥ ಯತಿ ಶ್ಶೀಘ್ರಂ ಪತತ್ಯೇವ ನ ಸಂಶಯಃ"

(ವಾಹನಸ್ಥನಾದ ಸನ್ಯಾಸಿ ತ್ವರಿತಗತಿಯನ್ನು ಪರಿಗಣಿಸದೆ ಸಂದೇಹವೇ ಇಲ್ಲ)ಎಂದು ಹೇಳಿದ ಭಗವಂತನೇ -

" ಮನ್ನಿಮಿತ್ತಕೃತಂ ಪಾಪಂ ಚಾಪಿ ಧರ್ಮಾಯ ಕಲ್ಪತೇ,
ಮಾಮನಾದೃತ್ಯ ಧರ್ಮೋ-ಪಿ ಪಾಪಂ ನಾಸ್ಯಾನ್ಮತ್ಪ್ರಭಾವತಃ"

(ನನ್ನ ಕುರಿತಾಗಿ ಮಾಡಿದ ಪಾಪವು ಕೂಡ ಧರ್ಮವೇ! ಆಗಿದೆ,ನನ್ನ ಮೇಲೆ ಆದರವಿಲ್ಲದೆ ಮಾಡಿದ್ದು ಧರ್ಮವೇ ಆದರೂ ನನ್ನ ಪ್ರಭಾವದಿಂದ ಅದು ಪಾಪವೇ ಆಗುತ್ತದೆ)

ಎಂದು ನುಡಿದ ವಿಚಾರವು ಭಕ್ತರಿಗೆ ಉಳಿದ ವಿಚಾರಗಳನ್ನು ಸೂಚನೆ ನೀಡಲು ಭಗವತ್ಕೈಂಕರ್ಯ ನಿರ್ವಹಣಾ ಸಮಯದಲ್ಲಿ ವಾಹನಸ್ಥರಾಗಿ ಸ್ವಾಮಿ ಕೈಂಕರ್ಯವನ್ನು ಮಾಡಿತಕ್ಕದ್ದೆಂದು ನಿಯಮಿಸಿದ್ದಾರೆ. ಹಿಂದಿನ ಕಾಲದಲ್ಲಿ ವೇಂಕಟಾದ್ರಿ ನರಸಿಂಹನ ಯಜ್ಞದ ದಿನದಿಂದ ಹಿಡಿದು ಮುಂಬಯಿ ಜಿಯ್ಯರುಗಳ ಕೈಂಕರ್ಯಗಳನ್ನು ಮಾಡುವಾಗಲೂ ವಾಹನಸ್ಥರಾಗಿಯೇ ಇರುವರು.

ತಿರುಪತಿಯಲ್ಲಿ ಆಮುಕ್ತ ಮಾಲ್ಯದಾ (ಗೋದಾದೇವಿ) ತಿರುವಾಡಿ ಪೂರ್ವದ ದಿನದಂದು (ಮಿಥುನ



ಮಾಸ ಪೂರ್ವ ಫಲ್ಗುಣಿ ನಕ್ಷತ್ರೋತ್ಸವದ ದಿನದೆಂದು) **'ಕೊಡಲ್ ವಳ್ಳೈಚ್ಚು'** ಎಂಬ ಸಂಪ್ರದಾಯವನ್ನು ನಿರ್ವಹಿಸುವಾಗ,ವೇದವ್ಯಾಸ ಭಗವಂತನ ಶಿಷ್ಯರೂ ಕಾಲತ್ರಯಧರ್ಮ ದ್ರಾಷ್ಟಾರರಾದ ಸೂತ ಮಹಾಮುನಿಗಳು ಶ್ರೀವರಾಹ ಪುರಾಣದಲ್ಲಿ ಶ್ರೀವೇಂಕಟಾಚಲ ಮಹಾತ್ಮೆಯ ಘಟ್ಟದಲ್ಲಿನ ಅಷ್ಟೋತ್ತರ ಶತನಾಮಾಧ್ಯಯನದಲ್ಲಿ **"ಗೋವಿಂದಾಯ ನಮಸ್ತುಭ್ಯಂ ಶ್ರೀನಿವಾಸಾಯ ತೇ ನಮಃ"** ಎಂದು ಶ್ರೀ ವೇಂಕಟಾಚಲಪತಿಗೆ ಶ್ರೀಗೋವಿಂದರಾಜು ಸ್ವಾಮಿಗೆ ಐಕ್ಯವನ್ನು ತೋರುವಂತೆ ಹೇಳಿರುವುದನ್ನು ಕಟ್ಟಯಂ ಯಾದವರಾಜನು ರಾಜ್ಯ ವಾಳುವಾಗ ಶ್ರೀಭಗವದ್ರಾಮಾನುಜಾಚಾರ್ಯರ ಕಾಲದಲ್ಲಿ ಚಿದಂಬರ ಗೋವಿಂದರಾಜು ಸ್ವಾಮಿಯು ಯಾವುದೋ ಒಂದು ಕಾರಣವಶಾತ್ ಕಾವೇರಿ ತೀರದ ಶ್ರೀಚಿತ್ರಕೂಟವೆಂದು ಪುರಾಣ ಪ್ರಸಿದ್ಧವಾದ ದಿವ್ಯ ಕ್ಷೇತ್ರವನ್ನು ಬಿಟ್ಟು, ತಿರುಮಲೆ ತಪ್ಪಲಿನಲ್ಲಿರುವ ತಿರುಪತಿಯೆಂಬ ದಿವ್ಯ ನಗರಕ್ಕೆ ವಿಜಯವನ್ನು ಮಾಡಿ, ನಿತ್ಯನಿವಾಸನಾಗಲು, ಶ್ರೀವೇಂಕಟೇಶ್ವರನ ಅಪರಾವತಾರವಾಗಿ ಬಹು ಚೇತನ ದೃಷ್ಟಾದೃಷ್ಟ ಸುಖಪ್ರದರಾಗಿ ದೇವತಾರಾಧನೆಯನ್ನು ಕೈಗೊಂಡು ವಿರಮಿಸಿದ ಕಾಲದಲ್ಲಿ ಶ್ರೀಭಾಷ್ಯಕಾರರು ಶ್ರೀಗೋವಿಂದರಾಜಸ್ವಾಮಿ, ಶ್ರೀವೇಂಕಟೇಶ್ವರ ಸ್ವಾಮಿಯೊಂದಿಗೆ ಸಮಸ್ತೈಶ್ವರ್ಯಗಳನ್ನು ಅನುಭವಿಸುವುದಕ್ಕಾಗಿ ಸೂಚನೆಯನ್ನು ಆಳ್ವಾರು ಶ್ರೀಪುತ್ರಿಗೆ ಅಮುಕ್ತಮಾಲ್ಯದ ವಾಹನಸ್ಥನಾಗಿ ಕಲ್ಹಾರ ಪುಷ್ಪವನ್ನು (ಉತ್ತಮವಾದ ಸುಗಂಧವುಳ್ಳ ಒಂದು ಜಾತಿಯ ತಾವರೆ) ಧರಿಸುವಂತೆ ಮಾಡಿ ದಿವ್ಯೈಶ್ವರ್ಯಾಭಿವೃದ್ಧಿಕಾರಣಿಯಾದ ವ್ಯೂಹಲಕ್ಷ್ಮಿಗೆ ಯಂತ್ರ ಮಂತ್ರೋದ್ಧರಣಗಳಾದಿಯನ್ನೂ, ದಿವ್ಯ ಸಿಂಹಾಸನವನ್ನು ಕೆತ್ತಿಸಿ, ಶ್ರೀಗೋವಿಂದರಾಜು ಸ್ವಾಮಿಗೆ ದಕ್ಷಿಣ ಪಾರ್ಶ್ವದಲ್ಲಿರುವ ವೈಖಾನಸಾಗಮದ ಪ್ರಾಕಾರದಲ್ಲಿ ಪ್ರತಿಷ್ಠಾಪನೆ ಜರಗುವಂತೆ ಮಾಡಿ, ಸಮಸ್ತ ಉತ್ಸವಗಳನ್ನು ಚೊಕ್ಕವಾಗಿ ಹೊಂದಿಸಿಕೊಟ್ಟ ನಂತರ ಗೋದಾದೇವಿಯು,

**"ಪಾಂಡ್ಯದೇಶೇ ಕಲೇ ರೌದೌ ಧನ್ವಿನವ್ಯಪುರೇ ಶುಭೇ**

**ಕೃಷ್ಣಾನುಭವ ಪೂರ್ತ್ಯರ್ಥಂ ಭಾಮಾ ಭೂಮೇ ಜನಿಷ್ಯತಿ"**

(ಕಲಿಯುಗಾರಂಭದಲ್ಲಿ ಪಾಂಡ್ಯದೇಶದಲ್ಲಿ ಮಂಗಳಕರವಾದ"ಧನ್ವಿನವ್ಯಪುರ'ದಲ್ಲಿ ಶ್ರೀವಿಲ್ಲಿಪುತ್ತೂರವೆಂಬದಲ್ಲಿ ಕೃಷ್ಣಾನುಭವ ಪೂರ್ತಿ ಮಾಡಿಕೊಳ್ಳಲು ಭಾಮ (ಸತ್ಯಭಾಮೆ) ಭೂಮಿಯಲ್ಲಿ ಅವತರಿಸಿದಳು)ಎಂದು ಹರಿವಂಶದಲ್ಲಿ -

**"ಅಯೋನಿಜಾ ಚ ತುಲಸೀ ಕಾನನೇ ವಿಶ್ವಧಾರಿಣೆ**

**ಜನಿಷ್ಯತಿ ಕಲೌ ದೇವಿ ಮಾನುಷಿ ಕೃಷ್ಣಭಕ್ತಿತಃ"**

(ಭೂತಧಾತ್ರಿಯಾದ ಭೂದೇವಿ ಕಲಿಯುಗದಲ್ಲಿ ಕೃಷ್ಣ ಭಕ್ತಿಯಿಂದ ತುಲಸಿವನದಲ್ಲಿ ಅಯೋನಿಜಯಾಗಿ ಮಾನುಷಾಕಾರದಲ್ಲಿ ಜನಿಸುವುದು)

ಎಂದು ಪುರಾಣಿಕರು ಹೇಳಲು ಕೂಡಲೇ ಭೂಮ್ಯಾಂಶವನ್ನು ಹೊಂದಿದ ತುಳಸಿವನದಲ್ಲಿ ಭೂಮಿಯಲ್ಲಿ ಅವತಾರವನ್ನು ಮಾಡಿ -

(ಮುಂದುವರೆಯುತ್ತದೆ)

## ಡಿಸೆಂಬರ್ ತಿಂಗಳ ರಸಪ್ರಶ್ನೆಯ ಉತ್ತರಗಳು

01. ವೈಕುಂಠ
02. ವಿಷ್ಣು ಸಹಸ್ರನಾಮ
03. ರಘುನಾಥರಾವ್ ಮತ್ತು ಲಕ್ಷ್ಮೀ ಬಾಯಿ
04. ಶ್ರೀ ಕೃಷ್ಣ
05. ನಾಲ್ಕನೇ
06. ಶ್ರೀರಂಗನಾಥ ಸ್ವಾಮಿ
07. ಜಿತಾಮಿತ್ರ
08. ತ್ರಿಯುಗಹೊತಿ
09. ವೆಂಕಟಾದ್ರಿ
10. ಆಳ್ವಾರುಲ ಮಂಗಳಾಶಾಸನ
11. ವೈಕುಂಠ
12. ಪರಮಾತ್ಮನ ಓಂಕಾರ ನಾಮ
13. ತಿರುವಾಲಿ, ತಿರುನಗರಿ
14. ಲಕ್ಷ್ಮಿನಾರಾಯಣ
15. ತಿರುಮಂಗೈ ಆಳ್ವಾರ್

"ಸ್ವಾಮಿ! ಮಾಧವನ ಜೀವನವು ದೋಷ ಪೂರ್ಣ ಹಾಗೂ ಪಾಪಮಯವಾಗಿದೆ. ಅಂತಹವನು ಪೂರ್ವಜರಿಗೆ ಪಿಂಡಪ್ರದಾನ ಮಾಡಿದರೆ, ಆ ಪಿತೃದೇವತೆಗಳು ಹೇಗೆ ಸಂತೋಷಿಸುತ್ತಾರೆ?" ಎಂದು ಕುತೂಹಲದಿಂದ ಕೇಳಿದನು. ಜನಕನ ಸಂದೇಹವನ್ನು ಪರಿಹರಿಸಲು, ಪುರೋಹಿತನು, "ಜನಕ! ಮಾಧವನು ಚಾಂಡಾಲ ಕುಲದವಳನ್ನು ಸೇವಿಸಿದುದು, ಅವಳೊಂದಿಗೆ ದೀರ್ಘಕಾಲ ವಾಸಿಸಿದುದು ಮತ್ತು ಕೇವಲ ಕಾಮುಕನಂತೆ ವರ್ತಿಸುವುದು ಎಲ್ಲವೂ ಪಾಪದ ಕಾರ್ಯಗಳೇ ಆದರೆ ಕಪಿಲ ತೀರ್ಥದಲ್ಲಿ ಸ್ನಾನ ಮಾಡಿದ್ದರಿಂದ ಅವನ ಪಾಪಗಳೆಲ್ಲಾ ನಾಶವಾದವು. ಇದಲ್ಲದೆ, ಶ್ರದ್ಧೆಯಿಂದ ತನಗೆ ತೋಚಿದ ರೀತಿಯಲ್ಲಿ ಪಿಂಡವನ್ನು ಅರ್ಪಿಸಿದ್ದರಿಂದ ಪಿತೃ ದೇವತೆಗಳು ಸಂತೋಷಪಟ್ಟರು. ಮರುದಿನ, ಮಾಧವ ರಾಜಮನೆತನದವರೊಂದಿಗೆ ವೆಂಕಟಗಿರಿಯನ್ನು ಹತ್ತುತ್ತಿದ್ದಾಗ, ಆ ಗಿರಿ ಸ್ಪರ್ಶದಿಂದ ಅವನಿಗೆ ಅಂಟಿದ್ದ ಪಾಪಗಳೆಲ್ಲವೂ ತೊಳೆದುಹೋದವು. ವೇಂಕಟಾದ್ರಿಯಲ್ಲಿನ ವನವನ್ನು ದರ್ಶಿಸಿ ಅವನ ಪಾಪಾರಣ್ಯವೆಲ್ಲ ಸುಟ್ಟು ಹೋಯಿತು. ಈ ದೃಶ್ಯವನ್ನು ನೋಡಿದ ಬ್ರಹ್ಮ ಮತ್ತು ವಾಮದೇವಾದಿ ದೇವತೆಗಳು ಆಶ್ಚರ್ಯಚಕಿತರಾದರು. ಇದೆಲ್ಲವೂ ವೆಂಕಟಾದ್ರಿಯ ಮಹಿಮೆ ಎಂದು ಹೂವಿನ ಮಳೆ ಸುರಿಸಿದರು. ಕೊನೆಗೆ, ಬ್ರಹ್ಮ ಭೂಮಿಗೆ ಇಳಿದು, "ವಿಪ್ರ! ನಿನ್ನ ಪಾಪಗಳು ನಾಶವಾದವು. ಬೇಗನೆ ವೆಂಕಟಾದ್ರಿಯನ್ನು ತಲುಪಿ, ಸ್ವಾಮಿ ಪುಷ್ಕರಿಣಿಯಲ್ಲಿ ಮುಳುಗಿ,ಭೂವರಾಹ ಸ್ವಾಮಿಯನ್ನು ಪೂಜಿಸಿ, ನಿನ್ನ ಮಾನವ ದೇಹವನ್ನು ತ್ಯಜಿಸು. ನಂತರ, ಭೂಮಿಯ ಮೇಲೆ ಪಾಂಡವರ ವಂಶಸ್ಥನಾದ ಸುಪಾರುವಿನ ಮಗನಾಗಿ ಜನಿಸುವೆ ಮತ್ತು ನಾರಾಯಣವು ಪಾಲಕನಾದ ಸುಧರ್ಮನ ಆತ್ಮ ಸಂಗಾತಿಯಾಗುವೆ. ನೀನು ಹರಿಭಕ್ತಿಯಿಂದ ತೋಂಡಮಂಡಲವನ್ನು ಆಳುವೆ. ಲಕ್ಷ್ಮಿಯ ಅಂಶದಿಂದ ನಿನಗೆ ಮಗಳು ಜನಿಸುವಳು. ನೀನು ಅವಳನ್ನು ಶ್ರೀಹರಿಗೆ ಕನ್ಯಾದಾನ ಮಾಡಿ ನಂತರ ವೈಕುಂಠವನ್ನು ತಲುಪುವೆ" ಎಂದು ಬ್ರಹ್ಮನು ವರವನ್ನು ನೀಡಿದನು.

ವೇಂಕಟಗಿರಿಯ ದರ್ಶನ ಮಾತ್ರದಿಂದ ಪಾಪಗಳು ತೊಳೆದು ಹೋಗುತ್ತವೆ. ಗಿರಿಗಳಲ್ಲಿ ವೆಂಕಟಾದ್ರಿಯು ಶ್ರೇಷ್ಠವಾದುದು. 'ವೇಂ' ಎಂದರೆ ಪಾಪ, 'ಕಟ' ಎಂಬ ಎರಡು ಅಕ್ಷರಗಳು ಪಾಪದ ಉರುವಲನ್ನು ಸುಡುತ್ತವೆ. ಆದ್ದರಿಂದ 'ವೆಂಕಟಗಿರಿ' ಎಂಬ ಹೆಸರು ಬಂದಿದೆ.

ಬೆಳಿಗ್ಗೆ ವೆಂಕಟಾದ್ರಿಯನ್ನು ಸ್ಮರಿಸುವವರಿಗೆ ನೂರು ಗಂಗಾ ಸ್ನಾನ ಮಾಡಿದ ಫಲಸಿಗುತ್ತದೆ. ಸಾವಿರ ರಾಮೇಶ್ವರ ಸೇತುಯಾತ್ರೆ ಮಾಡಿದ ಫಲ ಸಿಗುತ್ತದೆ. ಇದನ್ನೆಲ್ಲಾ ಕೇಳಿದ



# ಶ್ರೀ ವೆಂಕಟಾಚಲ ಮಹಾತ್ಮ್ಯೆ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎನ್. ಪಾರ್ವತಿ

ಜನಕನು ತಕ್ಷಣ ವೆಂಕಟಾದ್ರಿಗೆ ಹೋಗಲು ನಿರ್ಧರಿಸಿದನು. ತನ್ನ ಪ್ರಮುಖ ಮಂತ್ರಿಗಳು ಮತ್ತು ಕುಲ ಪುರೋಹಿತರೊಂದಿಗೆ ವೆಂಕಟಾದ್ರಿಗೆ ಹೋಗಿ, ಸ್ವಾಮಿ ಪುಷ್ಕರಿಣಿಯಲ್ಲಿ ಪವಿತ್ರ ಸ್ನಾನ ಮಾಡಿ, ಆ ಗುಡಿಯ ಪಕ್ಕದಲ್ಲಿ ಭೂವರಾಹಸ್ವಾಮಿಯನ್ನು ಪೂಜಿಸಿ ಶ್ರೀನಿವಾಸನ ಸಾನ್ನಿಧ್ಯದಲ್ಲಿ ಕೆಲವು ಕಾಲ ಕಳೆದು, ನಂತರ ಮಿಥಿಲಾನಗರವನ್ನು ತಲುಪಿದನು.



ವೆಂಕಟಾದ್ರಿಯ ದರ್ಶನದ ಪುಣ್ಯ ಫಲಗಳಿಂದಾಗಿ, ರಾಜ ಜನಕನು ತನ್ನ ಮಗಳು ಸೀತೆಯ ವಿವಾಹವನ್ನು ಅಂಗರಂಗ ವೈಭವದೊಂದಿಗೆ ಎಲ್ಲರೂ ಮೆಚ್ಚುವಂತೆ ನೆರವೇರಿಸಿದನು. ಆ ಸಮಯದಲ್ಲಿ,ಊರ್ಮಿಳೆಯು ಲಕ್ಷ್ಮಣನನ್ನು, ಮಾಂಡವಿಯು ಭರತನನ್ನು ಮತ್ತು ಶ್ರುತಕೀರ್ತಿಯು ಶತ್ರುಘ್ನನನ್ನು ವಿವಾಹವಾದರು. ವೆಂಕಟಾದ್ರಿಯ ಮಹಾತ್ಮೆಯನ್ನು ಭಕ್ತಿಯಿಂದ ಕೇಳಿದ್ದರಿಂದಲೇ ಇದೆಲ್ಲವೂ ಸಾಧ್ಯವಾಯಿತು ಎಂದು ಜನಕನು ಸಂತೋಷಪಟ್ಟನು.

ಸೂತನು ಈ ವೃತ್ತಾಂತವನ್ನು ಹೇಳಿದ ಮೇಲೆ, ಶೌನಕಾದಿ ಮುನಿಗಳು ಮಹಾಋಷಿ ಬ್ರಹ್ಮನು ಪವಿತ್ರ ಹೃದಯದಿಂದ ಶ್ರೀವೆಂಕಟಾದ್ರೀಶ್ವರನಿಗೆ ರಥೋತ್ಸವವನ್ನು ಮಾಡಿದನೆಂದು ನೀವು ಈಗಾಗಲೇ ಹೇಳಿದ್ದೀರಿ. ಕಮಲಾಕ್ಷನು ಶೇಷಾದ್ರಿಯ ಮೇಲೆ ಎಷ್ಟು ಕಾಲ ನೆಲೆಸಿದ್ದನು? ಎಂದು ಋಷಿಗಳು ಕೇಳಿದರು. ಇದಕ್ಕೆ ಉತ್ತರವಾಗಿ,ಸೂತನು,"ಋಷಿಗಳೇ! ಶ್ರೀಹರಿ ಕಲಿಯುಗದ ಅಂತ್ಯದವರೆಗೆ ಶೇಷಾದ್ರಿಯ ಮೇಲೆ ತನ್ನ ಸಮಯವನ್ನು ಕಳೆದನು" ಎಂದು ಉತ್ತರಿಸಿದರು.

ಶ್ರೀ ವೆಂಕಟೇಶ್ವರನು ಪ್ರಾಕೃತ ಜನರ ಮಧ್ಯೆಯೇ ಇದ್ದು, ಅಪ್ರಾಕೃತ ಜನರ ಮಧ್ಯೆಯೂ ಇದ್ದು,ತನ್ನ ಅಪ್ರಾಕೃತ ತೇಜಸ್ಸಿನಿಂದ ಎಲ್ಲರನ್ನೂ ಆಶೀರ್ವದಿಸಿದ್ದಾನೆ. ಬೆಟ್ಟದ ಮೇಲಿದ್ದರೂ, ವೈಕುಂಠ ವೈಭವವನ್ನು ಅನುಭವಿಸುತ್ತಾ ಕಾಲ ಕಳೆದನು. ಶ್ರೀ ಭೂ, ನೀಲದೇವಿಯರೊಂದಿಗೆ ಸ್ವಾಮಿ ಮಾಯಾ ವಿಮಾನದಲ್ಲಿ ವೈಕುಂಠಪುರವನ್ನು ತಲುಪಿದನು. ಅಲ್ಲಿ ನಿತ್ಯ ಮುಕ್ತರನ್ನು ಕಂಡು ಹರ್ಷಿಸಿದನು. ಅಪ್ರಾಕೃತ ಮಣಿಮಯ ಅಂತಃಪುರದಲ್ಲಿ ಶೇಷತಲ್ಪದ ಮೇಲೆ ಪವಡಿಸಿದನು. ಆ ಸಮಯದಲ್ಲಿ, ಶೇಷಾದ್ರಿಯಲ್ಲಿ ವರಾಹಸ್ವಾಮಿಯು ವಿಶ್ವಕರ್ಮ ನಿರ್ಮಿಸಿದ ನಗರವನ್ನು ಅಂತರ್ಧಾನಿಸಿದನು. ನಂತರ ಅವನು ವೃಷಭಾಸುರನ ವಿರುದ್ಧ ಹೋರಾಡಲು ಹೊರಟನು. ಹಲವು ವರ್ಷಗಳ ನಂತರ, ನಾರದನು ವೆಂಕಟಾದ್ರಿಗೆ ಬಂದು ಶ್ರೀನಿವಾಸ ಸ್ವಾಮಿಯು ವೈಕುಂಠಕ್ಕೆ ಹಿಂದಿರುಗಿದ ಕಥೆಯನ್ನು ತಿಳಿದುಕೊಂಡು, ಸರಾಸರಿ ಸತ್ಯಲೋಕಕ್ಕೆ ಹೋಗಿ ಬ್ರಹ್ಮದೇವನನ್ನು ಭೇಟಿ ಮಾಡಿದನು.

ಚಕ್ರಧಾರಿ ಸ್ವಾಮಿಯು ಶೇಷಾದ್ರಿಯನ್ನು ಶ್ವೇತ ವರಾಹನಿಗೆ ಒಪ್ಪಿಸಿ ವೈಕುಂಠಪುರಕ್ಕೆ ಹೋಗಿದ್ದಾನೆಂದು ತಿಳಿಸಿದಾಗ, ಬ್ರಹ್ಮನು ತುಂಬಾ ದುಃಖಿತನಾದನು. ನಾರದ ನಾರಾಯಣನು ಶೇಷಾಚಲಂನಲ್ಲಿರುವವರೆಗೂ,ಭೂ ಜನರು ಸಾತ್ವಿಕರಾಗಿ ಬದುಕುತ್ತಿದ್ದರು.

ಶ್ರೀಹರಿ ವೈಕುಂಠವನ್ನು ತಲುಪಿದಾಗಿನಿಂದ, ಆ ಭಗವಂತನಿಗಾಗಿ ನಾನು ಯೋಜಿಸಿದ್ದ ರಥೋತ್ಸವವನ್ನು ವರಾಹದೇವನೊಬ್ಬನೇ ಮಾಡಲಾಗುತ್ತಿಲ್ಲ. ಆ ಶ್ರೀನಿವಾಸನೇ ಶೇಷಾದ್ರಿಯಲ್ಲಿರಬೇಕು. ಅದಕ್ಕನುಗುಣವಾಗಿ ವಸುದೇವ, ದಶರಥರ ತೇಜಸ್ಸನ್ನು ತಿಂತ್ರಿಣಿ ವೃಕ್ಷಗಳಾಗಿ ಸೃಷ್ಟಿಸುತ್ತೇನೆ. ದೇವಕಿ ಮತ್ತು ಕೌಸಲ್ಯೆಯ ಕಳೆಗಳನ್ನು ಹುತ್ತವಾಗಿ ಸೃಷ್ಟಿಸುತ್ತೇನೆ. ಶ್ರೀನಿವಾಸನು ಆ ಹುತ್ತದಲ್ಲಿ ಪ್ರವೇಶಿಸಲು ಏನಾದರೂ ಮಾರ್ಗವನ್ನು ಯೋಚಿಸು. ವನಜಾಕ್ಷ ಆ ಬೆಟ್ಟವನ್ನು ತಲುಪಿದ ನಂತರ ನಾನು ಮೊದಲಿನಂತೆ ಜನಹಿತಕ್ಕಾಗಿ ರಥೋತ್ಸವವನ್ನು ನಿರ್ವಹಿಸುತ್ತೇನೆ.

(ಮುಂದುವರೆಯುತ್ತದೆ)



# ಫೆಬ್ರವರಿ 2026 ತಿಂಗಳ ರಾಶಿ ಫಲಗಳು



ಶ್ರೀಮಾತಾ ಅನುಗ್ರಹ

## ಮೇಷ

ವ್ಯಾಪಾರದಲ್ಲಿ ಅಭಿವೃದ್ಧಿ ಉಂಟಾಗುವುದು. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು. ಅಧಿಕಾರಿಗಳಿಂದ ಲಾಭವಾಗಲಿದೆ. ಉದ್ಯೋಗದಲ್ಲಿ ಬಡ್ತಿ ಉಂಟಾಗುವುದು. ಉನ್ನತ ಅಥವಾ ಕ್ಲಿಷ್ಟ ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸುವಿರಿ.ಕುಟುಂಬದಲ್ಲಿ ಸಂತೋಷವಾದ ವಾತಾವರಣ ಇರುವುದು. ವಿದ್ಯಾರ್ಥಿಗಳಿಗೆ ಶುಭದಾಯಕ.

## ವೃಷಭ

ಉದ್ಯೋಗದಲ್ಲಿ ಬಡ್ತಿ ದೊರೆಯುತ್ತದೆ. ಉನ್ನತ ಅಧಿಕಾರವನ್ನು ಹೊಂದುವಿರಿ. ಶತ್ರುಗಳನ್ನು ಸದೆಬಡೆಯುವಿರಿ. ವೃತ್ತಿಜೀವನ ತೃಪ್ತಿಕರವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಶುಭದಾಯಕ. ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುದು. ನೂತನ ವಸ್ತ್ರಾಭರಣಗಳನ್ನು ಹೊಂದುವಿರಿ. ಕೃಷಿಕರಿಗೆ ಲಾಭದಾಯಕ.

## ಮಿಥುನ

ಧನಲಾಭವಾಗುವುದು. ವ್ಯಕ್ತಿಗೆ ಸುಖಾನುಕೂಲತೆಗಳು ಹೆಚ್ಚು ವುವು. ತೊಂದರೆಗಳೆಲ್ಲ ನಿವಾರಣೆ ಆಗುವುದು. ಹಿರಿಯರಿಂದ ಧನಾಗಮನವಾಗುವುದು. ವಿದ್ಯಾಭ್ಯಾಸದಲ್ಲಿ ಹೊಸ ತನ್ನು ಸಾಧಿಸುವಿರಿ. ಗೌರವವನ್ನು ಪಡೆಯುವಿರಿ. ವಾಹನ ಚಲಾಯಿಸುವಾಗ ಎಚ್ಚರಿಕೆ ಇರಲಿ.

## ಕರ್ಕಾಟಕ

ಹಿರಿಯರಿಂದ ಧನ ಲಾಭವಾಗುವುದು. ಕುಟುಂಬದಲ್ಲಿ ಸೌಖ್ಯ ವಿರುವುದು. ಮಗನಿಂದ ಸಂತೋಷ ಉಂಟಾಗುತ್ತದೆ. ವಿರೋಧಿಗಳು ದೂರ ಸರಿಯುವರು. ಸಾಮಾಜಿಕವಾಗಿ ಆರ್ಥಿಕವಾಗಿ ಅಭಿವೃದ್ಧಿಯಾಗುತ್ತದೆ. ಪ್ರಯಾಣದಿಂದ ಪ್ರಯೋಜನವಿದೆ. ತೀರ್ಥಯಾತ್ರೆಗೆ ಹೋಗುವಿರಿ.

## ಸಿಂಹ

ವಿರೋಧಿಗಳು ದೂರ ಸರಿಯುವರು. ಆರೋಗ್ಯದಲ್ಲಿ ಸುಧಾರಣೆ ಕಂಡು ಬರಲಿದೆ. ಆಸ್ತಿ ಮಾಡಿಕೊಳ್ಳುವಿರಿ. ಸಾಲ ತೀರಿಸುವಿರಿ. ಜೀರ್ಣಶಕ್ತಿ ಚೆನ್ನಾಗಿರುತ್ತದೆ. ಬೇರೆಯವರ ಬಗ್ಗೆ ತಲೆ ಕೆಡಿಸಿಕೊಳ್ಳದೆ ನಿಮ್ಮ ಕೆಲಸವನ್ನು ಚೆನ್ನಾಗಿ ಮಾಡುತ್ತೀರಿ. ಹನುಮಾನ್ ಚಾಲೀಸಾ ತಪ್ಪದೇ ಪಠಿಸಿ.

## ಕನ್ಯೆ

ಕೈಗೊಂಡ ಕೆಲಸ ಕಾರ್ಯಗಳು ನೆರವೇರುತ್ತದೆ ಮನೆಗೆ ಹೊಸ ವಸ್ತುಗಳನ್ನು ಕೊಂಡುಕೊಳ್ಳುವಿರಿ. ಉದ್ಯೋಗದಲ್ಲಿ ಬಡ್ತಿ ದೊರೆಯುವುದು ದೂರ ಪ್ರಯಾಣದಿಂದ ಲಾಭವಿರುವುದು ಮಾನಸಿಕ ನೆಮ್ಮದಿ ಇರುವುದು ವಿದ್ಯಾರ್ಥಿಗಳಿಗೆ ಶುಭದಾಯಕ.

## ತುಲಾ

ಮಕ್ಕಳನ್ನು ತುಂಬ ಪ್ರೀತಿಸುತ್ತೀರಿ. ವಿಭಾಗೀಯ ಪರೀಕ್ಷೆಗಳನ್ನು ಸಮರ್ಪಕವಾಗಿ ಪೂರೈಸುವಿರಿ.ಕ್ರೀಡೆಗಳಲ್ಲಿ ಯಶಸ್ಸು, ಸಮಾಜದ ಉನ್ನತ ವರ್ಗದವರೊಂದಿಗೆ ಸ್ನೇಹವಾಗಿ ನಿಮ್ಮ ಸ್ಥಿತಿಗತಿಯು ಹೆಚ್ಚುತ್ತದೆ. ಕೃಷಿಕರಿಗೆ ಲಾಭದಾಯಕ, ಮನೆಯಲ್ಲಿ ಶುಭಕಾರ್ಯಗಳು ನೆರವೇರುವುವು.

## ವೃಶ್ಚಿಕ

ಧೈರ್ಯದಿಂದ ಮುನ್ನುಗ್ಗುವಿರಿ. ಸರ್ಕಾರದಿಂದ ಸಹಾಯ ಸಿಗುತ್ತದೆ. ರಿಯಲ್ ಎಸ್ಟೇಟ್ ಇಂದ ಲಾಭ ಪಡೆಯುವಿರಿ. ಸಹೋದರಿಂದ ಲಾಭವಿರುವುದು. ಸಹೋದ್ಯೋಗಿಗಳಿಂದ ಅನುಕೂಲವಾಗುವುದು. ಉತ್ಸಾಹದಿಂದ ಕೆಲಸ ಮಾಡುವಿರಿ. ವಿದ್ಯಾರ್ಥಿಗಳಿಗೆ ಶುಭದಾಯಕ.

## ಧನಸ್ಸು

ಹೊಸ ಗೆಳೆಯರು ಸಿಗುವರು. ಧೈರ್ಯದಿಂದ ಕೆಲಸ ಕಾರ್ಯಗಳಲ್ಲಿ ಮುನ್ನುಗ್ಗುವಿರಿ. ಧನಾಗಮನವಾಗುವುದು. ಗೌರವವನ್ನು ಸಂಪಾದಿಸುವಿರಿ. ಸಮೃದ್ಧಿ ಸಂತೋಷ ಜೀವನವನ್ನು ನಡೆಸುವಿರಿ. ಸರ್ಕಾರದಿಂದ ಸನ್ಮಾನ. ಹೊಸ ವಸ್ತ್ರ ಖರೀದಿ ಮಾಡುವಿರಿ, ಮಾತಿನಲ್ಲಿ ಹಿಡಿತವಿರಲಿ.

## ಮಕರ

ಧನಾಗಮನ ಆಗುತ್ತದೆ. ನೂತನ ವಸ್ತ್ರಾಭರಣ ಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಶುಭ ಸಮಯ. ಸಂಗೀತಗಾರರಿಗೆ ಹೆಚ್ಚಿನ ಅವಕಾಶಗಳು ಸಿಗುವುದು. ಸುಖ ಸೌಲಭ್ಯಗಳಿಗೆ ಕೊರತೆ ಇರುವುದಿಲ್ಲ.

## ಕುಂಭ

ಹಣಕಾಸಿಗೆ ಕೊರತೆ ಇರುವುದಿಲ್ಲ. ವಿರೋಧಿಗಳು ದೂರ ಸರಿಯುವರು. ವಿದ್ಯೆಯಲ್ಲಿ ಪ್ರಗತಿ ಉಂಟಾಗುವುದು. ಸತ್ಯದ ಮಾರ್ಗದಲ್ಲಿ ನಡೆಯುವಿರಿ. ವ್ಯಾಪಾರದಲ್ಲಿ ಅಭಿವೃದ್ಧಿಯಾಗುವುದು. ದ್ರವ ಪದಾರ್ಥಗಳ ಮಾರಾಟದಲ್ಲಿ ಲಾಭ ಕಂಡು ಬರುವುದು.

## ಮೀನ

ಆದಾಯಕ್ಕೆ ಅನೇಕ ದಾರಿಗಳಿದ್ದು ಹಣಕಾಸಿಗೆ ತೊಂದರೆ ಇರುವುದಿಲ್ಲ. ಸ್ನೇಹಿತರಿಂದ ನಿಮಗೆ ಸಹಾಯ ಸಿಗುವುದು. ಕೈ ಹಾಕಿದ ಕೆಲಸ ಕಾರ್ಯಗಳು ಕೈಗೂಡುತ್ತವೆ. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುತ್ತದೆ. ವ್ಯವಸಾಯದಿಂದ ಆದಾಯ ಬರುತ್ತದೆ. ಸಂತಾನ ಪೇಕ್ಷಿಗಳಿಗೆ ಸಂತಾನ ಭಾಗ್ಯ ಲಭಿಸುತ್ತದೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ॥ ಅನಸೂಯ ಎಸ್. ರಾಜೀವ್

**1. ದೇವಸ್ಥಾನದಲ್ಲಿ ದೇವರ ದರ್ಶನ ಮಾಡಿದ ನಂತರ ಹೊರಗಡೆ ಸ್ವಲ್ಪ ಹೊತ್ತು ಕುಳಿತು ನಂತರ ಹೊರಡಬೇಕು ಯಾಕೆ?**

**ಉತ್ತರ :** ಏಕೆಂದರೆ ನಾವು ದೇವರ ದರ್ಶನ ಮಾಡಿದ ನಂತರ ಆ ದೇವರನ್ನು ನೆನೆಸಿಕೊಂಡು ಈ ಕೆಳಗಿನ ಶ್ಲೋಕವನ್ನು ಹೇಳಿಕೊಂಡು ಪ್ರಾರ್ಥಿಸಿಕೊಳ್ಳಬೇಕು.

**ಅನಾಯಾಸೇನ ಮರಣಂ**
**ವಿನಾ ದೈನ್ಯೇನ ಜೀವನಂ**
**ದೇಹಾಂತೇ ತವ ಸಾನ್ನಿಧ್ಯಮ್**
**ದೇಹಿಮೇ ಪರಮೇಶ್ವರ**

ಅನಾಯಾಸೇನ ಮರಣಂ ಅಂದರೆ ನಮ್ಮ ಅಂತ್ಯ ಕಾಲದಲ್ಲಿ ಯಾವುದೇ ತೊಂದರೆ ಇಲ್ಲದೆ ಸಾಯಬೇಕು ಮತ್ತು ಅನಾರೋಗ್ಯಕ್ಕೆ ಒಳಗಾದ ನಂತರ ಎಂದಿಗೂ ಹಾಸಿಗೆಯ ಮೇಲೆ ಇರುವಂಥಾಗಬಾರದು. ದುಃಖದಿಂದ ಸಾಯಬಾರದು ಮತ್ತು ನಾವು ನಡೆದಾಡುವಾಗಲೇ ನಮ್ಮ ಜೀವನದ ಅಂತ್ಯ ಆಗಬೇಕು.

ವಿನಾ ದೈನೇನ ಜೀವನಂ ಅಂದರೆ ಎಂದಿಗೂ ಯಾರೊಂದಿಗೂ ಪರಾವಲಂಬಿಯಾಗಿ ಜೀವನ ಇರಬಾರದು. ದೇವರ ಕೃಪೆಯಿಂದ ಭಿಕ್ಷೆ ಬೇಡದೆ ಜೀವನ ನಡೆಸಬಹುದು.

ದೇಹಾಂತೇ ತವ ಸಾನ್ನಿಧ್ಯಂ ಅಂದರೆ ಸಾವು ಬಂದಾಗ ದೇವರು ಮುಂದೆ ಇರಬೇಕು ಭೀಷ್ಮರ ಮರಣದ ಸಮಯದಲ್ಲಿ ಕೃಷ್ಣ ಅವರ ಮುಂದೆ ನಿಂತಿದ್ದರು. ಕೃಷ್ಣನನ್ನು ನೋಡಿ ಭೀಷ್ಮರು ಪ್ರಾಣಬಿಟ್ಟರು ಹಾಗೆ. ದೇಹಿ ಮೇ ಪರಮೇಶ್ವರ ಅಂದರೆ ಓ ಭಗವಂತ ನಮಗೆ ಅಂತಹವರವನ್ನು ನೀಡು.

ದೇವರನ್ನು ಪ್ರಾರ್ಥಿಸುವಾಗ ಈ ಶ್ಲೋಕವನ್ನು ಪಠಿಸಿ. ಅದು ಕೊಡು ಇದು ಕೊಡು ಅಂತ ಭೋಗಭಾಗ್ಯಗಳನ್ನು ಕೇಳಬೇಡಿ. ಸಾಂಸಾರಿಕ ವಿಷಯಗಳ ಬಗ್ಗೆ ಕೇಳಿದರೆ ನಿಮ್ಮ ಅರ್ಹತೆಗೆ ಅನುಗುಣವಾಗಿ ದೇವರು ಕೊಡುತ್ತಾನೆ. ಅದಕ್ಕಾಗಿಯೇ ದೇವರ ದರ್ಶನ ಮಾಡಿದ ನಂತರ ಪ್ರತಿಯೊಬ್ಬರೂ ಈ ಪ್ರಾರ್ಥನೆಯನ್ನು ಕುಳಿತು ಪ್ರಾರ್ಥಿಸಬೇಕು. ಪ್ರಾರ್ಥನೆ ಎಂದರೆ ವಿಶೇಷ ವಿನಂತಿ ಎಂದರ್ಥ.

ದೇವಾಲಯದಲ್ಲಿ ದೇವರ ದರ್ಶನವನ್ನು ಯಾವಾಗಲೂ ತೆರೆದ ಕಣ್ಣುಗಳಿಂದಲೇ ಮಾಡಬೇಕು. ನಮ್ಮ ಕಣ್ಣುಗಳನ್ನು ದೇವರ ಸ್ವರೂಪದಿಂದ ತುಂಬಿಸಿಕೊಳ್ಳಬೇಕು. ದರ್ಶನವಾಗಿ ಹೊರಗೆ ಬಂದು ಕುಳಿತಾಗ ನಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ನೋಡಿದ ಸ್ವರೂಪವನ್ನು ಧ್ಯಾನಿಸಬೇಕು.

**2. ಬ್ರಾಹ್ಮಿ ಮುಹೂರ್ತದಲ್ಲಿ ಏಳಬೇಕು ಎಂದು ಹೇಳುವ ಉದ್ದೇಶವೇನು?**

**ಉತ್ತರ :** ರಾತ್ರಿಯ ಕೊನೆಯ ಹಂತವನ್ನು ಬ್ರಾಹ್ಮೀ ಮುಹೂರ್ತ ಎಂದು ಕರೆಯುತ್ತಾರೆ. ಬ್ರಾಹ್ಮೀ ಮುಹೂರ್ತವು ನಿದ್ರೆಯನ್ನು ತ್ಯಜಿಸಲು ಉತ್ತಮ ಸಮಯ ಬ್ರಾಹ್ಮಿ ಮುಹೂರ್ತದಲ್ಲಿ ಏಳುವುದರಿಂದ ಸೌಂದರ್ಯ, ಶಕ್ತಿ, ಜ್ಞಾನ, ಬುದ್ಧಿವಂತಿಕೆ ಮತ್ತು ಆರೋಗ್ಯ ಬರುತ್ತದೆ. ಬ್ರಾಹ್ಮಿ ಮುಹೂರ್ತದಲ್ಲಿ ಮಲಗುವುದನ್ನು ಕಟ್ಟು ನಿಟ್ಟಾಗಿ ನಿಷೇಧಿಸಲಾಗಿದೆ. ಬ್ರಹ್ಮ ಎಂದರೆ ಸರ್ವೋಚ್ಚವಾಗಿರತಕ್ಕಂತದ್ದು ಅಂದರೆ ದೇವರು. ಮೂರ್ತ ಎಂದರೆ ಅನುಕೂಲಕರ ಸಮಯ. ರಾತ್ರಿಯ ಕೊನೆಯ ಗಂಟೆ ಅಂದರೆ ಬೆಳಗಿನ ಜಾವ ನಾಲಕ್ಕರಿಂದ ಐದು ಮೂವತ್ತರವರೆಗಿನ ಸಮಯವನ್ನು ಬ್ರಾಹ್ಮೀಮುಹೂರ್ತ ಎನ್ನುತ್ತಾರೆ. ಈ ಸಮಯದಲ್ಲಿ ಮಲಗುವುದು ಪುಣ್ಯ ನಾಶವಾಗುವುದು. ಭಕ್ತಿಗೆ ಇದು ಅತ್ಯುತ್ತಮ ಸಮಯ. ಈ ಸಮಯದಲ್ಲಿ ಮನುಷ್ಯನ ಮನಸ್ಸು ಶಾಂತವಾಗಿರುತ್ತದೆ ಹಾಗೂ ದೇಹವು ಶುದ್ಧವಾಗಿರುತ್ತದೆ. ಬ್ರಹ್ಮ ಮುಹೂರ್ತದಲ್ಲಿ ಪ್ರಕೃತಿಯು ಜಾಗೃತವಾಗಿರುತ್ತದೆ. ಬ್ರಹ್ಮ ಮುಹೂರ್ತದಲ್ಲಿ ಎದ್ದು ನಡೆಯುವುದು ದೇಹಕ್ಕೆ ಜೀವ ನೀಡುವ ಶಕ್ತಿಯನ್ನು ತುಂಬುತ್ತದೆ. ಈ ಸಮಯವು ಅಧ್ಯಯನಕ್ಕೂ ಉತ್ತಮವಾಗಿದೆ. ಬ್ರಹ್ಮ ಮುಹೂರ್ತದಲ್ಲಿ ಏಳುವ ವ್ಯಕ್ತಿ ಯಶಸ್ವಿಯಾಗುತ್ತಾನೆ ಸುಖಿಯಾಗುತ್ತಾನೆ.

# ಸತ್ಯದ ಮಾರ್ಗದಲ್ಲೇ ಸದಾ ಇರಬೇಕು

– ಎ. ಆರ್. ರಘುರಾಮ
99161 38436

ಶ್ರೀರಾಮನ ಸೇನೆ ಲಂಕೆಯಲ್ಲಿ ಬೀಡು ಬಿಟ್ಟಿತ್ತು. ಇನ್ನೇನು ಯುದ್ಧ ನಡೆಯಬೇಕು ಎಂಬ ಹಂತದಲ್ಲಿ ಶ್ರೀರಾಮ ಶಾಂತಿ ಸಂದೇಶವೊಂದನ್ನು ಕಳಿಸಲು ನಿರ್ಧಾರ ಮಾಡಿದ. ಸೀತೆಗಾಗಿ ಇಬ್ಬರ ನಡುವಿನ ಯುದ್ಧದಲ್ಲಿ ಏಕೆ ಸಾವಿರಾರು ಜನ ಸೈನಿಕರು ಸಾಯಬೇಕು?

ಅಪ್ರತಿಮ ಸಾಧಕನೂ, ಕೈಲಾಸವನ್ನೇ ಎತ್ತಿದವನಾಗಿರುವ ರಾವಣನ ವಿರುದ್ಧ ಏಕೆ ಯುದ್ಧ ಮಾಡಬೇಕು? ಕೊನೆಯ ಹಂತದಲ್ಲಿ ಒಂದು ಸಂಧಾನವಾದರೆ ಸುಂದರವಾದ ಲಂಕೆ ಶಾಂತಿಯ ಬೀಡಾಗಿಯೇ ಉಳಿಯುತ್ತದೆ ಎಂಬುದು ಶ್ರೀರಾಮನ ಆಶಯವಾಗಿತ್ತು. ವಾಲಿಯ ಮಗ ಅಂಗದನನ್ನು ಕರೆದ ಶ್ರೀರಾಮ ಶಾಂತಿ ದೂತನಾಗಿ ಹೋಗು ಎಂದು ಆದೇಶಿಸಿದ. ಸೀತಾ ಮಾತೆಯನ್ನು ಶ್ರೀರಾಮನಿಗೆ ಗೌರವಪೂರ್ವಕವಾಗಿ ಒಪ್ಪಿಸಲು ಈಗಲೂ ಅವಕಾಶ ಇದೆ. ಶ್ರೀರಾಮ ನಿನ್ನ ಕೃತ್ಯವನ್ನು ಕ್ಷಮಿಸಲು ನಿರ್ಧರಿಸಿದ್ದಾನೆ. ಸ್ನೇಹಹಸ್ತ ಅಪೇಕ್ಷೆ ಮಾಡಿದ್ದಾನೆ. ಇದರಿಂದ ಅನಗತ್ಯ ಯುದ್ಧವೂ ತಪ್ಪುತ್ತದೆ. ನಿರ್ಧಾರ ನಿನ್ನ ಕೈಯಲ್ಲೇ ಇದೆ-ಎಂಬ ಸಂದೇಶ ಹೊತ್ತ ಅಂಗದ ರಾವಣನ ಆಸ್ಥಾನಕ್ಕೆ ಬಂದ. ಸಭಾಸದರ ಮುಂದೆ ಶ್ರೀರಾಮನ ಶಾಂತಿ ಸಂದೇಶವನ್ನು ಗಟ್ಟಿಯಾಗಿ ಹೇಳಿದ.

ಸಭೆಯಲ್ಲಿದ್ದ ಕೆಲವರಿಗೆ ಈ ಮಾತು ಸರಿ ಎನಿಸಿತು. ಆದರೂ ಅವರು ಲಂಕಾಧಿಪತಿ ಕಡೆಗೆ ನೋಡಿದರು. ಸಂಧಾನಕಾರನ ಮಾತು ಕೇಳಿದ ರಾವಣ ಕೆಲ ನಿಮಿಷ ಚಿಂತನೆ ನಡೆಸಿದ. ಎಷ್ಟೇ ಆಗಲಿ, ಆತನಿಗೆ ವಿನಾಶಕಾಲ ಸಮೀಪವಾಗಿತ್ತು.

ಉತ್ತಮ ಆಲೋಚನೆ ಹೇಗೆ ಸಾಧ್ಯ? ಅಲ್ಲಿಯೂ ಆತ ದುಷ್ಟತನವನ್ನೇ ಪ್ರಕಟ ಮಾಡಿದ. ಕಿಷ್ಕಿಂದೆಯ ಯುವರಾಜ ಅಂಗದನೇ ನೀನು ರಾಮನ ಸೇನೆ ತೊರೆದು ನನ್ನೊಂದಿಗೆ ಬಾ. ನಿನ್ನ ತಂದೆ ವಾಲಿಯನ್ನು ವಧೆ ಮಾಡಿದ ಶ್ರೀರಾಮನ ಸೇನೆಯಲ್ಲಿ ನೀ ಇರುವುದು ಸೂಕ್ತವಲ್ಲ. ಲಂಕಾಧೀಶನ ಪರವಾಗಿ ಯುದ್ಧ ಮಾಡು. ವಿಜಯ ನನಗೇ. ನಂತರ ನಿನ್ನನ್ನು ಕಿಷ್ಕಿಂಧೆಯ ಅಧಿಪತಿಯನ್ನಾಗಿ ಮಾಡುವೆ ಎಂದ. ಅಂಗದನಿಗೆ ರಾವಣನ ಮಾತುಗಳು ಏಕೋ ಸರಿ ಕಾಣಲಿಲ್ಲ. ನಾನು ಶ್ರೀರಾಮನ ಶಾಂತಿ ಸಂದೇಶ ಹೊತ್ತು ತಂದವ ಮಾತ್ರ ಎಂದು ನೇರವಾಗಿ ಹೇಳಿದ. ಕಿಷ್ಕಿಂದೆ ರಾಜನಾಗುವುದಕ್ಕಿಂತ ಸತ್ಯವಂತನಾದ ರಾಮನ ಸೇನೆಯಲ್ಲಿ ಸೇವಕನಾಗಿ ಇರುವುದೇ ದೊಡ್ಡ-ಸುಕೃತ. ನೀನು ಸೀತಾ ಮಾತೆಯನ್ನು ಅಪಹರಣ ಮಾಡಿ ಲೋಕಕ್ಕೆ ಕೆಟ್ಟ ಸಂದೇಶ ನೀಡಿರುವೆ. ಕ್ಷಮೆ ಮತ್ತು ಶಾಂತಿ ಸ್ಥಾಪನೆಗೆ ಕೊನೇ ಅವಕಾಶ ನೀಡಿದರೂ ಒಡೆದು ಆಳುವ ನೀತಿ ಪ್ರಕಟ ಮಾಡಿರುವೆ. ಇದು ತರವಲ್ಲ ಎಂದ. ರಾವಣನು ಯುದ್ಧವೇ ಅಂತಿಮ ಎಂದಾಗ ಅಂಗದ ಮೌನವಾಗಿ ಹೊರಬಂದ. ರಾವಣ ವಧೆಯಾಗಿ ಶ್ರೀರಾಮನಿಗೇ ಜಯವಾದ ಕಥೆ ಎಲ್ಲರಿಗೂ ತಿಳಿದಿದೆ. ಮಹಾಭಾರತದ ಪ್ರಸಂಗ. ದುರ್ಯೋಧನನು ಕರ್ಣನನ್ನು ಅಂಗ ರಾಜ್ಯದ ಅಧಿಪತಿಯನ್ನಾಗಿ ಮಾಡಿ ಕೊಂಡ. ಆತನ ಜನನದ ಪೂರ್ವವೃತ್ತಾಂತ ತಿಳಿದಿದ್ದರೂ ಪ್ರಥಮ ಪಾಂಡವನನ್ನು ಬಳಸಿಕೊಂಡೇ ಪಾಂಡವರನ್ನು ಮುಗಿಸಲು ನೂರಾರು ಯತ್ನ ಮಾಡಿದ. ಕೌರವೇಂದ್ರನ ಅನ್ನದ ಋಣ ಮತ್ತು ಅಧಿಕಾರ ನೀಡಿದ ಋಣಗಳು ಕರ್ಣನನ್ನು ಇಕ್ಕಟ್ಟಿಗೆ ಸಿಲುಕಿಸಿದವು. ಎಷ್ಟೇ ಪರಾಕ್ರಮಿ ಆಗಿದ್ದರೂ ಆತ ಕಡೆಗೆ ದುರಂತ ನಾಯಕನಾಗಿ ಬಿಟ್ಟ. ನಮ್ಮ ಜೀವನದಲ್ಲೂ ಇಂಥ ಅನೇಕ ಪ್ರಸಂಗ ಎದುರಾಗುತ್ತವೆ. ನಮ್ಮ ಕಷ್ಟ, ನಷ್ಟ, ನೋವುಗಳನ್ನು ಬಳಸಿಕೊಂಡು ಕೆಲವರು ಸ್ವಾರ್ಥಸಾಧನೆಗೆ ಮುಂದಾಗುತ್ತಾರೆ. ನಮಗೆ ಆಸೆ, ಆಮಿಷ, ಅಧಿಕಾರ ತೋರಿ, ತಮ್ಮ ಪಕ್ಷಕ್ಕೆ ಎಳೆದುಕೊಂಡು ಸತ್ಯದ ಮಾರ್ಗಗಳನ್ನು ಬಂದ್ ಮಾಡಿಬಿಡುತ್ತಾರೆ. ಆಗ ನಾವು ಏನನ್ನೂ ಮಾಡಲಾಗದ ತೊಳಲಾಟದ ಸ್ಥಿತಿಗೆ ಬಂತು ತಲುಪುತ್ತೇವೆ. ಬದುಕು ದ್ವಂದ್ವದಲ್ಲೇ ಅಂತ್ಯವಾಗುತ್ತದೆ. ಆದ ಕಾರಣ ಯಾವುದೇ ಮಾರ್ಗ ತಕ್ಷಣಕ್ಕೆ ಹಿತ ಎನಿಸಿದರೂ ಸತ್ಯಾಸತ್ಯತೆ ಅವಲೋಕಿಸಿಯೇ ಹೆಜ್ಜೆ ಇಡಬೇಕು ಎಂಬುದು ಎರಡೂ ಪ್ರಸಂಗದ ನೀತಿಸಾರ.

# ಪುಟಾಣಿ ಮಕ್ಕಳಿಗಾಗಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.








ಬಣ್ಣವನ್ನು ತುಂಬಿರಿ.

## ಮಾರ್ಗ ಅನ್ವೇಷಣೆ

ಮಕ್ಕಳೇ, ಇಲ್ಲಿರುವ ಜೇಡ, ಹಾವು, ಆನೆ ಯಾವ ಹಾದಿಯಲ್ಲಿ ಹೋಗಿ ಶಿವನನ್ನು ಸೇರುತ್ತವೆ ಎಂದು ಕಂಡು ಹಿಡಿಯಿರಿ ನೋಡೋಣ !





## ಈ ಡಮರುಗವನ್ನು ಗಮನಿಸಿ

ಈ ಡಮರುಗನಲ್ಲಿ ಯಾವುದು ವಿಭಿನ್ನವಾಗಿವೆ ಎಂದು ಕಂಡು ಹಿಡಿಯಿರಿ ಮಕ್ಕಳೆ ನೋಡೋಣ

[illegible]

# ಮಕ್ಕಳೇ ಇದು ನಿಮಗಾಗಿ

## ರಸ ಪ್ರಶ್ನೆಗಳು

01. ಪಂಚಾಕ್ಷರಿ ಮಂತ್ರ ಯಾವುದು?........................................
02. ಯಾರು ಜಲಕ್ರೀಡೆಯಾಡಲು ಪಾಂಡವರನ್ನು ಆಹ್ವಾನಿಸಿದರು? ದುರ್ಯೋಧನ ........................................
03. ಮಹಾಶಿವರಾತ್ರಿಯ ಮತ್ತೊಂದು ಹೆಸರೇನು? ........................................
04. ಯಾರು ಮಗುವನ್ನು ಬಿಟ್ಟು ತಪಸ್ಸಿಗೆ ತೆರಳಿದರು?........................................
05. ತಿಲ್ಲೈತಿರುಚ್ಚಿತ್ತಿರಕೊಟಂನ ಮತ್ತೊಂದು ಹೆಸರೇನು?........................................
06. ಜಗನ್ನಾಥವಿಠಲನ ನಾಲಿಗೆಯಲ್ಲಿದ್ದು ನುಡಿಸುವಂತೆ ಮಾಡಿದವರು ಯಾರು?........................................
07. ಮಿಡಿಗೇಶಿ ಬೆಟ್ಟವನ್ನು ಏರುವ ದಾರಿಯಲ್ಲಿ ಯಾವ ದೇವಾಲಯವಿದೆ? ........................................
08. ತೋಮಾಲೆ ಎನ್ನುವ ಪದವನ್ನು ತಮಿಳಿನಲ್ಲಿ ಏನ್ನೆನ್ನುತ್ತಾರೆ? ........................................
09. ಮಾಘ ಮಾಸ ಯಾವುದಕ್ಕೆ ಖ್ಯಾತವಾಗಿದೆ? ........................................
10. ಶ್ರೀಮದ್ಭಗವದ್ಗೀತೆಯಲ್ಲಿ ಯಾವ ಯೋಗವಾಗಿದೆ?........................................
11. ತಿರುವಾಡಿ ಪೂರ್ವದ ದಿನದಂದು ಯಾವ ಸಂಪ್ರದಾಯವನ್ನು ನಿರ್ವಹಿಸುತ್ತಾರೆ?........................................
12. ಗಿರಿಗಳಲ್ಲಿ ಶ್ರೇಷ್ಠವಾದುದು ಯಾವುದು? ........................................
13. ಯಾವ ಮುಹೂರ್ತದಲ್ಲಿ ಮಲಗುವುದು ನಿಷೇಧಿಸಲಾಗಿದೆ? ........................................
14. ವಾಲಿಯ ಮಗನ ಹೆಸರೇನು? ........................................
15. ಬೆಜ್ಜ ಮಹಾದೇವಿ ಯಾರಿಗೆ ವೈದ್ಯರನ್ನು ಕರೆತರಲು ಹೇಳಿದಳು?........................................

## ಸೂಚನೆಗಳು

**43 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |




ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ.



1) ಪಾರ್ವತಿ ದೇವಿ 2) ನಂದಿ 3) ನೀಲಕಂಠ 4) ದಕ್ಷಪ್ರಜಾಪತಿ 5) ವೇದವ್ಯಾಸ 6) ವಾಸುಕಿ
7) ಇಬ್ಬರೂ 8) ಗಣೇಶ ಹಾಗೂ ಸುಬ್ರಹ್ಮಣ್ಯ

ಮಕ್ಕಳೇ! ಈ ಚಿತ್ರದಲ್ಲಿರುವ ರಬ್ಬರ್‌ನಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ಪೆನ್ಸಿಲ್ ಬಾಕ್ಸ್‌ನಲ್ಲಿ ಸರಿ ಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ !




1) vi 2) iii 3) ii 4)i 5) v



ಮಕ್ಕಳೇ ನಾನು ಶಿವನ ವಾಹನ ಮತ್ತು ನಾನು ಬಿಳಿ ಬಣ್ಣದಲ್ಲಿ ಕಾಣುತ್ತೇನೆ. ನಾನು ಯಾರು ಎಂದು ಹೇಳಿ ನೋಡೋಣ.

ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!

ನಂದಿ

ಚಿತ್ರಕಥೆ

# ತಾಯಿಯ ಪ್ರೀತಿಯ ಮುಂದೆ ನಾವು ತಲೆ ಬಾಗಲೇಬೇಕು


ಕಥೆ: ಮೂಲ: ಕಲಾರತ್ನ ಡಾ|| ಕೆ. ರವಿಚಂದ್ರನ್
ಅನುವಾದ: ಆರ್.ಕೆ.ವಿ.
ಚಿತ್ರಗಳು : ಟಿ. ಶಿವಾಜಿ





ನಾವೆಲ್ಲರೂ ಒಟ್ಟಿಗೆ ಬೆಜ್ಜ ಮಹಾದೇವಿಯ ಮನೆಗೆ ಹೋಗೋಣ. ಎಲ್ಲರೂ ಅಲ್ಲಿ ಕುಳಿತುಕೊಳ್ಳೋಣ, ಪರಮಾತ್ಮ ಶಿವನನ್ನು ಸ್ತುತಿಸೋಣ, ಪರಮ ಶಿವನು ಸಾಧಾರಣ ಸ್ಥಿತಿಗೆ ಬರುವವರೆಗೆ ನಿರಂತರವಾಗಿ ಪಂಚಾಕ್ಷರಿಯನ್ನು ಜಪಿಸೋಣ.
ನಾವೆಲ್ಲರೂ ನಮ್ಮ ಕೈಲಾದಷ್ಟು ಪ್ರಯತ್ನಿಸೋಣ! ನಾವೆಲ್ಲರೂ ನಮ್ಮನ್ನು ಶುದ್ಧೀಕರಿಸಿಕೊಂಡು ಇಷ್ಟ ಲಿಂಗವನ್ನು ಪೂಜಿಸಿ, ಆ ಪರಮ ಶಿವನನ್ನು ಸ್ತುತಿಸುತ್ತಾ, ಪೂಜಿಸುತ್ತಾ ಕೀರ್ತಿಸುತ್ತಾ ಹೋಗೋಣ!
ಬೆಜ್ಜ ಮಹಾದೇವಿಯು ಅದೇ ಕೆಲಸ ಮಾಡುತ್ತಿದ್ದಾಳೆಯೇ? ಏನೇ ಮಾಡಿದರೂ ಅವಳು ಪಂಚಾಕ್ಷರಿಯನ್ನು ಜಪಿಸುತ್ತಲೇ ಇರುತ್ತಾಳೆ. ನಿದ್ರೆಯಲ್ಲೂ ಅವಳು ಪಂಚಾಕ್ಷರಿಯನ್ನು ಎಂದಿಗೂ ಮರೆಯುವುದಿಲ್ಲ ಆಕೆ ಶಿವನಿಂದ ಬಂದ ಉಡುಗೂರೆ. ಆದ್ದರಿಂದ ಅವಳು ನಿರಂತರವಾಗಿ ಶಿವಧ್ಯಾನದಲ್ಲಿದ್ದಾಳೆ.
ಎಲ್ಲರೂ ಓಂ ನಮಃ ಶಿವಾಯ.... ಓಂ ನಮಃ ಶಿವಾಯ... ಎಂದು ಜಪಿಸುತ್ತಾ ಬೆಜ್ಜ ಮಹಾದೇವಿಯ ಮನೆ ತಲುಪಿದರು.
ಮಗೂ! ನಾನಿನ್ನು ಈ ನೋವನ್ನು ಇನ್ನು ಸಹಿಸಲಾರೆ. ಮಗು! ನಾನು ನಿನಗಾಗಿ ನನ್ನ ಪ್ರಾಣವನ್ನೇ ಕೊಡುತ್ತೇನೆ.
ಅಮ್ಮಾ! ಬೆಜ್ಜ ಮಹಾದೇವಿ! ನಿನಗೆ ಏನು ವರಬೇಕು ಕೇಳು ತಾಯಿ!
ಪರಮಶಿವಾ ! ಯಾವುದೇ ಕಾಯಿಲೆ ಇಲ್ಲದೆ ನೀವು ಆರೋಗ್ಯವಾಗಿದ್ದರೆ ಸಾಕು!
ಭಕ್ತರೇ! ನಿಮ್ಮಂತಹ ಶುದ್ಧ ಮನಸ್ಸುಗಳು ಕಾಣಿಕೆಗಳಾಗಿದ್ದರೆ, ನಾವು ಹೀಗೆ ಅನಾರೋಗ್ಯಕ್ಕೆ ಯಾಕೆ ಒಳಗಾಗುತ್ತೇವೆ? ಪ್ರತಿಯೊಬ್ಬ ತಾಯಿಯೂ ತನ್ನ ಮಕ್ಕಳನ್ನು ದೇವರ ರೂಪಗಳೆಂದು ಪರಿಗಣಿಸಿ ಅವರನ್ನು ಚೆನ್ನಾಗಿ ನಡೆಸಿಕೊಂಡು ಶಿಸ್ತುಬದ್ಧಗೊಳಿಸಿದರೆ, ಎಲ್ಲರೂ ಚೆನ್ನಾಗಿರುತ್ತಾರೆ. ಇತರ ಎಲ್ಲಾ ಭಕ್ತರು ಒಂದಲ್ಲ ಒಂದು ರೀತಿಯಲ್ಲಿ ನನ್ನಿಂದ ಏನನ್ನಾದರೂ ಕೇಳಿಕೊಂಡಿದ್ದಾರೆ. ಯಾವುದೇ ಆಸೆಯಿಲ್ಲದೆ, ಬೆಜ್ಜಮಹಾದೇವಿ ನಮ್ಮ ತಾಯಿಯಾದಳು ಮತ್ತು ನಮ್ಮನ್ನು ಮುದ್ದಿಸಿದಳು. ಈ ಕ್ಷಣದಿಂದ, ನಮ್ಮ ಕೈಲಾಸದಲ್ಲಿ ನಮ್ಮ ತಾಯಿಗೆ ಒಂದು ಸ್ಥಳಸಿದ್ಧವಾಗಿದೆ.
ನೀವು ಮತ್ತು ನಿಮ್ಮ ಕುಟುಂಬವು ಆಶೀರ್ವದಿಸಲ್ಪಟ್ಟಿದ್ದೀರಾ ನಿಮ್ಮ ಕರ್ಮ ಪಕ್ವವಾದ ನಂತರ ನೀವೆಲ್ಲರೂ ಕ್ರಮೇಣ ಕೈಲಾಸವನ್ನು ತಲುಪುತ್ತೀರಿ. ನಾವು ಮತ್ತೊಮ್ಮೆ ಅವಳ ಮಾತೃ ಪ್ರೀತಿಗೆ ನಮಸ್ಕರಿಸುತ್ತೇವೆ!
ಧನೋಸ್ಮಿ ಪರಮ ಶಿವಾ! ಧನೋಸ್ಮಿ!

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯುಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯುಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and and Published by Dr. V. G. Chokkalingam, M.A.,Ph.D.,Dip In JMC on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.,Dip In JMC



# ತಿರುಪತಿ,
# ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**07-02-2026 ರಿಂದ 17-02-2026 ರ ವರೆಗೆ**

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 07-02-2026 | ಶನಿವಾರ | --------------- | ಮೂಷಿಕವಾಹನದ ಮೇಲೆ ವಿನಾಯಕಸ್ವಾಮಿ ಅಂಕುರಾರ್ಪಣೆ |
| 08-02-2026 | ಭಾನುವಾರ | (ಪಲ್ಲಕ್ಕಿ ಉತ್ಸವ) ಧ್ವಜಾರೋಹಣ | ಹಂಸವಾಹನ |
| 09-02-2026 | ಸೋಮವಾರ | ಸೂರ್ಯಪ್ರಭವಾಹನ | ಚಂದ್ರಪ್ರಭ ವಾಹನ |
| 10-02-2026 | ಮಂಗಳವಾರ | ಭೂತವಾಹನ | ಸಿಂಹ ವಾಹನ |
| 11-02-2026 | ಬುಧವಾರ | ಮಕರವಾಹನ | ಶೇಷವಾಹನ |
| 12-02-2026 | ಗುರುವಾರ | ತಿರುಚ್ಚಿ ಉತ್ಸವ | ಅಧಿಕಾರ ನಂದಿ ವಾಹನ |
| 13-02-2026 | ಶುಕ್ರವಾರ | ವ್ಯಾಘ್ರವಾಹನ | ಗಜವಾಹನ |
| 14-02-2026 | ಶನಿವಾರ | ಕಲ್ಪವೃಕ್ಷವಾಹನ | ಅಶ್ವವಾಹನ |
| 15-02-2026 | ಭಾನುವಾರ | ರಥೋತ್ಸವ | ನಂದಿವಾಹನ (ಮಹಾಶಿವರಾತ್ರಿ) |
| 16-02-2026 | ಸೋಮವಾರ | ಪುರುಷಾಮೃಗವಾಹನ | ಕಲ್ಯಾಣೋತ್ಸವ, ತಿರುಚ್ಚಿ ಉತ್ಸವ |
| 17-02-2026 | ಮಂಗಳವಾರ | ಸೂರ್ಯಪ್ರಭವಾಹನದಲ್ಲಿ ನಟರಾಜಸ್ವಾಮಿ , ತ್ರಿಶೂಲಸ್ನಾನ | ಧ್ವಜಾವರೋಹಣ, ರಾವಣಾಸುರವಾಹನ |



# ತರಿಗೊಂಡ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿಯವರ ಬ್ರಹ್ಮೋತ್ಸವಗಳು

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 23-02-2026 | ಸೋಮವಾರ | -------------- | ಅಂಕುರಾರ್ಪಣೆ |
| 24-02-2026 | ಮಂಗಳವಾರ | ಧ್ವಜಾರೋಹಣ | ------------ |
| 28-02-2026 | ಶನಿವಾರ | -------------- | ಗರುಡವಾಹನ |
| 03-03-2026 | ಮಂಗಳವಾರ | ರಥೋತ್ಸವ, ಮುತ್ತಿನಚಪ್ಪರವಾಹನ | ----------- |
| 04-03-2026 | ಬುಧವಾರ | ತೀರ್ಥವಾರಿ, ಅವಭೃಥಂ, ಚಕ್ರಸ್ನಾನ | ಧ್ವಜಾವರೋಹಣ |




SAPTHAGIRI (KANNADA) SPIRITUAL I
LLUSTRATED MONTHLY Published by
Tirumala Tirupati Devasthanams Printing
on 25-01–2026 and Posting at Tirupati
RMS.Regd. with the Registrar of News
papers for India under
RNI.No.APKAN/2021/80589. Postal
Regd.No.TRP/156/2024-2026 "Licenced to
Post Without Prepayment
No. PMGK/RNP/WPP-04(6) / 2024-2026"
Posting on 1st of Every Month

ಕುಲಶೇಖರ್
ಆಳ್ವಾರ್
ತಿರು ನಕ್ಷತ್ರ
28-02-2026

ಭವಜಲಧಿಗತಾನಾಂ
ದ್ವಂದ್ವ ವಾತಾಹತಾನಾಂ
ಸುತದುಹಿತೃ ಕಳತ್ರತ್ರಾಣ
ಭಾರಾರ್ದಿತಾನಾಮ್
ವಿಷಮ ವಿಷಯತೋಯೇ
ಮಜ್ಜತಾ ಮಪ್ಲವಾನಾಮ್
ಭವತಿ ಶರಣಮೇಕೋ
ವಿಷ್ಣುಪೋತೋ ನರಾಣಾಮ್

- ಮುಕುಂದ ಮಾಲೆ